**ಸೇವೆ, ಉತ್ತಮ ಆಡಳಿತ ಮತ್ತು ಬಡವರ ಕಲ್ಯಾಣದ 11 ವರ್ಷಗಳು**

\- ರೈಲ್ವೆ, ವಾರ್ತಾ ಮತ್ತು ಪ್ರಸಾರ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು.



ವಿಶೇಷ ಲೇಖನ

ಪುಟಗಳು 6-9

ಸಂಪುಟ 6, ಸಂಚಿಕೆ 01

ಜುಲೈ 1-15, 2025

ಉಚಿತ ವಿತರಣೆಗಾಗಿ

# ನ್ಯೂ ಇಂಡಿಯಾ ಸಮಾಚಾರ



# ಆರ್ಥಿಕತೆಗಾಗಿ ದಾಪುಗಾಲು

ಭಾರತವು ಜಪಾನ್ ಅನ್ನು ಹಿಂದಿಕ್ಕಿ ನಾಲ್ಕನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ ಮತ್ತು 4.19 ಟ್ರಿಲಿಯನ್ ಡಾಲರ್ ಜಿಡಿಪಿಯೊಂದಿಗೆ ಹೊಸ ಇತಿಹಾಸವನ್ನು ಸೃಷ್ಟಿಸುತ್ತಿದೆ.

**ವಿಶ್ವ ಜನಸಂಖ್ಯಾ ದಿನ - ಜುಲೈ 11**

**ಜನಗಣತಿ 2027**

# ನಾವು, ಭಾರತದ ಜನರು, 16 ವರ್ಷಗಳ ನಂತರ ಜನಗಣತಿಯ ಭಾಗವಾಗುತ್ತೇವೆ

*ವಿಶ್ವಸಂಸ್ಥೆಯು 1989 ರಲ್ಲಿ, ವಿಶ್ವ ಜನಸಂಖ್ಯಾ ದಿನವನ್ನು ಆಚರಿಸುವುದಾಗಿ ಘೋಷಿಸಿತು; ಅಂದಿನಿಂದ, ಈ ದಿನವನ್ನು ಪ್ರತಿವರ್ಷ ಜುಲೈ 11 ರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ವಿಶ್ವದ ಜನಸಂಖ್ಯೆಯ ಐದನೇ ಒಂದು ಭಾಗದಷ್ಟು ಜನರು ಭಾರತದಲ್ಲಿ ವಾಸಿಸುತ್ತಿದ್ದಾರೆ. ಇತ್ತೀಚೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟದ ರಾಜಕೀಯ ವ್ಯವಹಾರಗಳ ಸಮಿತಿಯು ಮುಂಬರುವ ಜನಗಣತಿಯಲ್ಲಿ ಜಾತಿವಾರು ಗಣತಿಯನ್ನು ಸೇರಿಸಲು ನಿರ್ಧರಿಸಿತು. ಈ ನಿರ್ಧಾರವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳನ್ನು ಸಬಲೀಕರಣಗೊಳಿಸುತ್ತದೆ ಮತ್ತು ಸಮಗ್ರತೆಯನ್ನು ಉತ್ತೇಜಿಸುತ್ತದೆ...*



**ಜನಗಣತಿ 2021**

ಇದನ್ನು ಎರಡು ಹಂತಗಳಲ್ಲಿ ನಡೆಸಲು ಪ್ರಸ್ತಾಪಿಸಲಾಗಿತ್ತು, ಆದರೆ ಜಾಗತಿಕ ಕೋವಿಡ್ -19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ ಜನಗಣತಿಯನ್ನು ಮುಂದೂಡಬೇಕಾಯಿತು.





## ಜನಗಣತಿ-2027

- ಎರಡು ಹಂತಗಳಲ್ಲಿ ನಡೆಸಲಾಗುವುದು.
- ಲಡಾಖ್ ಮತ್ತು ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳ ಹಿಮದಿಂದ ಆವೃತವಾದ ಸಮತಟ್ಟಲ್ಲದ ಪ್ರದೇಶಗಳಿಗೆ ಉಲ್ಲೇಖ ದಿನಾಂಕ ಅಕ್ಟೋಬರ್ 1, 2026 ಆಗಿರುತ್ತದೆ.
- ದೇಶದ ಉಳಿದ ಭಾಗಗಳಿಗೆ ಉಲ್ಲೇಖ ದಿನಾಂಕ ಮಾರ್ಚ್ 1, 2027 ಆಗಿರುತ್ತದೆ.

# ನ್ಯೂ ಇಂಡಿಯಾ ಸಮಾಚಾರ

ಸಂಪುಟ 6, ಸಂಚಿಕೆ 01 | ಜುಲೈ 1-15, 2025

ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಸಲಹಾ ಸಂಪಾದಕ
**ವಿಭೋರ್ ಶರ್ಮಾ**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಪ್ರಧಾನ ವಿನ್ಯಾಸಕರು
**ಶ್ಯಾಮ್ ತಿವಾರಿ**

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




**13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ**
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

**'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ @NISPIBIndia ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ**

## ಒಳ ಪುಟಗಳಲ್ಲಿ



### ಆರ್ಥಿಕತೆಯ ಅಮೃತ ಯಾತ್ರೆ

ಸ್ವಾತಂತ್ರ್ಯದ 67 ವರ್ಷಗಳ ನಂತರ, 2014 ರವರೆಗೆ, ದೇಶದ ಜಿಡಿಪಿ ಕೇವಲ 2.04 ಟ್ರಿಲಿಯನ್ ಡಾಲರ್ ತಲುಪಲು ಸಾಧ್ಯವಾಯಿತು. ದೇಶದ ಆರ್ಥಿಕ ಆರೋಗ್ಯವನ್ನು ಬಲಪಡಿಸುವುದಲ್ಲದೆ, ಬಲಿಷ್ಠ ಆರ್ಥಿಕತೆಯನ್ನು ನಿರ್ಮಿಸಲು ಅಡಿಪಾಯ ಹಾಕುವ ಸರಣಿ ಸುಧಾರಣೆಗಳ ಅಗತ್ಯವಿತ್ತು...

| 14-27

### ಹೊಸ ಎತ್ತರಕ್ಕೆ ಏರಿದ ಜಮ್ಮು ಮತ್ತು ಕಾಶ್ಮೀರದ ಮೂಲಸೌಕರ್ಯ



ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತದ ಮೂಲಸೌಕರ್ಯದ ಹೊಸ ಅದ್ಭುತಗಳಾಗಿರುವ ಉಧಂಪುರ-ಶ್ರೀನಗರ ಬಾರಾಮುಲ್ಲಾ ರೈಲು ಸಂಪರ್ಕ, ವಿಶ್ವದ ಅತಿ ಎತ್ತರದ ಚೆನಾಬ್ ರೈಲು ಸೇತುವೆ ಮತ್ತು ಮೊದಲ ಕೇಬಲ್-ಸ್ಟೇಯ್ಡ್ ಸೇತುವೆಯಾದ ಅಂಜಿ ಖಾಡ್ ಅನ್ನು ಉದ್ಘಾಟಿಸಿದರು...

| 28-31

**ಸುದ್ದಿ ತುಣುಕುಗಳು** | 4-5

**11 ವರ್ಷಗಳ ಸಮಗ್ರ ಪ್ರಗತಿ**
ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಅವರ ವಿಶೇಷ ಲೇಖನ | 6-9

**ವ್ಯಕ್ತಿತ್ವ - ಚಂದ್ರಶೇಖರ್**
ರಾಜಕೀಯದ ಯುವ ನೇತಾರ | 10

**ಭಾರತದ ಧ್ವನಿಯನ್ನು ಜಗತ್ತಿನ ಮುಂದಿಟ್ಟ ಸರ್ವಪಕ್ಷ ನಿಯೋಗ**
ನಿಯೋಗದ ಸದಸ್ಯರನ್ನು ಭೇಟಿ ಮಾಡಿದ ಪ್ರಧಾನ ಮಂತ್ರಿ ಮೋದಿ | 11-13

**ಕೌಶಲ ಭಾರತ್ ಅಭಿಯಾನ**
ಕೌಶಲ್ಯ ಅಭಿವೃದ್ಧಿ... ಭವಿಷ್ಯದ ಮಾರ್ಗಸೂಚಿ | 32-34

**ಕೇಂದ್ರ ಸಚಿವ ಸಂಪುಟದ ನಿರ್ಣಯಗಳು**
ಸಂಪರ್ಕವನ್ನು ಹೆಚ್ಚಿಸಲು ಮತ್ತು ದೂರವನ್ನು ತಗ್ಗಿಸಲು ಎರಡು ರೈಲ್ವೆ ಯೋಜನೆಗಳಿಗೆ ಅನುಮೋದನೆ | 35

**ಐಸಿಡಿಆರ್‌ಐ 2025**
ಇದರಿಂದಾಗಿ ಜಗತ್ತು ವಿಪತ್ತುಗಳ ವಿರುದ್ಧ ಒಟ್ಟಾಗಿ ನಿಲ್ಲುತ್ತದೆ | 36-37

**ಮಧುಬನಿ ಕಲಾವಿದರಿಗೆ ಆತಿಥ್ಯ ನೀಡಿದ ರಾಷ್ಟ್ರಪತಿ ಭವನ**
ಕಲಾವಿದರನ್ನು ಭೇಟಿಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು | 40


**ವಿಶ್ವ ವಾಯು ಸಾರಿಗೆ ಶೃಂಗಸಭೆ**

### ಪ್ರಾದೇಶಿಕ ಸಂಪರ್ಕದಿಂದ ಜಾಗತಿಕ ವಿಸ್ತರಣೆಯವರೆಗೆ ವಾಯುಯಾನ ನಕ್ಷೆಯಲ್ಲಿ ಭಾರತದ ದೈತ್ಯ ಜಿಗಿತ



ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಘದ ಸಭೆ ಮತ್ತು ವಿಶ್ವ ವಾಯು ಸಾರಿಗೆ ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಿಶ್ವದ ಪ್ರಮುಖ ವಿಮಾನಯಾನ ಕಂಪನಿಗಳಿಗೆ ಭಾರತದಲ್ಲಿ ಹೂಡಿಕೆಗೆ ಉತ್ತಮ ಅವಕಾಶವಿದೆ ಎಂದು ಹೇಳಿದರು.

| 38-39

**Published & Printed By:** Kanchan Prasad, Director General, on behalf of Central Bureau Of Communication.
**Printed At:** Kaveri Print Process Pvt. Ltd. A-104, Sec-65, Noida-201301 U.P.
**Communication Address:** Room No–316, National Media Centre, Raisina Road, New Delhi-110001.
**e-mail:** response-nis@pib.gov.in, **RNI No.:** DELKAN/2020/78828

# ಸಂಪಾದಕೀಯ

## ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗುವ ಹಾದಿಯಲ್ಲಿದೆ

***ಶುಭಾಶಯಗಳು!***

ಸ್ವಾತಂತ್ರ್ಯದ ಆರು ದಶಕಗಳ ನಂತರವೂ, ಭಾರತವು ವಿಶ್ವದ 11 ನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿತ್ತು, ಆದರೆ ಕಳೆದ 11 ವರ್ಷಗಳ ಕ್ರಾಂತಿಕಾರಿ ಸುಧಾರಣೆಗಳಿಂದಾಗಿ, ಅದು ಈಗ ನಾಲ್ಕನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ವರದಿಯು ಕಳೆದ ದಶಕದಲ್ಲಿ, ತನ್ನ ಜಿಡಿಪಿಯನ್ನು ದ್ವಿಗುಣಗೊಳಿಸಿದ ವಿಶ್ವದ ಏಕೈಕ ಪ್ರಮುಖ ಆರ್ಥಿಕ ರಾಷ್ಟ್ರ ಭಾರತವಾಗಿರುತ್ತದೆ. ಇದರ ಅತಿದೊಡ್ಡ ಪರಿಣಾಮವೆಂದರೆ 25 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ, ಇದು ಹೊಸ ಮಧ್ಯಮ ವರ್ಗವನ್ನು ಸೃಷ್ಟಿಸಿದೆ. ಈ ನವ-ಮಧ್ಯಮ ವರ್ಗವು ಗಮನಾರ್ಹ ಕೊಡುಗೆ ನೀಡುವ ಮೂಲಕ ಆರ್ಥಿಕತೆಯನ್ನು ರೋಮಾಂಚಕಗೊಳಿಸುತ್ತಿದೆ. ದೂರದೃಷ್ಟಿಯ ಆರ್ಥಿಕ ನೀತಿಗಳೊಂದಿಗೆ ವಿಕಸಿತ ಭಾರತ @2047ರ ಸಂಕಲ್ಪದೊಂದಿಗೆ ರಾಷ್ಟ್ರವು ಅಮೃತ ಕಾಲದತ್ತ ಪ್ರಯಾಣ ಮುಂದುವರಿಸಿದೆ..

ಜಗತ್ತು ಭಾರತದ ಬಗ್ಗೆ ಹೆಚ್ಚಿನ ನಿರೀಕ್ಷೆಗಳನ್ನು ಇಟ್ಟುಕೊಂಡಿದೆ. ಇದು ವೇಗವಾಗಿ ಮತ್ತು ನಿರ್ಭೀತಿಯಿಂದ ಸಾಗುತ್ತಿರುವ ಭಾರತದ ಶತಮಾನ ಎಂದು ಈಗ ಜಗತ್ತು ಗುರುತಿಸಿದೆ.

ಭಾರತದ ಸಾಧನೆಗಳು ಮತ್ತು ಯಶಸ್ಸುಗಳು ಇಡೀ ಜಗತ್ತಿನಲ್ಲಿ ಹೊಸ ಭರವಸೆಯನ್ನು ಹುಟ್ಟುಹಾಕಿವೆ. ಕಳೆದ ದಶಕದಲ್ಲಿ, ಭಾರತವು ಅತಿದೊಡ್ಡ ಆರ್ಥಿಕ ರಾಷ್ಟ್ರಗಳ ಸಾಲಿನಲ್ಲಿ 11 ನೇ ಸ್ಥಾನದಿಂದ 5ನೇ ಸ್ಥಾನ ಪಡೆದಿದೆ. ಭಾರತವು ಈಗ ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ ಎಂದು ಇತ್ತೀಚೆಗೆ ಐಎಂಎಫ್ ವರದಿ ಮಾಡಿದೆ. ಅಲ್ಲದೆ, ಭಾರತವು ಈಗ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗುವತ್ತ ವೇಗವಾಗಿ ಸಾಗುತ್ತಿದೆ. ಆರ್ಥಿಕತೆಯ ದೈತ್ಯ ಜಿಗಿತ ಮತ್ತು ಒಂದು ರಾಷ್ಟ್ರ-ಒಂದು ತೆರಿಗೆ ವ್ಯವಸ್ಥೆ - ಜಿ ಎಸ್ ಟಿಯ 8ನೇ ವಾರ್ಷಿಕೋತ್ಸವವು ಈ ಬಾರಿ ನಮ್ಮ ಮುಖಪುಟ ಲೇಖನವಾಗಿದೆ.

ವ್ಯಕ್ತಿತ್ವ ವಿಭಾಗದಲ್ಲಿ, ಮಾಜಿ ಪ್ರಧಾನ ಮಂತ್ರಿ ಚಂದ್ರಶೇಖರ್ ಅವರ ಪುಣ್ಯತಿಥಿಯಂದು ಅವರ ಬಗ್ಗೆ ತಿಳಿಯಬಹುದು. ಕೇಂದ್ರ ಸಚಿವ ಸಂಪುಟದ ನಿರ್ಣಯಗಳು, ಜಮ್ಮು ಮತ್ತು ಕಾಶ್ಮೀರದ ರೈಲು ಸಂಪರ್ಕ ಹಾಗೂ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಆಪರೇಷನ್ ಸಿಂಧೂರ ಬಗ್ಗೆ ಭಾರತದ ನಿಲುವನ್ನು ಮುಂದಿಡಲು ವಿದೇಶಕ್ಕೆ ಕಳುಹಿಸಲಾದ ಸರ್ವಪಕ್ಷ ನಿಯೋಗ ಸ್ವದೇಶಕ್ಕೆ ಮರಳಿದ ನಂತರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ನಡೆದ ಸಭೆಯ ವಿಷಯವನ್ನೂ ಈ ಸಂಚಿಕೆಯಲ್ಲಿ ಸೇರಿಸಲಾಗಿದೆ.

ಇದಲ್ಲದೆ, ಜುಲೈ 11 ರಂದು ಆಚರಿಸಲಾಗುವ ವಿಶ್ವ ಜನಸಂಖ್ಯಾ ದಿನಾಚರಣೆಯ ವಿಶೇಷ ವಸ್ತುವಿಷಯ ಮತ್ತು ಭಾರತ ರತ್ನ ಡಾ.ಬಿಧಾನ್ ಚಂದ್ರ ರಾಯ್ ಅವರ ಜನ್ಮ ದಿನಾಚರಣೆಯಂದು ಆಚರಿಸಲಾಗುವ ವೈದ್ಯರ ದಿನಾಚರಣೆ ಕುರಿತ ಮಾಹಿತಿ ಹಿಂಭಾಗದ ರಕ್ಷಾಪುಟದಲ್ಲಿರುವುದು ಇತರ ಮುಖ್ಯಾಂಶಗಳಾಗಿವೆ.

*ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಲೇ ಇರಿ.*

**ಧೀರೇಂದ್ರ ಓಝಾ**

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ




**ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಇಡೀ ತಂಡಕ್ಕೆ ಹೃತ್ಪೂರ್ವಕ ಧನ್ಯವಾದಗಳು**

ನಾನು ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಗುಜರಾತಿ ಆವೃತ್ತಿಯನ್ನು ಸ್ವೀಕರಿಸಿದೆ. ಈ ನಿಯತಕಾಲಿಕದಲ್ಲಿ ಪ್ರಸ್ತುತ ವ್ಯವಹಾರಗಳು, ವಿದೇಶಾಂಗ ನೀತಿ, ವ್ಯಕ್ತಿತ್ವಗಳು ಮತ್ತು ಇತರ ಕಾರ್ಯಕ್ರಮಗಳ ಬಗ್ಗೆ ಓದಲು ನನಗೆ ಅವಕಾಶ ಸಿಕ್ಕಿತು. ಈ ನಿಯತಕಾಲಿಕದ ಇಡೀ ತಂಡಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಸಂಚಿಕೆಯಿಂದ ನನಗೆ ಇಷ್ಟವಾದ ವಸ್ತುನಿಷ್ಠ ಲೇಖನಗಳನ್ನು ಸಂಗ್ರಹಿಸಲು ನಾನು ನಿರ್ಧರಿಸಿದ್ದೇನೆ.

**ಅಮರಭಾಯಿ ಹರ್ಶೇಂಗಾಭಾಯಿ ಪಟೇಲ್**
**tramarpatel@gmail.com**

**ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವು ಯೋಜನೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ**

ನಾನು ಸುಮಾರು ಒಂದು ವರ್ಷದಿಂದ ನ್ಯೂ ಇಂಡಿಯಾ ಸಮಾಚಾರ ಪಾಕ್ಷಿಕ ಪತ್ರಿಕೆಯ ಓದುಗನಾಗಿದ್ದೇನೆ. ನಿಯತಕಾಲಿಕದಲ್ಲಿ ಪ್ರಕಟವಾದ ಲೇಖನಗಳು ಭಾರತ ಸರ್ಕಾರದ ವಿವಿಧ ಇಲಾಖೆಗಳು ನಡೆಸುವ ಯೋಜನೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸುತ್ತವೆ. ನಿಯತಕಾಲಿಕವು ನನಗೆ ಹೊಸ ಯೋಜನೆಗಳು ಮತ್ತು ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಪರಿಚಯಿಸಿದೆ. ಪತ್ರಿಕೆಯ ಭಾಷೆ ನನಗೆ ಹಿತವಾಗಿದೆ

**kumar.diwakar16@gmail.com**

**ನ್ಯೂ ಇಂಡಿಯಾ ಸಮಾಚಾರ ಜ್ಞಾನವನ್ನು ಹೆಚ್ಚಿಸುವ ನಿಯತಕಾಲಿಕ**

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಏಪ್ರಿಲ್ 2025 ರ ಸಂಚಿಕೆಯನ್ನು ಮರಾಠಿ ಭಾಷೆಯಲ್ಲಿ ಓದಲು ನನಗೆ ಅವಕಾಶ ಸಿಕ್ಕಿತು. ಈ ನಿಯತಕಾಲಿಕವು ಜನರಿಗೆ ಮಾಹಿತಿಯುಕ್ತ ಮತ್ತು ಸತ್ಯಾನಿಷ್ಠ ಲೇಖನಗಳನ್ನು ನೀಡುತ್ತದೆ. ಇದು ಸರ್ಕಾರದ ನೀತಿಗಳು ಮತ್ತು ಯೋಜನೆಗಳ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ.
ಈ ನಿಯತಕಾಲಿಕದಲ್ಲಿ ಮಾಹಿತಿಯುಕ್ತ ಲೇಖನಗಳನ್ನು ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು.

**ಎಸ್.ಪಿ. ಠಾಕೂರ್**
**spthakurfamily@gmail.com**

**ನ್ಯೂ ಇಂಡಿಯಾ ಸಮಾಚಾರ ಒಂದು ವಸ್ತುನಿಷ್ಠ ನಿಯತಕಾಲಿಕವಾಗಿದೆ**

ನಾನು ಇತ್ತೀಚೆಗೆ ನ್ಯೂ ಇಂಡಿಯಾ ಸಮಾಚಾರ ಪತ್ರಿಕೆಯ ಕನ್ನಡ ಆವೃತ್ತಿಯನ್ನು ಸ್ವೀಕರಿಸಿದೆ. ನಾನು ಈ ನಿಯತಕಾಲಿಕದ ಲೇಖನಗಳನ್ನು ಓದಿದೆ. ಇದು ಉತ್ತಮ ನಿಯತಕಾಲಿಕವಾಗಿದೆ. ಈ ನಿಯತಕಾಲಿಕವು ವಸ್ತುನಿಷ್ಠ ಮತ್ತು ಆಸಕ್ತಿದಾಯಕವಾಗಿದೆ.

**ವಸಂತಕುಮಾರ್ ಪೆರ್ಲ**
**vasanthkumarber@kimail.com**

**ಇದು ಸರ್ಕಾರದ ಅಭಿವೃದ್ಧಿ ಉಪಕ್ರಮಗಳ ಬಗ್ಗೆ ಒಳನೋಟಗಳನ್ನು ನೀಡುತ್ತದೆ**

ನಾನು ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕವನ್ನು ನಿಯಮಿತವಾಗಿ ಓದುತ್ತೇನೆ. ಇದು ಮಾಹಿತಿಯುಕ್ತವಾಗಿದೆ. ಇದು ಸರ್ಕಾರದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಇದು ನನ್ನ ವೈಯಕ್ತಿಕ ಅಭಿವೃದ್ಧಿ, ಜ್ಞಾನ ಮತ್ತು ಕೌಶಲ್ಯ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ನಾನು ಈ ನಿಯತಕಾಲಿಕವನ್ನು ಓದಲು ಮತ್ತು ಅದರಿಂದ ಕಲಿಯಲು ಇಷ್ಟಪಡುತ್ತೇನೆ.

**mr.devkant@gmail.com**

**Communication Address :** Room No–316, National Media Centre, Raisina Road, New Delhi -110001. **e-Mail:** response-nis@pib.gov.in

Scan the QR code to listen to New India Samachar on All India Radio FM Gold every Saturday-Sunday from 3:00 PM to 3:15 PM.

# ಸುದ್ದಿ ತುಣುಕುಗಳು

## ರೈಲ್ವೆ ತತ್ಕಾಲ್ ಟಿಕೆಟ್ ಬುಕಿಂಗ್ ಸುಲಭ: ಏಜೆಂಟರಿಗೆ ನಿರ್ಬಂಧ




ರೈಲ್ವೆ ಪ್ರಯಾಣಿಕರಿಗೆ ತತ್ಕಾಲ್ ಟಿಕೆಟ್ ಗಳು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಲಭ್ಯವಿರುವುದನ್ನು ಖಚಿತಪಡಿಸಿಕೊಳ್ಳಲು ರೈಲ್ವೆ ಸಚಿವಾಲಯವು ತತ್ಕಾಲ್ ಟಿಕೆಟ್ ಬುಕಿಂಗ್ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಮಾಡಿದೆ. ಜುಲೈ 1 ರಿಂದ, ಆಧಾರ್ ಪರಿಶೀಲನೆ ಬಳಿಕವಷ್ಟೇ ಬಳಕೆದಾರರು ಭಾರತೀಯ ರೈಲ್ವೆ ಕ್ಯಾಟರಿಂಗ್ ಮತ್ತು ಪ್ರವಾಸೋದ್ಯಮ ನಿಗಮದ (ಐಆರ್‌ಸಿಟಿಸಿ) ಅಂತರ್ಜಾಲ ತಾಣ ಮತ್ತು ಆಫ್ ನಲ್ಲಿ ತತ್ಕಾಲ್ ಟಿಕೆಟ್ ಗಳನ್ನು ಕಾಯ್ದಿರಿಸಬಹುದು. ಅಲ್ಲದೆ, ಗಣಕೀಕೃತ ಪ್ರಯಾಣಿಕರ ಮುಂಗಡ ಟಿಕೆಟ್ ಕಾಯ್ದಿರಿಸುವಿಕೆ ವ್ಯವಸ್ಥೆ (ಪಿಆರ್‌ಎಸ್) ಕೌಂಟರುಗಳು ಮತ್ತು ಅಧಿಕೃತ ಏಜೆಂಟರ ಮೂಲಕ ತತ್ಕಾಲ್ ಟಿಕೆಟ್ ಗಳನ್ನು ಕಾಯ್ದಿರಿಸಲು ಜುಲೈ 15 ರಿಂದ ಬಳಕೆದಾರರ ಮೊಬೈಲ್ ಸಂಖ್ಯೆಗೆ ಒಟಿಪಿ ಪರಿಶೀಲನೆಯ ಅಗತ್ಯವಿರುತ್ತದೆ. ತತ್ಕಾಲ್ ಟಿಕೆಟ್ ಗಳ ಬೃಹತ್ ಬುಕಿಂಗ್ ಅನ್ನು ತಡೆಗಟ್ಟಲು, ಬುಕಿಂಗ್ ವಿಂಡೋದ ಮೊದಲ 30 ನಿಮಿಷಗಳಲ್ಲಿ ಟಿಕೆಟ್ ಕಾಯ್ದಿರಿಸಲು ಅಧಿಕೃತ ಟಿಕೆಟಿಂಗ್ ಏಜೆಂಟರಿಗೆ ರೈಲ್ವೆ ಅನುಮತಿಸಿಲ್ಲ. ಎಸಿ ವರ್ಗಗಳಿಗೆ ಬೆಳಗ್ಗೆ 10 ರಿಂದ 10.30 ರವರೆಗೆ ಮತ್ತು ಎಸಿಯೇತರ ವರ್ಗಗಳಿಗೆ ಬೆಳಗ್ಗೆ 11 ರಿಂದ 11.30 ರವರೆಗೆ ಈ ನಿರ್ಬಂಧ ಅನ್ವಯಿಸುತ್ತದೆ. ಐಆರ್ ಸಿಟಿಸಿ ಬಳಕೆದಾರರು ತಮ್ಮ ವೈಯಕ್ತಿಕ ವಿವರಗಳನ್ನು ತಮ್ಮ ಆಧಾರ್ ಸಂಖ್ಯೆಯೊಂದಿಗೆ ಲಿಂಕ್ ಮಾಡಬೇಕೆಂದು ರೈಲ್ವೆ ಪ್ರಯಾಣಿಕರಿಗೆ ಸೂಚಿಸಲಾಗಿದೆ.

## ದೆಹಲಿಯನ್ನು ಸ್ವಚ್ಛ ಮತ್ತು ಹಸಿರಾಗಿಸುವ ಎಲೆಕ್ಟ್ರಿಕ್ ಬಸ್ಸುಗಳು

ದೇಶದ ರಾಜಧಾನಿ ದೆಹಲಿಯನ್ನು ಸ್ವಚ್ಛ ಮತ್ತು ಹಸಿರಾಗಿಸಲು ಕೇಂದ್ರ ಸರ್ಕಾರವು ದೆಹಲಿ ಸರ್ಕಾರದೊಂದಿಗೆ ನಿರಂತರವಾಗಿ ಪ್ರಯತ್ನಗಳನ್ನು ಮಾಡುತ್ತಿದೆ. ಕೈಗಾರಿಕೆಗಳಲ್ಲಿ ನಿಯಮಗಳು ಮತ್ತು ಷರತ್ತುಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳುವುದರಿಂದ ಹಿಡಿದು ಯಮುನಾ ನದಿಯನ್ನು ಸ್ವಚ್ಛಗೊಳಿಸುವವರೆಗೆ ಅಥವಾ ಸಾರಿಗೆ ವ್ಯವಸ್ಥೆಯಲ್ಲಿ ಹಸಿರು ಶಕ್ತಿಯನ್ನು ಬಳಸುವವರೆಗೆ, ಮಾಲಿನ್ಯವನ್ನು ತಗ್ಗಿಸಲು ಸರ್ಕಾರವು ಎಲ್ಲಾ ಕ್ಷೇತ್ರಗಳಲ್ಲಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಸರಣಿಯಲ್ಲಿ, ವಿಶ್ವ ಪರಿಸರ ದಿನದಂದು, 'ಜೂನ್ 5' ರಂದು, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ದೆಹಲಿ-ಎನ್.ಸಿ.ಆರ್.ನಲ್ಲಿ ಪ್ರಯಾಣಿಸುವ ಜನರಿಗೆ ದೀರ್ಘಕಾಲೀನ ಅಭಿವೃದ್ಧಿ ಮತ್ತು ಹಸಿರು ನಗರ ಸಾರಿಗೆಯನ್ನು ಉತ್ತೇಜಿಸುವ ಉದ್ದೇಶದಿಂದ ಎಲೆಕ್ಟ್ರಿಕ್ ಬಸ್ ಗಳಿಗೆ ಹಸಿರು ನಿಶಾನೆ ತೋರಿದರು. ಈಗ 200 ಹೆಚ್ಚುವರಿ ಹೊಸ ಎಲೆಕ್ಟ್ರಿಕ್ ಬಸ್ಸುಗಳು ದೆಹಲಿಯ ರಸ್ತೆಗಳಲ್ಲಿ ಚಲಿಸಲಿವೆ. ಕಳೆದ ವರ್ಷ, ವಿಶ್ವ ಪರಿಸರ ದಿನಾಚರಣೆಯ ಸಂದರ್ಭದಲ್ಲಿ, ಪ್ರಧಾನ ಮಂತ್ರಿ ಮೋದಿ ಅವರು ಅರಾವಳಿಯ ಭಾಗವಾದ 'ದೆಹಲಿ ರಿಡ್ಜ್' ನಲ್ಲಿರುವ ಬುದ್ಧ ಜಯಂತಿ ಉದ್ಯಾನವನದಿಂದ 'ಏಕ್ ಪೆಡ್ ಮಾ ಕೆ ನಾಮ್' ಅಭಿಯಾನವನ್ನು ಪ್ರಾರಂಭಿಸಿದ್ದರು.



## ಮೊದಲ ಜಲಾಂತರ್ಗಾಮಿ ನಿಗ್ರಹ ಯುದ್ಧ ನೌಕೆ 'ಅರ್ನಾಲಾ' ಸೇರ್ಪಡೆ



ಕಡಲ ಕ್ಷೇತ್ರದ ಸವಾಲುಗಳನ್ನು ಎದುರಿಸಲು ಮತ್ತು ಹೊರಹೊಮ್ಮುವ ಬೆದರಿಕೆಗಳಿಂದ ಭಾರತವನ್ನು ರಕ್ಷಿಸಲು ಮೊದಲ ಜಲಾಂತರ್ಗಾಮಿ ನಿಗ್ರಹ ಯುದ್ಧ ಶಾಲೋ ವಾಟರ್ ಕ್ರಾಫ್ಟ್ 'ಅರ್ನಾಲಾ' ಅನ್ನು ಜೂನ್ 18 ರಂದು ವಿಶಾಖಪಟ್ಟಣಂನಲ್ಲಿ ನೌಕಾಪಡೆಗೆ ಸೇರ್ಪಡೆ ಮಾಡಲಾಯಿತು. 1,490 ಟನ್ ತೂಕದ 77.6 ಮೀಟರ್ ಉದ್ದದ ಯುದ್ಧನೌಕೆ ಭಾರತೀಯ ನೌಕಾಪಡೆಯ ಅತಿದೊಡ್ಡ ಡೀಸೆಲ್ ಎಂಜಿನ್-ವಾಟರ್ಜೆಟ್ ಸಂಯೋಜನೆ ಚಾಲಿತ ಯುದ್ಧನೌಕೆಯಾಗಿದೆ. ಈ ಹಡಗನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗಿದೆ. ರಕ್ಷಣಾ ಉತ್ಪಾದನೆಯಲ್ಲಿ ಆತ್ಮನಿರ್ಭರ ಭಾರತ್ ಉಪಕ್ರಮದ ಯಶಸ್ಸಿಗೆ 'ಅರ್ನಾಲಾ' ಸಾಕ್ಷಿಯಾಗಿದೆ, ಏಕೆಂದರೆ ಇದನ್ನು ಶೇ.80ರಷ್ಟು ಸ್ಥಳೀಯ ತಂತ್ರಜ್ಞಾನದೊಂದಿಗೆ ನಿರ್ಮಿಸಲಾಗಿದೆ. 55 ಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಈ ಯೋಜನೆಯಲ್ಲಿ ಭಾಗಿಯಾಗಿವೆ, ದೇಶೀಯ ಉದ್ಯಮವನ್ನು ಉತ್ತೇಜಿಸುತ್ತವೆ ಮತ್ತು ಸಂಬಂಧಿತ ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸುತ್ತವೆ. ಇದು ಭಾರತದ ನೌಕಾ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ, ಕರಾವಳಿ ಭದ್ರತೆಯನ್ನು ಬಲಪಡಿಸುತ್ತದೆ ಮತ್ತು ವ್ಯೂಹಾತ್ಮಕವಾಗಿ ಪ್ರಮುಖವಾದ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಸ್ವಾವಲಂಬಿ ಕಡಲ ಶಕ್ತಿಯಾಗಿ ದೇಶದ ಸ್ಥಾನವನ್ನು ಮತ್ತಷ್ಟು ಬಲಪಡಿಸುತ್ತದೆ.

## ನೈಸರ್ಗಿಕ ಕೃಷಿಯನ್ನು ಅಳವಡಿಸಿಕೊಳ್ಳಲಿರುವ 18 ಲಕ್ಷಕ್ಕೂ ಹೆಚ್ಚು ರೈತರು

ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು 'ವಿಕಸಿತ ಕೃಷಿ ಸಂಕಲ್ಪ ಅಭಿಯಾನ'ದ ಸಮಾರೋಪದಲ್ಲಿ ಮಾತನಾಡಿ, ಈ ವರ್ಷ ದೇಶದಲ್ಲಿ ಏಳೂವರೆ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ನೈಸರ್ಗಿಕ ಕೃಷಿಯ ಗುರಿಯನ್ನು ಸರ್ಕಾರ ನಿಗದಿಪಡಿಸಿದೆ ಎಂದು ಹೇಳಿದರು. ಅಭಿಯಾನದ ಸಮಯದಲ್ಲಿ, 16 ಸಾವಿರ ವಿಜ್ಞಾನಿಗಳ 2,170 ತಂಡಗಳನ್ನು ರಚಿಸಲಾಯಿತು, ಅವರು ಹಳ್ಳಿಯಿಂದ ಹಳ್ಳಿಗೆ ಹೋಗಿ ರೈತರೊಂದಿಗೆ ನೇರವಾಗಿ ಸಂವಹನ ನಡೆಸಿದರು ಮತ್ತು ಸಂಶೋಧನೆಯ ಬಗ್ಗೆ ಸರಿಯಾದ ಮಾಹಿತಿಯನ್ನು ನೀಡಿದರು. ಪ್ರದೇಶದ ಹವಾಮಾನ ಪರಿಸ್ಥಿತಿಗಳು ಮತ್ತು ಕ್ಷೇತ್ರದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ರೈತರಿಗೆ ವೈಜ್ಞಾನಿಕ ಮಾಹಿತಿಯನ್ನು ನೀಡಲಾಯಿತು. ಸಮತೋಲಿತ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಬಳಕೆಯ ಬಗ್ಗೆ ರೈತರಿಗೆ ಮಾಹಿತಿ ನೀಡಲಾಯಿತು. ಈ ಅಭಿಯಾನದ ಪ್ರಮುಖ ಸಾಧನೆಯೆಂದರೆ ದೇಶದಲ್ಲಿ 18 ಲಕ್ಷಕ್ಕೂ ಹೆಚ್ಚು ರೈತರು ನೈಸರ್ಗಿಕ ಕೃಷಿಗೆ ಸಿದ್ಧರಾಗಿದ್ದಾರೆ. ಅಭಿಯಾನದ ಸಮಯದಲ್ಲಿ, ಒಂದು ಕೋಟಿ 12 ಲಕ್ಷ ರೈತರೊಂದಿಗೆ ಸಂವಹನ ನಡೆಸಲಾಯಿತು. 55 ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಸಂವಾದ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿತ್ತು.






## ಒಂದು ದಶಕದಲ್ಲಿ ಸಾಮಾಜಿಕ ಭದ್ರತಾ ವ್ಯಾಪ್ತಿ ಸುಮಾರು ಮೂರೂವರೆ ಪಟ್ಟು ಹೆಚ್ಚಳ

'ಸಬ್ ಕಾ ಸಾಥ್, ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್, ಸಬ್ ಕಾ ಪ್ರಯಾಸ್' ಸಾಧಿಸುವ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೃಷ್ಟಿಕೋನದಿಂದ ಮಾರ್ಗದರ್ಶನ ಪಡೆದ ಭಾರತವು ಸಾಮಾಜಿಕ ರಕ್ಷಣಾ ವ್ಯಾಪ್ತಿಯ ಕ್ಷೇತ್ರದಲ್ಲಿ ಐತಿಹಾಸಿಕ ಮೈಲಿಗಲ್ಲನ್ನು ಸಾಧಿಸಿದ್ದು, ಜಾಗತಿಕವಾಗಿ ಒಂದು ಅತ್ಯಂತ ಮಹತ್ವದ ವಿಸ್ತರಣೆ ದಾಖಲಿಸಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ (ಐಎಲ್‌ಒ) ಇತ್ತೀಚಿನ ಮಾಹಿತಿಯ ಪ್ರಕಾರ, ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿಯು 2015 ರಲ್ಲಿ ಶೇ.19 ರಿಂದ 2025 ರಲ್ಲಿ ಶೇ. 64.3 ಕ್ಕೆ ಏರಿದೆ, ಇದು ಕಳೆದ ದಶಕದಲ್ಲಿ ಅಭೂತಪೂರ್ವ ಶೇ.45 ಅಂಕ ಏರಿಕೆಯಾಗಿದೆ. ಪ್ರಧಾನಮಂತ್ರಿ ಮೋದಿ ಈ ಪ್ರಗತಿಯನ್ನು ಶ್ಲಾಘಿಸಿದರು ಮತ್ತು ಇದು ಸರ್ಕಾರದ ಸಾರ್ವಜನಿಕ ಕಲ್ಯಾಣ-ಚಾಲಿತ ಬದ್ಧತೆಯ ಫಲಶ್ರುತಿಯಾಗಿದೆ ಎಂದು ಹೇಳಿದರು. ಸರ್ಕಾರದ ಕಲ್ಯಾಣ ಯೋಜನೆಗಳು ಗರಿಷ್ಠ ಜನರನ್ನು ತಲುಪುತ್ತಿವೆ. ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಬಡವರು ಮತ್ತು ಕಾರ್ಮಿಕ ವರ್ಗಕ್ಕಾಗಿ ಭಾರತದ ಕೇಂದ್ರೀಕೃತ ಕಲ್ಯಾಣ ನೀತಿಗಳನ್ನು ಐಎಲ್‌ಒ ಮಹಾನಿರ್ದೇಶಕರು ಶ್ಲಾಘಿಸಿದರು ಮತ್ತು 94 ಕೋಟಿಗೂ ಹೆಚ್ಚು ಜನರು ಈಗ ಕನಿಷ್ಠ ಒಂದು ಸಾಮಾಜಿಕ ಭದ್ರತಾ ಪ್ರಯೋಜನದ ಅಡಿಯಲ್ಲಿ ಬರುತ್ತಾರೆ ಎಂದು ಹೇಳಿದರು. ಫಲಾನುಭವಿಗಳ ಸಂಖ್ಯೆಯಲ್ಲಿ ಭಾರತ ಈಗ ವಿಶ್ವದಲ್ಲಿ ಎರಡನೇ ಸ್ಥಾನದಲ್ಲಿದೆ.



## ಆಮದು ಕಚ್ಚಾ ಖಾದ್ಯ ತೈಲಗಳ ಮೇಲಿನ ಮೂಲ ಸೀಮಾ ಸುಂಕ ಶೇ.10ಕ್ಕೆ ಇಳಿಕೆ

ಕಚ್ಚಾ ಖಾದ್ಯ ತೈಲಗಳಾದ ಸೂರ್ಯಕಾಂತಿ, ಸೋಯಾಬೀನ್ ಮತ್ತು ತಾಳೆ ಎಣ್ಣೆಯ ಮೇಲಿನ ಮೂಲ ಸಿಮಾ ಸುಂಕವನ್ನು ಶೇ.20 ರಿಂದ ಶೇ.10 ಕ್ಕೆ ಇಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಖಾದ್ಯ ತೈಲಗಳ ಬೆಲೆಗಳ ಹೆಚ್ಚಳಕ್ಕೆ ಪರಿಹಾರವನ್ನು ಕಂಡುಹಿಡಿಯುವುದು ಈ ಬದಲಾವಣೆಯ ಉದ್ದೇಶವಾಗಿದೆ. ಇದರೊಂದಿಗೆ, ಕಡಿಮೆ ಸುಂಕದ ಸಂಪೂರ್ಣ ಲಾಭವನ್ನು ಗ್ರಾಹಕರಿಗೆ ನೀಡಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಖಾದ್ಯ ತೈಲ ಸಂಘಗಳು ಮತ್ತು ಉದ್ಯಮಕ್ಕೆ ಸಂಬಂಧಿಸಿದ ಜನರನ್ನು ಸರ್ಕಾರ ಕೇಳಿದೆ. ಸರ್ಕಾರದ ಈ ನಿರ್ಧಾರವು ಖಾದ್ಯ ತೈಲವನ್ನು ಗ್ರಾಹಕರಿಗೆ ಕಡಿಮೆ ಬೆಲೆಗೆ ಲಭ್ಯವಾಗುವಂತೆ ಮಾಡುವುದಲ್ಲದೆ ಹಣದುಬ್ಬರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಕಡಿಮೆ ಸುಂಕವು ದೇಶೀಯ ಸಂಸ್ಕರಣೆಯನ್ನು ಉತ್ತೇಜಿಸುತ್ತದೆ.

# 11 ವರ್ಷಗಳ ಸಮಗ್ರ ಪ್ರಗತಿ



**ಅಶ್ವಿನಿ ವೈಷ್ಣವ್**
ಕೇಂದ್ರ ರೈಲ್ವೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರು.

*ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 11 ವರ್ಷಗಳನ್ನು ಪೂರೈಸಿದೆ. ಈ ಸಂದರ್ಭದಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವರಾದ ಅಶ್ವಿನಿ ವೈಷ್ಣವ್ ಅವರ ಲೇಖನವನ್ನು ಪ್ರಕಟಿಸಲಾಗಿದೆ. 11 ವರ್ಷಗಳ ಸಮಗ್ರ ಪ್ರಗತಿ ಮತ್ತು ರಾಷ್ಟ್ರೀಯ ಸಬಲೀಕರಣವನ್ನು ಎತ್ತಿ ತೋರಿಸುವ ಲೇಖನವನ್ನು ಸಾಮಾಜಿಕ ತಾಣ ಎಕ್ಸ್ ನಲ್ಲಿ ಹಂಚಿಕೊಂಡಿರುವ ಪ್ರಧಾನ ಮಂತ್ರಿಯವರು, "ಕೇಂದ್ರ ಸಚಿವರಾದ ಅಶ್ವಿನಿ ವೈಷ್ಣವ್ ಅವರು 11 ವರ್ಷಗಳ ಸಮಗ್ರ ಪ್ರಗತಿಯನ್ನು ಪ್ರತಿಬಿಂಬಿಸಿದ್ದಾರೆ, ಇದು ನಾಗರಿಕರಿಗೆ ಅನೇಕ ರೀತಿಯಲ್ಲಿ ಪ್ರಯೋಜನವನ್ನು ನೀಡಿದೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನಂಬಿಕೆಯನ್ನು ಹುಟ್ಟುಹಾಕಿದೆ. ರಾಷ್ಟ್ರವನ್ನು ಸಶಕ್ತಗೊಳಿಸುವ, ಉನ್ನತೀಕರಿಸುವ ಮತ್ತು ಮುನ್ನಡೆಸುವ ನಂಬಿಕೆ. ಒಳನೋಟವುಳ್ಳ ಲೇಖನವಾಗಿದೆ!" ಕೇಂದ್ರ ರೈಲ್ವೆ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವರ ಈ ಲೇಖನವು 11 ವರ್ಷಗಳ ಸಮಗ್ರ ಪ್ರಗತಿಯ ಪರಿವರ್ತಕ ಪರಿಣಾಮವನ್ನು ಒತ್ತಿಹೇಳುತ್ತದೆ. ಇದು ರಾಷ್ಟ್ರವನ್ನು ಗಮನಾರ್ಹ ರೀತಿಯಲ್ಲಿ ಸಬಲೀಕರಣಗೊಳಿಸಿದ ಮತ್ತು ಮುನ್ನಡೆಸಿದ ಪಯಣವಾಗಿದೆ. ಮಾಧ್ಯಮದಲ್ಲಿ ಪ್ರಕಟವಾದ ಅವರ ಲೇಖನ ಇಲ್ಲಿದೆ...*

## ನಮ್ಮ ಅಭಿವೃದ್ಧಿ ಮಾದರಿಯ ಅತಿದೊಡ್ಡ ಶಕ್ತಿಯೆಂದರೆ ಅದು ಕೋಟ್ಯಂತರ ಜನರ ಜೀವನವನ್ನು ಸುಧಾರಿಸಿರುವುದಾಗಿದೆ

ನವ ಭಾರತ ರೂಪುಗೊಳ್ಳುತ್ತಿದೆ- ಅಲ್ಲಿ ಪ್ರಗತಿಯನ್ನು ಜಿಡಿಪಿಯಲ್ಲಿ ಮಾತ್ರವಲ್ಲ, ಘನತೆ ಮತ್ತು ಅವಕಾಶಗಳಲ್ಲಿ ಅಳೆಯಲಾಗುತ್ತದೆ. ಕಡಪದ ಗೃಹಿಣಿ ಅನ್ನಮ್ ಲಕ್ಷ್ಮಿ ಭವಾನಿ ಅವರು ಯಶಸ್ವಿ ಸೆಣಬಿನ ಚೀಲ ಉತ್ಪಾದನಾ ಘಟಕವನ್ನು ಪ್ರಾರಂಭಿಸಲು ಮುದ್ರಾ ಸಾಲವನ್ನು ಪಡೆಯುತ್ತಾರೆ. ಹರಿಯಾಣದ ಜಗದೇವ್ ಸಿಂಗ್ ಅವರು ಎಐ ಅಪ್ಲಿಕೇಶನ್ ಬಳಸಿ ತಮ್ಮ ಬೆಳೆಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ. ಮತ್ತು, ಮೀರಾ ಮಾಂಝಿ ಉಜ್ವಲ ಯೋಜನೆಯಡಿ ಎಲ್ ಪಿ ಜಿ ಸಂಪರ್ಕವನ್ನು ಪಡೆಯುತ್ತಾರೆ, ಹೊಗೆರಹಿತ ಅಡುಗೆಮನೆ ಮತ್ತು ಅವರ ಮಕ್ಕಳೊಂದಿಗೆ ಹೆಚ್ಚು ಗುಣಮಟ್ಟದ ಸಮಯವನ್ನು ಖಚಿತಪಡಿಸುತ್ತಾರೆ.

ಇವು ಭಾರತದಾದ್ಯಂತದ ಹಳ್ಳಿಗಳು, ಪಟ್ಟಣಗಳು ಮತ್ತು ನಗರಗಳ ನಿತ್ಯ ಸತ್ಯವಾಗಿದೆ. ಈ ಬದಲಾವಣೆಗಳು ರಚನಾತ್ಮಕ ಸುಧಾರಣೆಗಳು ಮತ್ತು ಕಟ್ಟಕಡೆಯ ನಾಗರಿಕನನ್ನು ಸಬಲೀಕರಣಗೊಳಿಸುವಲ್ಲಿ ನಂಬಿಕೆ ಇಟ್ಟಿರುವ ನಾಯಕತ್ವದಿಂದ ಸೃಷ್ಟಿಯಾಗಿದೆ.



# ಸ್ತಂಭ 1: ಮೂಲಸೌಕರ್ಯದಲ್ಲಿ ಹೂಡಿಕೆ

- ಕಳೆದ ಹನ್ನೊಂದು ವರ್ಷಗಳಲ್ಲಿ ಬಂಡವಾಳ ವೆಚ್ಚವು ಗಮನಾರ್ಹವಾಗಿ ಬೆಳೆದಿದ್ದು, 2025-26ರಲ್ಲಿ 11.2 ಲಕ್ಷ ಕೋಟಿ ರೂ.ಗೆ ತಲುಪಿದೆ. ಸಾರ್ವಜನಿಕ ಹೂಡಿಕೆಯ ಈ ಏರಿಕೆಯು ಭಾರತದ - ಭೌತಿಕ, ಡಿಜಿಟಲ್ ಮತ್ತು ಸಾಮಾಜಿಕ - ಮೂಲಸೌಕರ್ಯಗಳಲ್ಲಿ ಹೆಚ್ಚು ಗೋಚರಿಸುತ್ತದೆ.
- ಕಳೆದ 11 ವರ್ಷಗಳಲ್ಲಿ, ಭಾರತದಲ್ಲಿ ಭೌತಿಕ ಮೂಲಸೌಕರ್ಯಗಳು ತ್ವರಿತ ಗತಿಯಲ್ಲಿ ಬೆಳೆದಿವೆ. ಸುಮಾರು 59,000 ಕಿಲೋಮೀಟರ್ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ ಮತ್ತು 37,500 ಕಿಲೋಮೀಟರ್ ರೈಲ್ವೆ ಹಳಿಗಳನ್ನು ಹಾಕಲಾಗಿದೆ.
- ಇತ್ತೀಚೆಗೆ, ಚೆನಾಬ್ ಮತ್ತು ಅಂಜಿ ಸೇತುವೆಗಳನ್ನು ಉದ್ಘಾಟಿಸಲಾಯಿತು- ಇದು ಆಧುನಿಕ ಭಾರತದ ಸಂಕೇತವಾಗಿದೆ. ಕಾಶ್ಮೀರದ ಜನರಿಗೆ, ಈ ಸೇತುವೆಗಳ ಮೂಲಕ ವಂದೇ ಭಾರತ್ ಆಗಮನವು ಕನಸಿನಂತೆ ಭಾಸವಾಯಿತು. ಒಬ್ಬ ಪ್ರಯಾಣಿಕನು ಕಣ್ಣೀರು ಸುರಿಸುತ್ತಾ, ಈ ದಿನ ಬರುತ್ತದೆ ಎಂದು ಎಂದಿಗೂ ಭಾವಿಸಿರಲಿಲ್ಲ ಎಂದು ಹೇಳಿದರು.
- ಸಂಪರ್ಕದ ಈ ಮನೋಭಾವವು ರೈಲ್ವೆಯನ್ನು ಮೀರಿ ಡಿಜಿಟಲ್ ಹೆದ್ದಾರಿಗಳಿಗೆ ಹೋಗುತ್ತದೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (ಡಿಪಿಐ) ಜಾಗತಿಕ ಮಾನದಂಡವಾಗಿ ಮಾರ್ಪಟ್ಟಿದೆ. ಯುಪಿಐ, ಆಧಾರ್ ಮತ್ತು ಡಿಜಿಲಾಕರ್ ಅನ್ನು ಈಗ ಜಾಗತಿಕವಾಗಿ ಅವುಗಳ ಪ್ರಮಾಣ ಮತ್ತು ಸಮಗ್ರತೆಯನ್ನು ಅಧ್ಯಯನ ಮಾಡಲಾಗುತ್ತಿದೆ. 141 ಕೋಟಿಗೂ ಹೆಚ್ಚು ಆಧಾರ್ ನೋಂದಣಿಗಳು ಮತ್ತು ಪ್ರತಿದಿನ 60 ಕೋಟಿ ಯುಪಿಐ ವಹಿವಾಟುಗಳು ಅದರ ವ್ಯಾಪ್ತಿ ಮತ್ತು ಸ್ವೀಕಾರವನ್ನು ಸೂಚಿಸುತ್ತವೆ. ಇದರ ಹಿಂದಿನ ಕಲ್ಪನೆ ಸರಳವಾಗಿದೆ: ಎಲ್ಲರಿಗೂ ತಂತ್ರಜ್ಞಾನವನ್ನು ಪ್ರಜಾಪ್ರಭುತ್ವಗೊಳಿಸುವುದು.
- ಇದೇ ದೃಷ್ಟಿಕೋನವು ಭಾರತ ಎಐ ಅಭಿಯಾನವನ್ನು ಮುನ್ನಡೆಸುತ್ತದೆ. ಜಿಪಿಯುಗಳು ಎಂದು ಕರೆಯಲಾಗುವ 34,000 ಕ್ಕೂ ಹೆಚ್ಚು ಹೈಸ್ಪೀಡ್ ಕಂಪ್ಯೂಟರ್ ಚಿಪ್ ಗಳು ಈಗ ಎಲ್ಲರಿಗೂ ಲಭ್ಯವಿದೆ. ಅದೂ ಜಾಗತಿಕ ವೆಚ್ಚದ ಕೇವಲ ಮೂರನೇ ಒಂದು ಭಾಗದಷ್ಟು. ಎಐ ಅಭಿವೃದ್ಧಿಯ ಭಾಗವಾಗಿ, ವಿಶೇಷವಾಗಿ ಎಐ ಮಾದರಿಗಳ ತರಬೇತಿಯ ಭಾಗವಾಗಿ ಈ ಚಿಪ್ ಗಳು ಬೇಕಾಗುತ್ತವೆ. ಇದನ್ನು ಮತ್ತಷ್ಟು ಬೆಂಬಲಿಸಲು, ಎಐ ಕೋಶಾ ವೇದಿಕೆ ಕಲಿಕೆ ಮತ್ತು ನಾವೀನ್ಯತೆಗಾಗಿ 370 ಕ್ಕೂ ಹೆಚ್ಚು ಡೇಟಾಸೆಟ್ ಗಳು ಮತ್ತು 200 ಸಿದ್ಧ ಎಐ ಮಾದರಿಗಳನ್ನು ನೀಡುತ್ತದೆ.
- ಪ್ರವೇಶದ ಮೇಲಿನ ಈ ಗಮನವು ತಂತ್ರಜ್ಞಾನವನ್ನು ಮೀರಿ ಶಿಕ್ಷಣ, ಆರೋಗ್ಯ ಮತ್ತು ಮೂಲಭೂತ ಸೇವೆಗಳಿಗೆ ವಿಸ್ತರಿಸುತ್ತದೆ. 11 ವರ್ಷಗಳಲ್ಲಿ, ವೈದ್ಯಕೀಯ ಕಾಲೇಜುಗಳು 387 ರಿಂದ 780 ಕ್ಕೆ ಮತ್ತು ಏಮ್ಸ್ ಸಂಸ್ಥೆಗಳು 7 ರಿಂದ 23 ಕ್ಕೆ ಬೆಳೆದಿವೆ. ಎಂಬಿಬಿಎಸ್ ಮತ್ತು ಪಿಜಿ ಸೀಟುಗಳು ದ್ವಿಗುಣಗೊಂಡಿವೆ. ಇದು ಗುಣಮಟ್ಟದ ಶಿಕ್ಷಣ ಮತ್ತು ಆರೋಗ್ಯ ರಕ್ಷಣೆಯನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡುವ ಬಲವಾದ ಬದ್ಧತೆಯನ್ನು ಪ್ರದರ್ಶಿಸುತ್ತದೆ.

**ಕಾರ್ಯರೂಪಕ್ಕೆ ಬಂದ ಅಂತ್ಯೋದಯ**

ಮೊದಲಿನಿಂದಲೂ, ನಮ್ಮ ಮಾರ್ಗದರ್ಶಿ ತತ್ವ ಅಂತ್ಯೋದಯವಾಗಿದೆ – ಪಿರಮಿಡ್ ನ ಕೆಳಗಿರುವ ಜನರನ್ನು ಉನ್ನತೀಕರಿಸುತ್ತದೆ. ಕಳೆದ 11 ವರ್ಷಗಳಲ್ಲಿ ಪ್ರತಿಯೊಂದು ನೀತಿ, ಪ್ರತಿ ಹೂಡಿಕೆ ಮತ್ತು ಪ್ರತಿಯೊಂದು ನಾವೀನ್ಯತೆ ಈ ದೃಷ್ಟಿಕೋನದಿಂದ ರೂಪುಗೊಂಡಿದೆ.



# ಸ್ತಂಭ 2: ಸಮಗ್ರ ಪ್ರಗತಿ

- ನಮ್ಮ ಅಭಿವೃದ್ಧಿ ಮಾದರಿಯ ಅತ್ಯಂತ ಶಕ್ತಿಯುತ ಪ್ರಮಾಣೀಕರಣವು ಅದು ಸ್ಪರ್ಶಿಸಿದ ಜೀವನದಲ್ಲಿದೆ. 530 ದಶಲಕ್ಷಕ್ಕೂ ಹೆಚ್ಚು ಜನ್ ಧನ್ ಖಾತೆಗಳನ್ನು ತೆರೆಯಲಾಗಿದೆ, ಇದು ಯುರೋಪಿನ ಜನಸಂಖ್ಯೆಗಿಂತ ಹೆಚ್ಚಾಗಿದೆ. 40 ದಶಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ, 120 ದಶಲಕ್ಷ ಶೌಚಾಲಯಗಳನ್ನು ನಿರ್ಮಿಸಲಾಗಿದೆ ಮತ್ತು 100 ದಶಲಕ್ಷ ಕುಟುಂಬಗಳು ಈಗ ಕಟ್ಟಿಗೆಯ ಬೆಂಕಿಯ ಬದಲು ಶುದ್ಧ ಎಲ್ ಪಿ ಜಿಯೊಂದಿಗೆ ಅಡುಗೆ ಮಾಡುತ್ತವೆ.
- "ಹರ್ ಘರ್ ಜಲ್" ಅಡಿಯಲ್ಲಿ ನಲ್ಲಿ ನೀರಿನ ಸಂಪರ್ಕಗಳು 140 ದಶಲಕ್ಷ ಮನೆಗಳನ್ನು ತಲುಪಿವೆ. ಆಯುಷ್ಮಾನ್ ಭಾರತ್ ಅಡಿಯಲ್ಲಿ ಆರೋಗ್ಯ ವಿಮೆಯು 350 ದಶಲಕ್ಷಕ್ಕೂ ಹೆಚ್ಚು ಜನರನ್ನು ಒಳಗೊಂಡಿದೆ ಮತ್ತು 110 ದಶಲಕ್ಷ ರೈತರು ಈಗ ಪಿಎಂ-ಕಿಸಾನ್ ಮೂಲಕ ನೇರ ಆದಾಯ ಬೆಂಬಲವನ್ನು ಪಡೆಯುತ್ತಿದ್ದಾರೆ.
- 10 ನೇ ಕೋಟಿ ಉಜ್ವಲ ಫಲಾನುಭವಿ ಮೀರಾ ಮಾಂಝಿ ಅವರ ಯಶೋಗಾಥೆಗಳ ಮೂಲಕ ಈ ಸಂಖ್ಯೆಗಳು ಜೀವಂತವಾಗುತ್ತವೆ. ಯಾವುದೇ ಮಧ್ಯವರ್ತಿಗಳಿಲ್ಲದೆ 2.5 ಲಕ್ಷ ರೂ.ಗಳನ್ನು ನೇರವಾಗಿ ತನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ ಎಂದು ಅವರು ಉಲ್ಲೇಖಿಸಿದ್ದಾರೆ. ಅವರು ಈಗ ಹರ್ ಘರ್ ಜಲ್ ಮೂಲಕ ನಲ್ಲಿ ನೀರು, ಪ್ರತಿ ತಿಂಗಳು ಉಚಿತ ಪಡಿತರ ಮತ್ತು ಉಜ್ವಲಾ ಅಡಿಯಲ್ಲಿ ಹೊಗೆರಹಿತ ಅಡುಗೆಮನೆಯನ್ನು ಹೊಂದಿದ್ದಾರೆ.
- ಇದು ನಮ್ಮ ಇತ್ತೀಚಿನ ಇತಿಹಾಸದಲ್ಲಿ ಯಾವುದೇ ಅವಧಿಯಲ್ಲಿ ಕಂಡುಬರದ ಪ್ರಮಾಣದಲ್ಲಿ ಸಮಗ್ರ ಪ್ರಗತಿಯಾಗಿದೆ.

# ಸ್ತಂಭ 3: ಉತ್ಪಾದನೆ ಮತ್ತು ನಾವೀನ್ಯತೆ

- ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಪುನಶ್ಚೇತನಗೊಳಿಸಲು ನಾವು 2015 ರಲ್ಲಿ ಮೇಕ್ ಇನ್ ಇಂಡಿಯಾವನ್ನು ಪ್ರಾರಂಭಿಸಿದ್ದೇವೆ. ಇಂದು, ಎಲೆಕ್ಟ್ರಾನಿಕ್ಸ್ ಉತ್ಪಾದನೆಯು 6 ಪಟ್ಟು ಏರಿಕೆಯಾಗಿ 12 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಎಲೆಕ್ಟ್ರಾನಿಕ್ಸ್ ರಫ್ತು 8 ಪಟ್ಟು ಏರಿಕೆಯಾಗಿ 3 ಲಕ್ಷ ಕೋಟಿ ರೂ.ಗಳನ್ನು ದಾಟಿದೆ. ಭಾರತ ಈಗ ಎರಡನೇ ಅತಿದೊಡ್ಡ ಮೊಬೈಲ್ ಫೋನ್ ಉತ್ಪಾದಕ ರಾಷ್ಟ್ರವಾಗಿದೆ.
- ನಾವು ಈಗ ಹೊಸ ಎಲೆಕ್ಟ್ರಾನಿಕ್ ಘಟಕಗಳ ಉತ್ಪಾದನಾ ಯೋಜನೆಯಡಿ ಎಲೆಕ್ಟ್ರಾನಿಕ್ ಘಟಕಗಳನ್ನು ಉತ್ಪಾದಿಸುವ ಮೂಲಕ ಉತ್ಪಾದನಾ ಮೌಲ್ಯ ಸರಪಳಿಯನ್ನು ಆಳಗೊಳಿಸುತ್ತಿದ್ದೇವೆ.
- ಅದೇ ವೇಳೆ, ಭಾರತದ ಸೆಮಿ ಕಂಡಕ್ಟರ್ ಅಭಿಯಾನ ನೀಲನಕ್ಷೆಯಿಂದ ಪ್ರಗತಿಯತ್ತ ಸಾಗುತ್ತಿದೆ. ದೇಶದ ಮೊದಲ ವಾಣಿಜ್ಯ ಫ್ಯಾಬ್ ನಿರ್ಮಾಣ ಹಂತದಲ್ಲಿದೆ. ಐದು ಒಸ್ಯಾಟ್ ಘಟಕಗಳು ನಡೆಯುತ್ತಿವೆ. ಮತ್ತು ದೇಶೀಯ ಐಪಿ ಹೊಂದಿರುವ 20 ಕ್ಕೂ ಹೆಚ್ಚು ಚಿಪ್ ಸೆಟ್ ಗಳನ್ನು ಭಾರತದ ವಿದ್ಯಾರ್ಥಿಗಳು ಮತ್ತು ಎಂಜಿನಿಯರ್ ಗಳು ವಿನ್ಯಾಸಗೊಳಿಸಿದ್ದಾರೆ. ನಾವು ವಿಶ್ವದರ್ಜೆಯ ಇಡಿಎ ಉಪಕರಣಗಳೊಂದಿಗೆ 270 ವಿಶ್ವವಿದ್ಯಾಲಯಗಳನ್ನು ಆನ್ ಬೋರ್ಡ್ ಮಾಡಿದ್ದೇವೆ. ಇದು ಜಗತ್ತು ಅವಲಂಬಿಸಬಹುದಾದ ಸೆಮಿ ಕಂಡಕ್ಟರ್ ಪ್ರತಿಭೆಯ ಮಾರ್ಗಕ್ಕೆ ಅಡಿಪಾಯ ಹಾಕುತ್ತಿದೆ.



## ಸ್ತಂಭ 4: ಕಾನೂನುಗಳ ಸರಳೀಕರಣ

ಕಳೆದ ದಶಕದ ಮೌನ ಕ್ರಾಂತಿ ಆಡಳಿತದಲ್ಲಿದೆ. 1,500 ಕ್ಕೂ ಹೆಚ್ಚು ಹಳೆಯ ಕಾನೂನುಗಳನ್ನು ರದ್ದುಪಡಿಸಲಾಗಿದ್ದು, 40,000ಕ್ಕೂ ಅಧಿಕ ಅನುಸರಣೆಗಳನ್ನು ತೆಗೆದುಹಾಕಲಾಗಿದೆ. ಟೆಲಿಕಾಂ ಕಾಯ್ದೆ ಮತ್ತು ಡಿಪಿಡಿಪಿ ಕಾಯ್ದೆಯಂತಹ ಹೊಸ ಕಾನೂನುಗಳನ್ನು ನಂಬಿಕೆ ಮತ್ತು ಸರಳತೆಯ ಮೇಲೆ ನಿರ್ಮಿಸಲಾಗಿದೆ, ನಾಗರಿಕರನ್ನು ಅನುಮಾನದ ಬದಲಾಗಿ ಘನತೆಯಿಂದ ನಡೆಸಿಕೊಳ್ಳಲಾಗುತ್ತದೆ. ಇದು ಹೂಡಿಕೆ, ನಾವೀನ್ಯತೆ ಮತ್ತು ಔಪಚಾರಿಕತೆಯನ್ನು ಉತ್ತೇಜಿಸಿದೆ, ಪ್ರಗತಿಯ ಸದ್ಗುಣಶೀಲ ಚಕ್ರವನ್ನು ಸೃಷ್ಟಿಸಿದೆ.

## ಮೋದಿ ಸಿದ್ಧಾಂತ

- ಈ 11 ವರ್ಷಗಳಲ್ಲಿ ಭಯೋತ್ಪಾದನೆಯ ಬಗ್ಗೆ ಭಾರತದ ದೃಷ್ಟಿಕೋನ ಬದಲಾಗಿದೆ. ನಿರ್ದಿಷ್ಟ ತಾಣ ದಾಳಿ (ಸರ್ಜಿಕಲ್ ಸ್ಟ್ರೈಕ್), ವಾಯುದಾಳಿ (ಏರ್ ಸ್ಟ್ರೈಕ್) ಮತ್ತು ಈಗ ಆಪರೇಷನ್ ಸಿಂಧೂರದಿಂದ ಹಿಡಿದು, ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತವು ಸ್ಪಷ್ಟತೆ ಮತ್ತು ಧೈರ್ಯವನ್ನು ತೋರಿಸಿದೆ. ಪ್ರತಿಯೊಂದು ಪ್ರತಿಕ್ರಿಯೆಯೂ ನಮ್ಮದೇ ಆದ ರೀತಿಯಲ್ಲಿ ತ್ವರಿತ, ನಿರ್ಣಾಯಕ ಕ್ರಮವನ್ನು ಪ್ರತಿಬಿಂಬಿಸುತ್ತದೆ.
- ಭಯೋತ್ಪಾದಕ ದಾಳಿಗಳಿಗೆ ಪ್ರತಿಕ್ರಿಯಿಸುವ ಈ ಹೊಸ ವಿಧಾನವು ಮೋದಿ ಸಿದ್ಧಾಂತದ ಭಾಗವಾಗಿದೆ. ಇದು ಮೂರು ಸ್ತಂಭಗಳನ್ನು ಆಧರಿಸಿದೆ. ಭಾರತದ ಷರತ್ತುಗಳ ಮೇಲೆ ನಿರ್ಣಾಯಕ ಪ್ರತೀಕಾರವು, ಪರಮಾಣು ಬ್ಲಾಕ್ ಮೇಲ್ ಗೆ ಶೂನ್ಯ ಸಹಿಷ್ಣುತೆ ಮತ್ತು ಭಯೋತ್ಪಾದಕರು ಮತ್ತು ಅವರ ಪ್ರಾಯೋಜಕರ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂಬುದಾಗಿದೆ.
- ಈ ಬಾರಿ ನಮ್ಮ ಪ್ರತಿಕ್ರಿಯೆಯನ್ನು ಇನ್ನಷ್ಟು ಮಹತ್ವಪೂರ್ಣವಾಗಿಸಿದ ಅಂಶವೆಂದರೆ ಸ್ಥಳೀಯ ತಂತ್ರಜ್ಞಾನಗಳು ಮತ್ತು ಸಾಮರ್ಥ್ಯಗಳ ಬಳಕೆ. ವಿಕಸಿತವಾಗಲು ಬಯಸುವ ರಾಷ್ಟ್ರವು ತನ್ನ ಜನರನ್ನು ರಕ್ಷಿಸುವುದು ಮಾತ್ರವಲ್ಲ, ಆತ್ಮನಿರ್ಭರತೆಯೊಂದಿಗೆ ಹಾಗೆ ಮಾಡಬೇಕು - ಭಾರತವು ಅದನ್ನೇ ಮಾಡಿದೆ.

## ವಿಶ್ವಾಸ

- ಹಿಂದಿನ ಬೆಳವಣಿಗೆಯನ್ನು ಸಂಖ್ಯೆಗಳಲ್ಲಿ ಅಳೆಯಲಾಗುತ್ತಿತ್ತು. ಇಂದು, ಇದನ್ನು ರೂಪಾಂತರಗೊಂಡ ಜೀವನದಲ್ಲಿ ಅಳೆಯಲಾಗುತ್ತದೆ. ಉದ್ಯೋಗದಾತರಾದ ಗೃಹಿಣಿ. ಕೃಷಿಯಲ್ಲಿ ಎಐ ಆಪ್ ಬಳಸುವ ರೈತ. ಈಗ ಹೊಗೆ ತುಂಬಿಲ್ಲದ ಅಡುಗೆ ಮನೆಯಲ್ಲಿ ತಾಯಿ. ಇವು ದೇಶಾದ್ಯಂತ ನಡೆಯುತ್ತಿರುವ ಶಾಂತಿ ಕ್ರಾಂತಿಗಳು.
- 2004 ರಲ್ಲಿ, ಅಟಲ್ ಅವರ ಅಧಿಕಾರಾವಧಿಯ ಕೊನೆಯಲ್ಲಿ, ಭಾರತವು ವಿಶ್ವದ 11 ನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿತ್ತು. 2004 ಮತ್ತು 2014 ರ ನಡುವೆ, ಭಾರತವು 11 ನೇ ಸ್ಥಾನದಲ್ಲಿತ್ತು. ಕಳೆದ ದಶಕದಲ್ಲಿ, ಪ್ರಧಾನ ಮಂತ್ರಿ ಮೋದಿಯವರ ಸುಧಾರಣಾವಾದಿ ನೀತಿಗಳಿಂದಾಗಿ ಭಾರತವು ವೇಗವನ್ನು ಮರಳಿ ಪಡೆಯಿತು. ಇಂದು, ನಾವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗುವ ಹಾದಿಯಲ್ಲಿ ದೃಢವಾಗಿ ನಿಂತಿದ್ದೇವೆ.
- ಪ್ರಧಾನ ಮಂತ್ರಿ ಮೋದಿ ಅವರ ನಾಯಕತ್ವದಲ್ಲಿ, ಈ 11 ವರ್ಷಗಳ ಸಮಗ್ರ ಪ್ರಗತಿಗೆಯು ಜನರಿಗೆ ಸಬ್ಸಿಡಿಗಳು ಅಥವಾ ಸೇವೆಗಳಿಗಿಂತ ಹೆಚ್ಚು ಮೌಲ್ಯಯುತವಾದದ್ದನ್ನು ನೀಡಿದೆ. ಅದು ಅವರಿಗೆ ನಂಬಿಕೆಯನ್ನು ನೀಡಿದೆ ಮತ್ತು ಉತ್ತಮ ಭವಿಷ್ಯದ ಬಗ್ಗೆ ದೃಢವಾದ ನಂಬಿಕೆಯು ರಾಷ್ಟ್ರವನ್ನು ಮುಂದುವರಿಯುವಂತೆ ಮಾಡುತ್ತದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನಾಯಕತ್ವದಿಂದ ನಿರ್ದೇಶಿತವಾದ ಈ ದೃಷ್ಟಿಕೋನವು ನಾಲ್ಕು ಸರಳ ಮತ್ತು ಶಕ್ತಿಯುತ ಸ್ತಂಭಗಳನ್ನು ಆಧರಿಸಿದೆ. ಸಂಪರ್ಕಿಸುವ ಮೂಲಸೌಕರ್ಯವನ್ನು ನಿರ್ಮಿಸುವುದು, ಎಲ್ಲರನ್ನೂ ಒಳಗೊಳ್ಳುವ ಪ್ರಗತಿ, ಉದ್ಯೋಗಗಳನ್ನು ಸೃಷ್ಟಿಸುವ ಉತ್ಪಾದನೆ ಮತ್ತು ಸಬಲೀಕರಣದ ವ್ಯವಸ್ಥೆಗಳನ್ನು ಸರಳೀಕರಿಸುವುದು.

# ರಾಜಕೀಯದ ಯುವ ನೇತಾರ



*ಉತ್ತರ ಪ್ರದೇಶದ ಪೂರ್ವ ಭಾಗದಲ್ಲಿ ಒಂದು ಜನಪ್ರಿಯ ಗಾದೆ ಇದೆ. ಇಲ್ಲಿನ ಜನರ ರಕ್ತದಲ್ಲಿ ಸಾಕಷ್ಟು ಕಬ್ಬಿಣವಿದೆ ಎಂದು ಭಾವಿಸಲಾಗಿದೆ. ಚಂದ್ರಶೇಖರ್ ಅವರು ಬಲ್ಲಿಯಾ ಎಂಬ ಈ ಭೂಮಿಯಲ್ಲಿ ಜನಿಸಿದರು. ವಿದ್ಯಾರ್ಥಿ ರಾಜಕಾರಣದಿಂದ ರಾಷ್ಟ್ರದ ಪ್ರಧಾನ ಮಂತ್ರಿಯಾಗಿ ಬೆಳೆದ ನಾಯಕ. ಅವರ ಬಲವಾದ ದೃಢನಿಶ್ಚಯ, ಧೈರ್ಯ ಮತ್ತು ಶೌರ್ಯದಿಂದಾಗಿ, ಅವರನ್ನು ರಾಜಕೀಯದ ಯುವ ಕಿಡಿಗೆ ಹೋಲಿಸಲಾಯಿತು, ಅವರು ಎಂದಿಗೂ ಯಾರಿಗೂ ತಲೆಬಾಗಲಿಲ್ಲ. ಚಂದ್ರಶೇಖರ್ ಆಗಾಗ್ಗೆ ಹೇಳುತ್ತಿದ್ದರು, 'ನನ್ನನ್ನು ಬಂಧಿಸಿ ಅಥವಾ ಬಾಯಿ ಮುಚ್ಚಿಸಿ, ಆದರೆ ನನ್ನ ಪ್ರಶ್ನೆಗಳನ್ನು ಕಟ್ಟಿಹಾಕಲು ನಿಮಗೆ ಎಂದಿಗೂ ಸಾಧ್ಯವಾಗುವುದಿಲ್ಲ.' ಪ್ರಧಾನ ಮಂತ್ರಿಯಾಗಿ ಅವರ ಅಲ್ಪಾವಧಿಯ ಅಧಿಕಾರಾವಧಿಯ ಹೊರತಾಗಿಯೂ, ರಾಷ್ಟ್ರ ನಿರ್ಮಾಣಕ್ಕಾಗಿ ಅವರ ಆಲೋಚನೆಗಳು ಮತ್ತು ಪ್ರಯತ್ನಗಳನ್ನು ದೇಶವು ಸದಾ ನೆನಪಿಸಿಕೊಳ್ಳುತ್ತದೆ...*

ಚಂದ್ರಶೇಖರ್ ಅವರು 1927ರ ಏಪ್ರಿಲ್ 17 ರಂದು ಉತ್ತರ ಪ್ರದೇಶದ ಬಲ್ಲಿಯಾ ಜಿಲ್ಲೆಯ ಇಬ್ರಾಹಿಂಪಟ್ಟಿ ಗ್ರಾಮದಲ್ಲಿ ಕೃಷಿ ಕುಟುಂಬದಲ್ಲಿ ಜನಿಸಿದರು. ಅವರು ಚಿಕ್ಕ ವಯಸ್ಸಿನಿಂದಲೇ ರಾಜಕೀಯದತ್ತ ಆಕರ್ಷಿತರಾಗಿದ್ದರು. ಅವರು ತಮ್ಮ ಕ್ರಾಂತಿಕಾರಿ ಉತ್ಸಾಹ ಮತ್ತು ಉಜ್ವಲ ಭಾಷಣಗಳಿಗೆ ಹೆಸರುವಾಸಿಯಾಗಿದ್ದರು. ಇದು ಅವರನ್ನು ಅವರ ಕಾಲದ ಪ್ರಗತಿಪರ ಮತ್ತು 'ಯುವ ನೇತಾರ' ನಾಯಕನನ್ನಾಗಿ ಮಾಡಿತು, ಅವರು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ದೃಢನಿಶ್ಚಯ, ಧೈರ್ಯ ಮತ್ತು ಪ್ರಾಮಾಣಿಕತೆಯಿಂದ ಹೋರಾಡಿದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಬಂಧಿತರಾಗಿ ಜೈಲಿಗೆ ಕಳುಹಿಸಿದ ಆಡಳಿತ ಪಕ್ಷದ ಸದಸ್ಯರಲ್ಲಿ ಚಂದ್ರಶೇಖರ್ ಕೂಡ ಒಬ್ಬರು. ಅವರು ಸದಾ ಅಧಿಕಾರದ ರಾಜಕೀಯವನ್ನು ವಿರೋಧಿಸಿದರು ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಸಾಮಾಜಿಕ ಬದಲಾವಣೆಗೆ ಬದ್ಧತೆಯ ರಾಜಕೀಯವನ್ನು ಮೌಲ್ಯೀಕರಿಸಿದರು.

ಚಂದ್ರಶೇಖರ್ ಅವರ ನೈತಿಕತೆ ಮತ್ತು ಸಭ್ಯತೆ ಅಸಾಧಾರಣವಾಗಿತ್ತು. ಅದು ಅವರ ನಡೆಯಲ್ಲಿ ಸ್ಪಷ್ಟವಾಗಿತ್ತು. ಉದಾಹರಣೆಗೆ, ಅವರು ಅಟಲ್ ಬಿಹಾರಿ ವಾಜಪೇಯಿ ಅವರನ್ನು ಖಾಸಗಿಯಾಗಿ ಮತ್ತು ಸಾರ್ವಜನಿಕವಾಗಿ 'ಗುರೂಜಿ' ಎಂದು ಸಂಬೋಧಿಸುತ್ತಿದ್ದರು. ಅಷ್ಟೇ ಅಲ್ಲ, ಅವರು ಸದನದಲ್ಲಿ ಹೇಳುತ್ತಿದ್ದರು, 'ಗುರೂಜಿ, ದಯವಿಟ್ಟು ನನ್ನನ್ನು ಕ್ಷಮಿಸಿ; ನಾನು ನಿನ್ನನ್ನು ಸ್ವಲ್ಪ ಟೀಕಿಸುತ್ತೇನೆ.' ಚಂದ್ರಶೇಖರ್ ಎಂಟು ಬಾರಿ ಬಲ್ಲಿಯಾದಿಂದ ಸಂಸದರಾಗಿದ್ದರು. ಚಂದ್ರಶೇಖರ್ ಅವರು 1983ರ ಜನವರಿ 6ರಿಂದ ಜೂನ್ 25ರ ನಡುವೆ ದಕ್ಷಿಣದ ಕನ್ಯಾಕುಮಾರಿಯಿಂದ ನವದೆಹಲಿಯ ರಾಜ್ ಘಾಟ್ ವರೆಗೆ ಸುಮಾರು 4,260 ಕಿ.ಮೀ ಪಾದಯಾತ್ರೆ ಮಾಡಿದರು. ಜನರನ್ನು ಭೇಟಿ ಮಾಡುವುದು ಮತ್ತು ಅವರ ಪ್ರಮುಖ ಸವಾಲುಗಳ ಬಗ್ಗೆ ತಿಳಿದುಕೊಳ್ಳುವುದು ಅವರ ಯಾತ್ರೆಯ ಪ್ರಾಥಮಿಕ ಉದ್ದೇಶವಾಗಿತ್ತು. ಅವರು ಸಾಮಾಜಿಕ ಮತ್ತು ರಾಜಕೀಯ



ಜನನ: 17 ಏಪ್ರಿಲ್ 1927 | ಮರಣ: 8 ಜುಲೈ 2007

ಕಾರ್ಯಕರ್ತರಿಗೆ ತರಬೇತಿ ನೀಡುವ ಉದ್ದೇಶದಿಂದ ಮತ್ತು ದೇಶದ ಹಿಂದುಳಿದ ಪ್ರದೇಶಗಳಲ್ಲಿ ಜನರಿಗೆ ಶಿಕ್ಷಣ ನೀಡಲು ಮತ್ತು ತಳಮಟ್ಟದಲ್ಲಿ ಕೆಲಸ ಮಾಡಲು ಕೇರಳ, ತಮಿಳುನಾಡು, ಕರ್ನಾಟಕ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್, ಉತ್ತರ ಪ್ರದೇಶ ಮತ್ತು ಹರಿಯಾಣ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ 15 ಭಾರತ್ ಯಾತ್ರಾ ಕೇಂದ್ರಗಳನ್ನು ಸ್ಥಾಪಿಸಿದರು. ಪ್ರಧಾನ ಮಂತ್ರಿ ವಿ ಪಿ ಸಿಂಗ್ ಅವರು ರಾಜೀನಾಮೆ ನೀಡಿದ ನಂತರ 1990ರ ನವೆಂಬರ್ 10ರಿಂದ 1991ರ ಜೂನ್ 21ರವರೆಗೆ ಪ್ರಧಾನ ಮಂತ್ರಿಯಾಗಿದ್ದರು. ಅವರು ಜುಲೈ 8, 2007 ರಂದು ನಿಧನಹೊಂದಿದರು. ಅವರ ಜನ್ಮ ದಿನಾಚರಣೆಯಂದು ಅವರನ್ನು ಸ್ಮರಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, "ಚಂದ್ರಶೇಖರ್ ಅವರು ಮಹಾನ್ ವ್ಯಕ್ತಿತ್ವ, ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅವರ ಬದ್ಧತೆ ಮತ್ತು ಬಡತನವನ್ನು ನಿರ್ಮೂಲನೆ ಮಾಡುವ ಪ್ರಯತ್ನಗಳಿಗಾಗಿ ವ್ಯಾಪಕವಾಗಿ ಪ್ರಶಂಸೆಗೆ ಪಾತ್ರರಾಗಿದ್ದರು. ಅವರು ಸದಾ ದುರ್ಬಲ ವರ್ಗಗಳು ಮತ್ತು ವಂಚಿತರ ಕಲ್ಯಾಣಕ್ಕಾಗಿ ಶ್ರಮಿಸಿದರು ಎಂದು ಹೇಳಿದರು.



**ಆಪರೇಷನ್ ಸಿಂಧೂರ ದೂರಸಂಪರ್ಕ ನಿಯೋಗವನ್ನು ಭೇಟಿಯಾದ ಪ್ರಧಾನ ಮಂತ್ರಿ ಮೋದಿ**

# ಭಾರತದ ಧ್ವನಿಯನ್ನು ಜಗತ್ತಿನ ಮುಂದಿಟ್ಟ ಸರ್ವಪಕ್ಷ ನಿಯೋಗ

ಏಪ್ರಿಲ್ 22 ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ನಲ್ಲಿ ನಡೆದ ಹೇಡಿತನದ ಭಯೋತ್ಪಾದಕ ದಾಳಿಯ ನಂತರ, ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ಆಪರೇಷನ್ ಸಿಂಧೂರ ಕೈಗೊಳ್ಳುವ ಮೂಲಕ ಭಾರತವು ಭೂಮಿ, ನೀರು ಮತ್ತು ಗಾಳಿಯಲ್ಲಿ ತನ್ನ ಕಾರ್ಯತಂತ್ರದ ಶಕ್ತಿಯನ್ನು ಪ್ರದರ್ಶಿಸಿತು. ಮತ್ತೊಂದೆಡೆ, ಪಾಕಿಸ್ತಾನ ಪ್ರಾಯೋಜಿತ ಭಯೋತ್ಪಾದನೆಯನ್ನು ಜಾಗತಿಕ ಮಟ್ಟದಲ್ಲಿ ಬಹಿರಂಗಪಡಿಸಲು, ವಿವಿಧ ರಾಜಕೀಯ ಪಕ್ಷಗಳ ಸಂಸದರು ಮತ್ತು ಮಾಜಿ ರಾಜತಾಂತ್ರಿಕರು ಸೇರಿದಂತೆ ಭಾರತದ ಏಳು ನಿಯೋಗಗಳು ಮೇ ಅಂತ್ಯದಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದಸ್ಯ ರಾಷ್ಟ್ರಗಳು ಸೇರಿದಂತೆ ಪ್ರಮುಖ ಪಾಲುದಾರ ದೇಶಗಳಿಗೆ ಭೇಟಿ ನೀಡಿದ್ದವು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಜೂನ್ 10 ರಂದು ತಮ್ಮ ಅಧಿಕೃತ ನಿವಾಸದಲ್ಲಿ ನಿಯೋಗದ ಎಲ್ಲಾ ಸದಸ್ಯರನ್ನು ಭೇಟಿಯಾದರು ಮತ್ತು ಜಾಗತಿಕ ವೇದಿಕೆಗಳಲ್ಲಿ ಭಾರತದ ಧ್ವನಿಯನ್ನು ಮುಂದಕ್ಕೆ ಕೊಂಡೊಯ್ಯುವಲ್ಲಿ ಅವರ ಸಮರ್ಪಣೆಯನ್ನು ಶ್ಲಾಘಿಸಿದರು.

ಭಾರತವು ಈಗ ಭಯೋತ್ಪಾದನೆಯ ವಿರುದ್ಧ ಪುರಾವೆಗಳನ್ನು ಸಲ್ಲಿಸುವುದಲ್ಲದೆ ಬಲವಾದ ಪ್ರತಿಕ್ರಿಯೆಯನ್ನೂ ನೀಡುತ್ತದೆ. ಅಂತಹ ಪ್ರತಿಕ್ರಿಯೆಯ ಪ್ರತಿಧ್ವನಿ ಪ್ರಪಂಚದಾದ್ಯಂತ ಅಣುರಣಿಸುತ್ತದೆ. ಪಹಲ್ಗಾಮ್ ನಲ್ಲಿ ನಡೆದ ಹೇಡಿತನದ ಭಯೋತ್ಪಾದಕ ದಾಳಿಯ ನಂತರ, ಆಪರೇಷನ್ ಸಿಂಧೂರ ಪ್ರಾರಂಭಿಸಿದ ಭಾರತದ ಶಕ್ತಿಯನ್ನು ಜಗತ್ತು ನೋಡಿತು. ಈ ಮಧ್ಯೆ ಆಪರೇಷನ್ ಸಿಂಧೂರ ಮತ್ತು ಭಯೋತ್ಪಾದನೆಯ ವಿರುದ್ಧ ಭಾರತದ ನಿಲುವಿನ ಬಗ್ಗೆ ಜಗತ್ತಿಗೆ ತಿಳಿಸಿದ ನಂತರ ದೇಶಕ್ಕೆ ಮರಳಿದ ಸರ್ವಪಕ್ಷ ನಿಯೋಗದ ಸದಸ್ಯರು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ತಮ್ಮ ಭೇಟಿಯ ಅನುಭವವನ್ನು ಹಂಚಿಕೊಂಡರು. ಭೋಜನದ ಸಮಯದಲ್ಲಿ, ಪ್ರಧಾನಮಂತ್ರಿ ಮೋದಿ ನಿಯೋಗದೊಂದಿಗೆ ಒಂದು ಗಂಟೆಗೂ ಹೆಚ್ಚು ಕಾಲ ಕಳೆದರು ಮತ್ತು ಅವರನ್ನು ವೈಯಕ್ತಿಕವಾಗಿ ಭೇಟಿಯಾದರು. ಅವರು ಎಲ್ಲಾ ನಿಯೋಗಗಳೊಂದಿಗೆ ಮಾತನಾಡಿದರು. ನಿಯೋಗವು ಪಾಕಿಸ್ತಾನ



> **ವಿವಿಧ ದೇಶಗಳಲ್ಲಿ ಭಾರತವನ್ನು ಪ್ರತಿನಿಧಿಸುವ ವಿವಿಧ ನಿಯೋಗಗಳ ಸದಸ್ಯರನ್ನು ಭೇಟಿಯಾದೆ. ಶಾಂತಿಗಾಗಿ ಭಾರತದ ಬದ್ಧತೆ ಮತ್ತು ಭಯೋತ್ಪಾದನೆಯ ಬೆದರಿಕೆಯನ್ನು ತೊಡೆದುಹಾಕುವ ಅಗತ್ಯವನ್ನು ವಿವರವಾಗಿ ಚರ್ಚಿಸಿದೆ. ಅವರು ಭಾರತದ ಧ್ವನಿಯನ್ನು ಮುಂದಕ್ಕೆ ಕೊಂಡೊಯ್ದ ರೀತಿ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ ಇದೆ.**
>
> **- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

# ಒಂದು ಅಭಿಯಾನ, ಒಂದು ಸಂದೇಶ, ಒಂದು ಭಾರತ



## ಗುಂಪು 5

ಈ ತಂಡವು ಯುಎಸ್‌ಎ, ಪನಾಮ, ಗಯಾನಾ, ಬ್ರೆಜಿಲ್ ಮತ್ತು ಕೊಲಂಬಿಯಾಕ್ಕೆ ಭೇಟಿ ನೀಡಿತು. ಈ ತಂಡದ ನೇತೃತ್ವವನ್ನು ಕಾಂಗ್ರೆಸ್ ಸಂಸದ ಡಾ.ಶಶಿ ತರೂರ್ ವಹಿಸಿದ್ದರು. ಈ ತಂಡದಲ್ಲಿ ಎಲ್ ಜೆ ಪಿ (ರಾಮ್ ವಿಲಾಸ್) ಸಂಸದೆ ಶಾಂಭವಿ ಚೌಧರಿ, ಜೆಎಂಎಂನ ಸರ್ಫರಾಜ್ ಅಹ್ಮದ್, ತೆಲುಗು ದೇಶಂ ಪಕ್ಷದ ಜಿಎಂ ಹರೀಶ್ ಬಾಲಯೋಗಿ, ಶಿವಸೇನೆಯ ಮಿಲಿಂದ್ ದಿಯೋರಾ ಮತ್ತು ಮಾಜಿ ರಾಜತಾಂತ್ರಿಕ ತರಣ್ಜಿತ್ ಸಿಂಗ್ ಸಂಧು ಹಾಗೂ ಇತರರಿದ್ದರು.

## ಗುಂಪು 2

ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ನೇತೃತ್ವದ ತಂಡವು ಬ್ರಿಟನ್, ಫ್ರಾನ್ಸ್, ಜರ್ಮನಿ, ಯುರೋಪಿಯನ್ ಯೂನಿಯನ್, ಇಟಲಿ ಮತ್ತು ಡೆನ್ಮಾರ್ಕ್ ಗೆ ಭೇಟಿ ನೀಡಿತು. ಶಿವಸೇನೆ ಸಂಸದೆ ಪ್ರಿಯಾಂಕಾ ಚತುರ್ವೇದಿ, ಮಾಜಿ ಕೇಂದ್ರ ಸಚಿವ ಎಂ.ಜೆ. ಅಕ್ಬರ್ ಮತ್ತು ಮಾಜಿ ರಾಜತಾಂತ್ರಿಕ ಪಂಕಜ್ ಸರನ್ ಹಾಗೂ ಇತರರು ಈ ಸಮಿತಿಯಲ್ಲಿದ್ದರು.

## ಗುಂಪು 7

ಎನ್ ಸಿ ಪಿ (ಶರದ್ಚಂದ್ರ ಪವಾರ್), ಸಂಸದೆ ಸುಪ್ರಿಯಾ ಸುಳೆ ನೇತೃತ್ವದ ತಂಡವು ಈಜಿಪ್ಟ್, ಕತಾರ್, ಇಥಿಯೋಪಿಯಾ ಮತ್ತು ದಕ್ಷಿಣ ಆಫ್ರಿಕಾಕ್ಕೆ ಭೇಟಿ ನೀಡಿತು. ಕಾಂಗ್ರೆಸ್ ಸಂಸದ ಮನೀಶ್ ತಿವಾರಿ, ಬಿಜೆಪಿ ಸಂಸದ ರಾಜೀವ್ ಪ್ರತಾಪ್ ರೂಡಿ ಮತ್ತು ಮಾಜಿ ರಾಜತಾಂತ್ರಿಕ ಸೈಯದ್ ಅಕ್ಬರುದ್ದೀನ್ ಹಾಗೂ ಇತರರು ಈ ತಂಡದಲ್ಲಿದ್ದರು.



**ರಾಷ್ಟ್ರೀಯ ಏಕತೆಯ ಪ್ರಬಲ ಪ್ರತಿಬಿಂಬ: ಏಳು ನಿಯೋಗಗಳ ನೇತೃತ್ವವನ್ನು ಇವರು ವಹಿಸಿದ್ದರು**



ಶಶಿ ತರೂರ್, ಕಾಂಗ್ರೆಸ್



ರವಿ ಶಂಕರ್, ಪ್ರಸಾದ್ ಬಿಜೆಪಿ



ಸಂಜಯ್ ಕುಮಾರ್ ಜಾ, ಜೆಡಿಯು



ಬೈಜಯಂತ್ ಪಾಂಡಾ, ಬಿಜೆಪಿ



ಕನಿಮೋಳಿ ಕರುಣಾನಿಧಿ, ಡಿಎಂಕೆ



ಸುಪ್ರಿಯಾ ಸುಳೆ, ಎನ್.ಸಿ.ಪಿ.



ಶ್ರೀ ಕಾಂತ್ ಏಕನಾಥ್ ಶಿಂಧೆ, ಶಿವಸೇನಾ.




ಪ್ರಾಯೋಜಿತ ಭಯೋತ್ಪಾದನೆಯ ಸತ್ಯವನ್ನು ಜಗತ್ತಿಗೆ ಪ್ರಸ್ತುತಪಡಿಸಿತು.

ಇದು ಭಯೋತ್ಪಾದನೆಯ ವಿರುದ್ಧ ಭಾರತದ ಸಾಮೂಹಿಕ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. ಸರ್ವಪಕ್ಷ ನಿಯೋಗವು ಭಯೋತ್ಪಾದನೆಯ ಎಲ್ಲಾ ರೂಪ ಮತ್ತು ಸ್ವರೂಪಗಳನ್ನು ಎದುರಿಸಲು ಭಾರತದ ರಾಷ್ಟ್ರೀಯ ಒಮ್ಮತ ಮತ್ತು ಬಲವಾದ ವಿಧಾನವನ್ನು ಪ್ರದರ್ಶಿಸಿತು. ಅಲ್ಲದೆ, ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ನೀತಿಯ ಬಲವಾದ ಸಂದೇಶವನ್ನು ಜಗತ್ತಿಗೆ ನೀಡಲಾಯಿತು. ●


G
S
T



# ಆರ್ಥಿಕತೆಯ ಅಮೃತ ಯಾತ್ರೆ

*ಸ್ವಾತಂತ್ರ್ಯದ 67 ವರ್ಷಗಳ ನಂತರ, 2014ರ ಹೊತ್ತಿಗೆ, ದೇಶದ ಜಿಡಿಪಿ $2.04 ಟ್ರಿಲಿಯನ್ ತಲುಪಿತು. ದೇಶದ ಆರ್ಥಿಕತೆಯನ್ನು ಬಲಪಡಿಸುವ ಸುಧಾರಣೆಗಳು ಅಗತ್ಯವಾಗಿದ್ದವು. ಈ ಸುಧಾರಣೆಗಳು ಈ ಹಿಂದಿನ ತೊಂದರೆಗಳ ನಡುವೆ ಪ್ರಾರಂಭವಾದವು. ಈ ಸುಧಾರಣೆಗಳ ಪ್ರಯಾಣದಲ್ಲಿ ಒಂದು ಮೈಲಿಗಲ್ಲು ಜುಲೈ 1, 2017 ರಂದು ಜಿ ಎಸ್ ಟಿ ರೂಪದಲ್ಲಿ ಬಂದಿತು, ಇದಕ್ಕಾಗಿ ದೇಶವು 17 ವರ್ಷಗಳಿಂದ ಕಾಯುತ್ತಿತ್ತು. ಇದರ ಪರಿಣಾಮವಾಗಿ, ದೇಶವು ಮತ್ತೊಂದು ಪ್ರಮುಖ ಆರ್ಥಿಕ ಮೈಲಿಗಲ್ಲನ್ನು ಸಾಧಿಸಿದೆ, ಜಪಾನ್ ಅನ್ನು ಹಿಂದಿಕ್ಕಿ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಈ ಅಭೂತಪೂರ್ವ ಸಾಧನೆಯೊಂದಿಗೆ, ದೇಶವು ವಿಕಸಿತ ಭಾರತವನ್ನು ನಿರ್ಮಿಸುವತ್ತ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.*

**ದೇಶವು ಮುಂದುವರಿಯಬೇಕಾದರೆ, ಭಾರತವನ್ನು ಆಧುನಿಕತೆಯ ಹಾದಿಯತ್ತ ಕೊಂಡೊಯ್ಯುವುದನ್ನು ಬಿಟ್ಟು ಬೇರೆ ದಾರಿಯಿಲ್ಲ ಮತ್ತು ಇದನ್ನು ಸಾಧಿಸಬೇಕಾದರೆ ನಾವು ಸಮಯವನ್ನು ವ್ಯರ್ಥ ಮಾಡಬಾರದು ಎಂಬುದು ಬಹುಮುಖ್ಯವಾಗಿದೆ.**

ದೇಶದ ಉನ್ನತ ನಾಯಕತ್ವದ ದೃಢಸಂಕಲ್ಪವು ತುಂಬಾ ಪ್ರಬಲವಾಗಿದ್ದಾಗ, ಫಲಿತಾಂಶಗಳು ಯಾವಾಗಲೂ ಅಭೂತಪೂರ್ವವಾಗಿರುತ್ತವೆ. ವಿಕಸಿತ ಭಾರತದ ಸಂಕಲ್ಪದೊಂದಿಗೆ ಅಮೃತ ಯಾತ್ರೆಯತ್ತ ಸಾಗುತ್ತಿರುವ ಭಾರತಕ್ಕೆ, ದೇಶವು ಪ್ರಧಾನಿ ನರೇಂದ್ರ ಮೋದಿಯವರ ದೃಷ್ಟಿಕೋನವನ್ನು ಸಾಕಾರಗೊಳಿಸಿ ಒಂದು ಪ್ರಮುಖ ಆರ್ಥಿಕ ಮೈಲಿಗಲ್ಲನ್ನು ಸಾಧಿಸಿದೆ ಎಂಬುದಕ್ಕಿಂತ ಹೆಚ್ಚಿನ ಸಂತೋಷಕರವಾದದ್ದು ಇನ್ನೇನಿದೆ. ಇಂದು ಭಾರತವು $4 ಟ್ರಿಲಿಯನ್ ಗಿಂತಲೂ ಹೆಚ್ಚು ಆರ್ಥಿಕತೆಯೊಂದಿಗೆ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಅಂತಾರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಇತ್ತೀಚಿನ ವರದಿಯ ಪ್ರಕಾರ, ಭಾರತವು ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ.

ಐಎಂಎಫ್ ಪ್ರಕಾರ, ಭಾರತದ ಜಿಡಿಪಿ ಈಗ $4.19 ಟ್ರಿಲಿಯನ್ ತಲುಪಿದೆ. ಜಪಾನ್ ಅನ್ನು ಹಿಂದಿಕ್ಕುವ ಮೂಲಕ ಭಾರತ ಈ ಸಾಧನೆ ಮಾಡಿದೆ.

ಹಿಂದಿನ ದತ್ತಾಂಶದ ಮೇಲೆ ಭವಿಷ್ಯವನ್ನು ನಿರ್ಮಿಸಲಾಗುವುದಿಲ್ಲ ಎಂದು ಹೇಳಲಾಗುತ್ತದೆ. ಇದಕ್ಕಾಗಿ, ವರ್ತಮಾನವು ಸರಿಯಾದ ಹಾದಿಯಲ್ಲಿ ಸಾಗಬೇಕಾಗುತ್ತದೆ. 2014 ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಅಧಿಕಾರ ವಹಿಸಿಕೊಂಡಾಗ, ಭಾರತದ ಆರ್ಥಿಕತೆಯನ್ನು ಮತ್ತೆ ಹಳಿಗೆ ತರಲು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದರು. ಆರ್ಥಿಕ ಚಲನೆಯಲ್ಲಿ ವೇಗನಿಯಂತ್ರಕಗಳಾಗಿ ಕಾರ್ಯನಿರ್ವಹಿಸುತ್ತಿದ್ದ ಆ ಅಡೆತಡೆಗಳನ್ನು ಮುರಿಯಲು ಪ್ರಧಾನಿ ಮೋದಿ ಮೊದಲು ಉಪಕ್ರಮ ತೆಗೆದುಕೊಂಡರು. ಹೂಡಿಕೆಗೆ ಬಲವಾದ ವಾತಾವರಣವನ್ನು ಸೃಷ್ಟಿಸಲು, ಅನಗತ್ಯ ಕಾನೂನುಗಳನ್ನು ತೆಗೆದುಹಾಕಲಾಯಿತು, ಕೈಗಾರಿಕೆಗಳು ಮತ್ತು ಹೂಡಿಕೆದಾರರಿಗೆ ಏಕಗವಾಕ್ಷಿ ಅನುಮತಿ, ಅನುಕೂಲಕರ ನೀತಿ ಚೌಕಟ್ಟು ಮತ್ತು ಉತ್ತಮ ಮೂಲಸೌಕರ್ಯವನ್ನು ನಿರ್ಮಿಸಲಾಯಿತು ಮತ್ತು ವ್ಯವಹಾರ ಮಾಡುವ ಸುಲಭತೆಯಲ್ಲಿ ಅಗಾಧ ಸುಧಾರಣೆಗಳನ್ನು ತರಲಾಯಿತು. ಇದರೊಂದಿಗೆ, ಉತ್ತಮ ಆಡಳಿತದ ಆಧಾರದ ಮೇಲೆ ತಂತ್ರಜ್ಞಾನವನ್ನು ಆರ್ಥಿಕ ಪ್ರಗತಿಯೊಂದಿಗೆ ಸಂಯೋಜಿಸುವ ಮೂಲಕ, ಹೂಡಿಕೆಗೆ ಬಲವಾದ ವಾತಾವರಣವನ್ನು ಸೃಷ್ಟಿಸಲಾಯಿತು, ಭಾರತವು ಪ್ರಪಂಚದಾದ್ಯಂತದ ಹೂಡಿಕೆದಾರರಿಗೆ ಅತ್ಯಂತ ಪ್ರಮುಖ ಕೇಂದ್ರವಾಗಿ ಹೊರಹೊಮ್ಮಿತು. ಪ್ರಧಾನಿ ನರೇಂದ್ರ ಮೋದಿಯವರ "ವಿಕಸಿತ ಭಾರತ @2047" ದೃಷ್ಟಿಕೋನದೊಂದಿಗೆ, ಜಾಗತಿಕ ಸನ್ನಿವೇಶದಲ್ಲಿ ಅನಿವಾರ್ಯ ಶಕ್ತಿಯಾಗಿ ತನ್ನನ್ನು ತಾನು ಸ್ಥಾಪಿಸಿಕೊಳ್ಳುವತ್ತ ಭಾರತವು ಮತ್ತೊಂದು ಪ್ರಮುಖ ಹೆಜ್ಜೆ ಇಟ್ಟಿದೆ. ಅದಕ್ಕಾಗಿಯೇ ಪ್ರಧಾನಿ ನರೇಂದ್ರ ಮೋದಿ ಹೇಳುತ್ತಾರೆ, "ಇಂದು ನಾವು ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದ್ದೇವೆ. ನಾವು ಈಗ ಜಪಾನ್ ಅನ್ನು ಮೀರಿಸಿ ಮುಂದೆ ಸಾಗಿದ್ದೇವೆ ಎಂದು ಯಾರಾದರೂ ತೃಪ್ತರಾಗಬಹುದು. ನನಗೆ ನೆನಪಿದೆ, ನಾವು 6 ರಿಂದ 5 ನೇ ಸ್ಥಾನಕ್ಕೆ ಬಂದಾಗ, ದೇಶದಲ್ಲಿ ವಿಭಿನ್ನ ರೀತಿಯ ಉತ್ಸಾಹವಿತ್ತು, ವಿಶೇಷವಾಗಿ ಯುವಕರು ತುಂಬಾ ಉತ್ಸುಕರಾಗಿದ್ದರು ಮತ್ತು ಇದಕ್ಕೆ ಕಾರಣವೆಂದರೆ 250 ವರ್ಷಗಳ ಕಾಲ ನಮ್ಮನ್ನು ಆಳಿದ ಬ್ರಿಟನ್ ಅನ್ನು ಹಿಂದಿಕ್ಕುವ ಮೂಲಕ ನಾವು 5 ನೇ ಸ್ಥಾನಕ್ಕೆ ಏರಿದೆವು. ಆದರೆ ಈಗ, ನಾಲ್ಕನೇ ಸ್ಥಾನಕ್ಕೆ ಏರಿರುವ ಸಂತೋಷಕ್ಕಿಂತ ಹೆಚ್ಚಾಗಿ, 3 ನೇ ಸ್ಥಾನಕ್ಕೆ ಏರಬೇಕೆಂಬ ಒತ್ತಡವಿದೆ. ಈಗ ದೇಶ ಕಾಯಲು ಸಿದ್ಧವಿಲ್ಲ ಮತ್ತು ಯಾರಾದರೂ ಕಾಯಲು ಕೇಳಿದರೆ, "ಮೋದಿ ಹೈ ತೋ ಮುಮ್ಕಿನ್ ಹೈ" (ಮೋದಿ ಇದ್ದರೆ ಎಲ್ಲವೂ ಸಾಧ್ಯ) ಎಂಬ ಘೋಷಣೆಯು ಮೊಳಗುತ್ತದೆ.

ವಿಶ್ವಸಂಸ್ಥೆಯ ವರದಿಯ ಪ್ರಕಾರ, ಭಾರತವು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಉಳಿದಿದೆ. ವಿಶ್ವಸಂಸ್ಥೆಯ ವಿಶ್ವ ಆರ್ಥಿಕ ಪರಿಸ್ಥಿತಿ ಮತ್ತು ನಿರೀಕ್ಷೆಗಳು- WESP ಅರ್ಧವಾರ್ಷಿಕ ವರದಿಯ ಪ್ರಕಾರ, ಜಾಗತಿಕ ಅನಿಶ್ಚಿತತೆಯ ಹೊರತಾಗಿಯೂ, ಭಾರತದ ಆರ್ಥಿಕತೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇಕಡಾ 6.3 ರಷ್ಟು ಬೆಳೆಯುವ ನಿರೀಕ್ಷೆಯಿದೆ. ಈ ಬೆಳವಣಿಗೆ ಬಳಕೆ ಮತ್ತು ಖಾಸಗಿ ವಲಯದ ಉದ್ಯಮಗಳಲ್ಲಿನ ಸಾರ್ವಜನಿಕ ಹೂಡಿಕೆಯಿಂದ ನಡೆಯುತ್ತಿದೆ ಎಂದು ವಿಶ್ವಸಂಸ್ಥೆಯ ಹಿರಿಯ ಅರ್ಥಶಾಸ್ತ್ರಜ್ಞ ಇಂಗೊ ಪಿಟ್ಟರ್ಲೆ ಹೇಳುತ್ತಾರೆ. ವರದಿಯು ಭಾರತದ ಆರ್ಥಿಕತೆಯು ಮುಂದಿನ



**ನಮಗೆ ಒಂದು ದೊಡ್ಡ ಅವಕಾಶವಿದೆ. ನಾವು ಭಾರತದ ನಗರಗಳ ಆರ್ಥಿಕತೆಯ ಮೇಲೆ ಕೇಂದ್ರೀಕರಿಸಿದರೆ ನಾಲ್ಕನೇ ಸ್ಥಾನದಿಂದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗುವುದು ಸಾಧ್ಯವಾಗುತ್ತದೆ. ನಾವು ಅಲ್ಲಿಗೆ ಬಹಳ ವೇಗವಾಗಿ ತಲುಪಲು ಸಾಧ್ಯವಾಗುತ್ತದೆ. ಒಂದು ಕಾಲದಲ್ಲಿ - ಭಾರತ ಏಕೆ? ಎಂದು ಹೇಳಲಾಗುತ್ತಿತ್ತು. ಈಗ, ದೇಶದಲ್ಲಿ ಸುಧಾರಣೆಗಳ ಪರಿಣಾಮವನ್ನು ನೋಡಿದರೆ, 'ಭಾರತ ಯಾಕಾಗಬಾರದು?' ಎಂದು ಹೇಳಲಾಗುತ್ತಿದೆ.**

**- ನರೇಂದ್ರ ಮೋದಿ, ಪ್ರಧಾನಮಂತ್ರಿ**





ವರ್ಷ ಶೇಕಡಾ 6.4 ರಷ್ಟು ದರದಲ್ಲಿ ಬೆಳೆಯಲಿದೆ ಎಂದು ಅಂದಾಜಿಸಿದೆ.

**ಭಾರತೀಯ ಆರ್ಥಿಕತೆಯಲ್ಲಿ ಆಮೂಲಾಗ್ರ ಬದಲಾವಣೆಗಳು**

2013 ರಲ್ಲಿ ಭಾರತದ ಆರ್ಥಿಕತೆಯನ್ನು 'ದುರ್ಬಲ ಐದು' ಗುಂಪಿನ ಸದಸ್ಯ ಎಂದು ಪರಿಗಣಿಸಲಾಗಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತವು ಈಗ ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ. ಇದಕ್ಕಾಗಿ, ಆರ್ಥಿಕ ಮಟ್ಟದಲ್ಲಿ ಅನೇಕ ಪ್ರಮುಖ ಸುಧಾರಣೆಗಳನ್ನು ಮಾಡಲಾಯಿತು. ಮೊದಲನೆಯದಾಗಿ, ಹಣದುಬ್ಬರವನ್ನು ನಿಯಂತ್ರಿಸಲಾಯಿತು, ವ್ಯವಹಾರ ಮಾಡುವ ಸುಲಭತೆಯನ್ನು ಉತ್ತೇಜಿಸಲಾಯಿತು ಮತ್ತು ಈಗ ಭಾರತವು ವಿಶ್ವ ಶ್ರೇಯಾಂಕದಲ್ಲಿ 2014 ರಲ್ಲಿದ್ದ 142 ನೇ ಸ್ಥಾನದಿಂದ 63 ನೇ ಸ್ಥಾನಕ್ಕೆ ಜಿಗಿದಿದೆ.

ಹಣಕಾಸಿನ ಕೊರತೆಯನ್ನು ಕಡಿಮೆ ಮಾಡಲು




ಉಪಕ್ರಮಗಳನ್ನು ತೆಗೆದುಕೊಳ್ಳಲಾಯಿತು. ತೆರಿಗೆ ಜಾಲವನ್ನು ತೆಗೆದುಹಾಕುವ ಮೂಲಕ ಒಂದು ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಎನ್ ಪಿ ಎ ಗಳನ್ನು ಕಡಿಮೆ ಮಾಡಲು ಬ್ಯಾಂಕಿಂಗ್ ಸುಧಾರಣೆಗಳಿಗೆ ಒತ್ತು ನೀಡಲಾಯಿತು. ಮನೆ ಖರೀದಿಸಲು ಬ್ಯಾಂಕುಗಳಿಂದ ಪಡೆದ ಸಾಲಗಳ ಮೇಲಿನ ಬಡ್ಡಿದರದಲ್ಲಿನ ಕಡಿತದಿಂದಾಗಿ ಮನೆ ಖರೀದಿಸುವ ಕೋಟ್ಯಂತರ ಜನರ ಕನಸು ನನಸಾಯಿತು. ಈ ಎಲ್ಲಾ ಸಂಗತಿಗಳು ಭಾರತೀಯ ಆರ್ಥಿಕತೆಯ ಸಕಾರಾತ್ಮಕ ಚಿತ್ರಣವನ್ನು ತೋರಿಸುತ್ತವೆ ಮತ್ತು ಭಾರತವು ಪ್ರಮುಖ ಆರ್ಥಿಕ ಶಕ್ತಿಯಾಗುವತ್ತ ಸಾಗುತ್ತಿದೆ ಎಂದು ಸೂಚಿಸುತ್ತವೆ.

ದೊಡ್ಡ ವಿಪತ್ತಿನ ಸಮಯದಲ್ಲಿ ಯಾವುದೇ ಸರ್ಕಾರವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸುಲಭವಲ್ಲ. ಅದು ಕೂಡ, ಕೋವಿಡ್-19 ನಂತಹ ಸಾಂಕ್ರಾಮಿಕ ರೋಗದ ಹರಡುವಿಕೆಯು ಭಾರತದ ಸಂದರ್ಭದಲ್ಲಿ ಆರ್ಥಿಕತೆಯನ್ನು ನಿರುತ್ಸಾಹಗೊಳಿಸುತ್ತದೆ ಎಂದು ಎಂದು ಕರೆಯಲ್ಪಟ್ಟಾಗ ಅದು ಅಸಾಧ್ಯವಾಗಿತ್ತು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು ಸವಾಲುಗಳನ್ನು ಅವಕಾಶಗಳನ್ನಾಗಿ ಪರಿವರ್ತಿಸಲು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಭ್ಯಾಸವನ್ನು ಹೊಂದಿದ್ದಾರೆ. ವಿಪತ್ತುಗಳಲ್ಲಿ ಅವಕಾಶಗಳನ್ನು ಕಂಡುಕೊಳ್ಳುವುದು ಮತ್ತು ಸವಾಲುಗಳನ್ನು ನಿಭಾಯಿಸುವುದು ಪ್ರಧಾನಿ ಮೋದಿಯವರ ನಾಯಕತ್ವದ ವಿಶೇಷತೆಯಾಗಿದೆ.

**“**

**ಕಳೆದ ದಶಕದಲ್ಲಿ, ನಮ್ಮ ಸರ್ಕಾರವು 'ವ್ಯವಹಾರ ಮಾಡುವ ಭಯ'ವನ್ನು 'ವ್ಯವಹಾರ ಮಾಡುವ ಸುಲಭತೆ'ಯಾಗಿ ಪರಿವರ್ತಿಸಿದೆ. ಮೂಲಸೌಕರ್ಯದಲ್ಲಿ ಅಭೂತಪೂರ್ವ ಅಭಿವೃದ್ಧಿ ಕಂಡುಬಂದಿದೆ, ಇದು ಲಾಜಿಸ್ಟಿಕ್ಸ್ ವೆಚ್ಚವನ್ನು ಕಡಿಮೆ ಮಾಡಿದೆ ಮತ್ತು ದಕ್ಷತೆಯನ್ನು ಹೆಚ್ಚಿಸಿದೆ. ಅಭಿವೃದ್ಧಿ ಹೊಂದಿದ ಭಾರತದತ್ತ ಪ್ರಯಾಣದಲ್ಲಿ ನಮ್ಮ ಸರ್ಕಾರವು ಖಾಸಗಿ ವಲಯವನ್ನು ಪ್ರಮುಖ ಪಾಲುದಾರ ಎಂದು ಪರಿಗಣಿಸುತ್ತದೆ.**

**- ನರೇಂದ್ರ ಮೋದಿ, ಪ್ರಧಾನಮಂತ್ರಿ**

## ಭಾರತದ ಆರ್ಥಿಕತೆಯು 10 ವರ್ಷಗಳಲ್ಲಿ ಶೇ.105 ರಷ್ಟು ದರದಲ್ಲಿ ಬೆಳೆದಿದೆ

ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಪ್ರಕಾರ, 2015 ಮತ್ತು 2025 ರ ನಡುವೆ ಭಾರತದ ಆರ್ಥಿಕತೆಯು ಸುಮಾರು ಶೇ. 105 ರಷ್ಟು ದರದಲ್ಲಿ ಬೆಳೆದಿದೆ. ಇದು ವಿಶ್ವದ ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೋಲಿಸಿದರೆ ಅತ್ಯಂತ ವೇಗದ ಆರ್ಥಿಕ ಬೆಳವಣಿಗೆಯಾಗಿದೆ. ಈ 10 ವರ್ಷಗಳ ಅವಧಿಯಲ್ಲಿ, ಅಮೆರಿಕದ ಜಿಡಿಪಿ ಗಾತ್ರವು ಶೇ. 66 ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ. ಇದು $18.3 ಟ್ರಿಲಿಯನ್ ನಿಂದ $30.3 ಟ್ರಿಲಿಯನ್ ಗೆ ಏರಿಕೆಯಾಗಲಿದೆ. ಚೀನಾದ ಆರ್ಥಿಕತೆಯು $11.1 ಟ್ರಿಲಿಯನ್ ನಿಂದ $19.5 ಟ್ರಿಲಿಯನ್ ಗೆ ಏರಿಕೆಯಾಗಲಿದೆ, ಇದು ಶೇ. 46 ರಷ್ಟು ಬೆಳವಣಿಗೆಯಾಗಿರುತ್ತದೆ.

### ವೃತ್ತಾಕಾರದ (ಮರುಬಳಕೆ) ಆರ್ಥಿಕತೆಯನ್ನು ಉತ್ತೇಜಿಸುವಲ್ಲಿ ಭಾರತವು ಮುಂಚೂಣಿಯಲ್ಲಿದೆ

## ....ಇದು 2050ರ ವೇಳೆಗೆ $2 ಟ್ರಿಲಿಯನ್ ಮಾರುಕಟ್ಟೆಯಾಗಲಿದೆ

ಸಾಂಪ್ರದಾಯಿಕವಾದ 'ಟೇಕ್, ಮೇಕ್, ವೇಸ್ಟ್' ಉತ್ಪಾದನೆ ಮತ್ತು ಬಳಕೆ ಮಾದರಿಯನ್ನು ಬಹುತೇಕ ತ್ಯಜಿಸುವ ಮೂಲಕ, ವೃತ್ತಾಕಾರದ (ಮರುಬಳಕೆ) ಆರ್ಥಿಕತೆಯು 2030 ರ ವೇಳೆಗೆ ವಿಶ್ವಾದ್ಯಂತ $4.5 ಟ್ರಿಲಿಯನ್ ಹೆಚ್ಚುವರಿ ಆರ್ಥಿಕ ಉತ್ಪಾದನೆಯನ್ನು ಸೇರಿಸಬಹುದು. ನಿರ್ದಿಷ್ಟವಾಗಿ ಭಾರತಕ್ಕೆ ಸಂಬಂಧಿಸಿದಂತೆ, 2050 ರ ವೇಳೆಗೆ, ಭಾರತದ ವೃತ್ತಾಕಾರದ ಆರ್ಥಿಕತೆಯು $2 ಟ್ರಿಲಿಯನ್ ಗೂ ಹೆಚ್ಚಿನ ಮಾರುಕಟ್ಟೆ ಮೌಲ್ಯವನ್ನು ಉತ್ಪಾದಿಸಬಹುದು ಎಂದು ಅಂದಾಜಿಸಲಾಗಿದೆ. ಅಷ್ಟೇ ಅಲ್ಲದೆ, ಇದು ಸುಮಾರು ಹತ್ತು ಮಿಲಿಯನ್ ಉದ್ಯೋಗಗಳನ್ನು ಸಹ ಸೃಷ್ಟಿಸಬಹುದು. ಕಳೆದ 11 ವರ್ಷಗಳಲ್ಲಿ, ವೃತ್ತಾಕಾರದ ಆರ್ಥಿಕತೆಯನ್ನು ಉತ್ತೇಜಿಸಲು ಭಾರತ ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿದೆ. ಇದೇ ಕಾರಣಕ್ಕೆ ಭಾರತವು ತನ್ನ ಇಂಗಾಲದ ಹೊರಸೂಸುವಿಕೆ ಮತ್ತು ಪರಿಸರ ಗುರಿಗಳನ್ನು ಗಡುವಿಗಿಂತ ಮುಂಚಿತವಾಗಿಯೇ ಸಾಧಿಸುತ್ತಿದೆ.

- 11 ತ್ಯಾಜ್ಯ ವರ್ಗಗಳಿಗೆ ವೃತ್ತಾಕಾರದ ಆರ್ಥಿಕ ಕ್ರಿಯಾ ಯೋಜನೆಗಳನ್ನು ಅಂತಿಮಗೊಳಿಸಲಾಗಿದೆ.
- ಪ್ಲಾಸ್ಟಿಕ್ ಪ್ಯಾಕೇಜಿಂಗ್ ತ್ಯಾಜ್ಯ, ಬ್ಯಾಟರಿ ತ್ಯಾಜ್ಯ, ಇ-ತ್ಯಾಜ್ಯ, ಟೈರ್ ತ್ಯಾಜ್ಯ, ಬಳಸಿದ ಎಣ್ಣೆ ಮತ್ತು ಅವಧಿ ಮುಗಿದ ವಾಹನಗಳಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಆಧಾರಿತ ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್) ತತ್ವವನ್ನು ಒಳಗೊಂಡಿರುವ ನಿಯಮಗಳನ್ನು ಅಧಿಸೂಚಿಸಲಾಗಿದೆ.
- ಯು ಎನ್ ಎಫ್ ಸಿ ಸಿ ಸಿ ಮತ್ತು ಅದರ ಪ್ಯಾರಿಸ್ ಒಪ್ಪಂದದ ಪಕ್ಷವಾಗಿ, ಭಾರತವು 2015 ರಲ್ಲಿ ತನ್ನ ಮೊದಲ ರಾಷ್ಟ್ರೀಯವಾಗಿ ನಿರ್ಧರಿಸಿದ ಕೊಡುಗೆ (ಎನ್ ಡಿ ಸಿ) ಯನ್ನು ಮಂಡಿಸಿತು.
- 2070 ರ ವೇಳೆಗೆ ನಿವ್ವಳ ಶೂನ್ಯ ಹೊರಸೂಸುವಿಕೆಯನ್ನು ಸಾಧಿಸಲು ಭಾರತವು ತನ್ನ ದೀರ್ಘಕಾಲೀನ ಕಡಿಮೆ-ಹೊರಸೂಸುವಿಕೆ ಬೆಳವಣಿಗೆಯ ತಂತ್ರವನ್ನು ಸಹ ಪ್ರಸ್ತುತಪಡಿಸಿದೆ. ಭಾರತವು ಹಸಿರುಮನೆ ಅನಿಲ ಹೊರಸೂಸುವಿಕೆಯಿಂದ ಆರ್ಥಿಕ ಬೆಳವಣಿಗೆಯನ್ನು ಬೇರ್ಪಡಿಸಿದೆ.
- ಈ ವೇದಿಕೆಯ ಪ್ರಮುಖ ಫಲಿತಾಂಶವಾದ ಜೈಪುರ ಘೋಷಣೆ (2025-2034) ಸ್ವಯಂಪ್ರೇರಿತ, ರಾಜಕೀಯೇತರ ಬದ್ಧತೆಯಾಗಿದ್ದು, ಮುಂದಿನ 10 ವರ್ಷಗಳಲ್ಲಿ ವೃತ್ತಾಕಾರದ ಆರ್ಥಿಕತೆಯತ್ತ ಸಾಗಲು ಮತ್ತು ಸಂಪನ್ಮೂಲ ದಕ್ಷತೆಯನ್ನು ಸುಧಾರಿಸಲು ಸಮಗ್ರ ಚೌಕಟ್ಟನ್ನು ಒದಗಿಸುತ್ತದೆ.

ಕೊರೊನಾದಂತಹ ಜಾಗತಿಕ ಸಾಂಕ್ರಾಮಿಕ ರೋಗವನ್ನು ಎದುರಿಸಲು ಸರ್ಕಾರವು ಒಂದು ಚೌಕಟ್ಟನ್ನು ರಚಿಸಲು ಇದೇ ಕಾರಣ, ಲಾಕ್ಡೌನ್ ಹೊರತಾಗಿಯೂ, ದೇಶದ ಪ್ರಗತಿ ನಿರಂತರವಾಗಿ ಮುಂದುವರಿಯಿತು. ಪ್ರಧಾನಿ ಮೋದಿ ಹೇಳುತ್ತಾರೆ, "ನಾವು ದೃಢನಿಶ್ಚಯದಿಂದ ಇದ್ದರೆ, ಯಾವುದೇ ಗುರಿ ಅಸಾಧ್ಯವಲ್ಲ, ಯಾವುದೇ ಮಾರ್ಗವು ಕಷ್ಟಕರವಲ್ಲ. ಇಂದು ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡುವ ಇಚ್ಛಾಶಕ್ತಿಯ ಜೊತೆಗೆ ಒಂದು ಮಾರ್ಗವೂ ಇದೆ." ಖಂಡಿತವಾಗಿಯೂ, ಭಾರತ ಸಂಪನ್ಮೂಲಗಳು ಮತ್ತು ಸಾಮರ್ಥ್ಯವನ್ನು ಮಾತ್ರವಲ್ಲದೆ, ವಿಶ್ವದ ಅತ್ಯುತ್ತಮ ಪ್ರತಿಭೆಗಳನ್ನು ಸಹ ಹೊಂದಿದೆ, ಅವರು ಒಮ್ಮೆ ನಾವು ಅದನ್ನು ಮಾಡಬಹುದು ಎಂದು ನಿರ್ಧರಿಸಿದರೆ, ಅದನ್ನು ಸಾಧಿಸುವವರೆಗೂ ನಿಲ್ಲುವುದಿಲ್ಲ. ಇದೇ ಕಾರಣಕ್ಕಾಗಿ ಅನೇಕ ದೇಶಗಳು ಮತ್ತು ರೇಟಿಂಗ್ ಏಜೆನ್ಸಿಗಳು ಮುಂಬರುವ ದಿನಗಳಲ್ಲಿ ಭಾರತವು ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಲಿದೆ ಎಂದು ಹೇಳುವಂತಾಗಿದೆ.

### ಹೊಸ ಆರ್ಥಿಕ ಗುರಿಗಳತ್ತ ಸಾಗುವುದು

2019 ರಲ್ಲಿ ವಿಶ್ವದ 5 ನೇ ಅತಿದೊಡ್ಡ ಆರ್ಥಿಕತೆಯಾಗುವ ಮೂಲಕ ಭಾರತವು ಒಂದು ಪ್ರಮುಖ ಮೈಲಿಗಲ್ಲನ್ನು ಸ್ಥಾಪಿಸಿತು ಮತ್ತು 2025 ರಲ್ಲಿ ಜಪಾನ್ ಅನ್ನು ಹಿಂದಿಕ್ಕಿ 4 ನೇ ಅತಿದೊಡ್ಡ ಆರ್ಥಿಕತೆಯಾಯಿತು. 2011 ರಲ್ಲಿ, ನಾವು 11 ನೇ ಸ್ಥಾನದಲ್ಲಿದ್ದೆವು. 250 ವರ್ಷಗಳ ಕಾಲ ದೇಶವನ್ನು ಆಳಿದ ಬ್ರಿಟನ್ ಕೂಡ ಭಾರತಕ್ಕಿಂತ ಹಿಂದಿದೆ. ಇದು ನವ ಭಾರತ ಮತ್ತು ಅದರ ಶಕ್ತಿಯ ಜೀವಂತ ಉದಾಹರಣೆಯಾಗಿದೆ. ಕಳೆದ ಕೆಲವು ವರ್ಷಗಳಿಂದ ಜಾಗತಿಕ ಆರ್ಥಿಕತೆಗೆ ಬಹಳ ಸವಾಲಿನದ್ದಾಗಿರುವ ಸಮಯದಲ್ಲಿ ಈ ಯಶಸ್ಸು ಸಿಕ್ಕಿದೆ, ಏಕೆಂದರೆ ಪ್ರಪಂಚದಾದ್ಯಂತದ ಆರ್ಥಿಕ ಚಟುವಟಿಕೆಗಳು ಕೋವಿಡ್-19 ಸಾಂಕ್ರಾಮಿಕ ರೋಗ ಮತ್ತು ರಷ್ಯಾ-ಉಕ್ರೇನ್ ಸಂಘರ್ಷದಂತಹ ಪ್ರಮುಖ ಘಟನೆಗಳಿಂದ ಚೇತರಿಸಿಕೊಳ್ಳುತ್ತಿವೆ. ಒಂದೆಡೆ, ಜಗತ್ತು ತನ್ನ ನೆಲೆಯನ್ನು ಕಂಡುಕೊಳ್ಳಲು ಹೆಣಗಾಡುತ್ತಿದ್ದರೆ, ಮತ್ತೊಂದೆಡೆ, ಭಾರತದ ಆರ್ಥಿಕತೆಯು ಹೊಸ ಎತ್ತರಕ್ಕೆ ಏರುತ್ತಿದೆ. ಜಾಗತಿಕ ಆರ್ಥಿಕ ಬೆಳವಣಿಗೆಯ ವಿಷಯದ ಕುರಿತು ತನ್ನ ಇತ್ತೀಚಿನ ಅಂದಾಜಿನಲ್ಲಿ ಅಂತಾರಾಷ್ಟ್ರೀಯ ಹಣಕಾಸು ನಿಧಿ ಭಾರತವನ್ನು ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆ ಎಂದು ಒಪ್ಪಿಕೊಂಡಿದೆ.

ಜಿ ಎಸ್ ಟಿ ಸಂಗ್ರಹದಲ್ಲಿನ ಗಣನೀಯ ಬೆಳವಣಿಗೆ, ಬಂಡವಾಳ ವೆಚ್ಚದಲ್ಲಿನ ಏರಿಕೆ ಮತ್ತು ಸಾಟಿಯಿಲ್ಲದ ರಫ್ತು ಕಾರ್ಯಕ್ಷಮತೆಯು ಸಾಂಕ್ರಾಮಿಕ ರೋಗದಿಂದ ಯಶಸ್ವಿಯಾಗಿ ಚೇತರಿಸಿಕೊಂಡಿರುವ ಜೊತೆಗೆ ಜಾಗತಿಕ ರಾಜಕೀಯ ಅನಿಶ್ಚಿತತೆಯ ನಡುವೆಯೂ ಅತ್ಯಂತ ವೇಗವಾಗಿ ಬೆಳೆದಿರುವ ಚೈತನ್ಯಶೀಲ ಮತ್ತು ಸ್ಥಿತಿಸ್ಥಾಪಕ

## ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ

ಅಂತಾರಾಷ್ಟ್ರೀಯ ಹಣಕಾಸು ನಿಧಿಯ ವಿಶ್ವ ಆರ್ಥಿಕ ಮುನ್ನೋಟ 2025ರ ಪ್ರಕಾರ, ಭಾರತವು ಈ ವರ್ಷವೂ ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿ ಉಳಿಯುತ್ತದೆ. 2024-25ರ ಆರ್ಥಿಕ ಸಮೀಕ್ಷೆಯು 2025-26 ರಲ್ಲಿ ಶೇ.6.3 ರಿಂದ ಶೇ.6.8 ದರದಲ್ಲಿ ಬೆಳೆಯಲಿದೆ ಎಂದು ಅಂದಾಜಿಸಿದೆ. ವಿವಿಧ ಜಾಗತಿಕ ಸಂಸ್ಥೆಗಳ ಅಂದಾಜಿನ ಪ್ರಕಾರ, ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿರುತ್ತದೆ.




## ಭಾರತದ ಜಿಡಿಪಿ ಪಯಣ

| ಜಿಡಿಪಿ | ವರ್ಷ |
|---|---|
| 1 ಟ್ರಿಲಿಯನ್ ಡಾಲರ್ | 2007 (ಸ್ವಾತಂತ್ರ್ಯದ 60 ವರ್ಷಗಳ ನಂತರ) |
| 2 ಟ್ರಿಲಿಯನ್ ಡಾಲರ್ | 2014 (7 ವರ್ಷಗಳಲ್ಲಿ ದ್ವಿಗುಣಗೊಂಡಿತು) |
| 3 ಟ್ರಿಲಿಯನ್ ಡಾಲರ್ | 2021 (7 ವರ್ಷಗಳನ್ನು ತೆಗೆದುಕೊಂಡಿತು) |
| 4 ಟ್ರಿಲಿಯನ್ ಡಾಲರ್ | 2025 (ಕೇವಲ 4 ವರ್ಷಗಳನ್ನು ತೆಗೆದುಕೊಂಡಿತು) |

## ವಿಶ್ವದ ಅಗ್ರ 5 ಆರ್ಥಿಕತೆಗಳು

ಐಎಂಎಫ್ ನ ಇತ್ತೀಚಿನ ವರದಿಯ ಪ್ರಕಾರ, ಭಾರತವು ಈಗ ವಿಶ್ವದ ನಾಲ್ಕನೇ ಅತಿದೊಡ್ಡ ಆರ್ಥಿಕತೆಯಾಗಿದೆ. ಐಎಂಎಫ್ ಪ್ರಕಾರ, ಭಾರತದ ಜಿಡಿಪಿ ಈಗ 4.19 ಟ್ರಿಲಿಯನ್ ಡಾಲರ್‌ಗಳನ್ನು ತಲುಪಿದೆ. ಮುಖ್ಯವಾದ ವಿಷಯವೆಂದರೆ ಈ ಪ್ರಕ್ರಿಯೆಯಲ್ಲಿ ಭಾರತವು ಜಪಾನ್ ಅನ್ನು ಹಿಂದಿಕ್ಕಿದೆ. ಐಎಂಎಫ್ ನ ಇತ್ತೀಚಿನ ಮಾಹಿತಿಯ ಪ್ರಕಾರ, ವಿಶ್ವದ ಅಗ್ರ ಆರ್ಥಿಕತೆಗಳ ಪಟ್ಟಿ ಈ ಕೆಳಗಿನಂತಿದೆ.




ಭಾರತದ ಆರ್ಥಿಕ ಬೆಳವಣಿಗೆ 2025 ರಲ್ಲಿ ಶೇ.6.2 ಮತ್ತು 2026 ರಲ್ಲಿ ಶೇ.6.3 ಎಂದು ಅಂದಾಜಿಸಲಾಗಿದೆ ಎಂದು ಐಎಂಎಫ್ ಹೇಳುತ್ತದೆ. 2027ರ ವೇಳೆಗೆ ಭಾರತವು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಬೆಳವಣಿಗೆಯ ದರವು ವಿಶ್ವದ ಇತರ ಪ್ರಮುಖ ಆರ್ಥಿಕತೆಗಳಿಗಿಂತ ಹೆಚ್ಚಾಗಿದೆ.

ಆರ್ಥಿಕತೆಯನ್ನು ಪ್ರದರ್ಶಿಸುತ್ತದೆ.

ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಆರ್ಥಿಕ ನೀತಿಗಳ ಸರಿಯಾದ ನಿರ್ವಹಣೆ ಮತ್ತು ಸಮಗ್ರ ವಿಧಾನದೊಂದಿಗೆ ಅದನ್ನು ಸರಿಯಾದ ದಿಕ್ಕಿನಲ್ಲಿ ಕೊಂಡೊಯ್ಯುವ ನಂತರದ ಕ್ರಮಗಳು ಇದರ ಮೂಲತತ್ವವಾಗಿದೆ, ಇದು ಭಾರತದ ಆರ್ಥಿಕತೆಯನ್ನು ಬಲಪಡಿಸಿದೆ. ಉತ್ಪಾದನಾ ವಲಯದಲ್ಲಿ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಲು ಕೇಂದ್ರ ಸರ್ಕಾರವು 'ಆತ್ಮನಿರ್ಭರ ಭಾರತ' ಮತ್ತು 'ಮೇಕ್ ಇನ್ ಇಂಡಿಯಾ' ಉಪಕ್ರಮದ ಅಡಿಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಪ್ರಾರಂಭಿಸಿದೆ.

14 ವಲಯಗಳಲ್ಲಿ ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ (ಪಿ ಎಲ್ ಐ) ಯೋಜನೆಯು ಈ ವಲಯಕ್ಕೆ ಮತ್ತಷ್ಟು ಉತ್ತೇಜನ ನೀಡಿದೆ. ಈ ಉತ್ಪಾದನೆ-ಸಂಬಂಧಿತ ಪ್ರೋತ್ಸಾಹಕ ಯೋಜನೆಯನ್ನು ತರುವ ಉದ್ದೇಶವೆಂದರೆ ದೇಶೀಯ ಉತ್ಪಾದನೆಯನ್ನು ಜಾಗತಿಕವಾಗಿ ಸ್ಪರ್ಧಾತ್ಮಕವಾಗಿಸುವುದು ಮತ್ತು ದೇಶೀಯ ಉದ್ಯಮಿಗಳನ್ನು ಸಿದ್ಧಪಡಿಸುವುದು. ಪಿ ಎಲ್ ಐ ಯೋಜನೆಗಳು ಲಕ್ಷಾಂತರ ಉದ್ಯೋಗಾವಕಾಶಗಳನ್ನು ಸೃಷ್ಟಿಸಿವೆ ಮತ್ತು ಭಾರತೀಯ ಆರ್ಥಿಕತೆಯನ್ನು ಬೆಳವಣಿಗೆಯ ವೇಗದ ಹಾದಿಯಲ್ಲಿ ಇರಿಸಿವೆ. ಭಾರತದ ಮೊಬೈಲ್ ಉತ್ಪಾದನಾ ವಲಯವು ಪ್ರಧಾನಿ ನರೇಂದ್ರ ಮೋದಿಯವರ ಚಿಂತನೆ ಮತ್ತು ಅದನ್ನು ಅದರ ಗರಿಷ್ಠ ಸಾಮರ್ಥ್ಯಕ್ಕೆ ಕೊಂಡೊಯ್ಯುವ ಅವರ ದೃಷ್ಟಿಕೋನಕ್ಕೆ ಒಂದು ಉದಾಹರಣೆಯಾಗಿದೆ. ಈ ಹಿಂದೆ

# ಜಿ ಎಸ್ ಟಿ ವ್ಯವಹಾರದ ಹಾದಿಯನ್ನು ಸುಲಭಗೊಳಿಸಿದೆ

ಜೂನ್ 30 - ಜುಲೈ 1, 2017 ರ ಮಧ್ಯರಾತ್ರಿಯಲ್ಲಿ, ಒಕ್ಕೂಟ ವ್ಯವಸ್ಥೆಯ ಒಂದು ಉತ್ತಮ ಉದಾಹರಣೆಯಾಗಿ ದೇಶವು 17 ವರ್ಷಗಳ ಪ್ರಯಾಣವನ್ನು ವಾಸ್ತವವಾಗಿಸಿತು. ಜಿ ಎಸ್ ಟಿ ಯು ಅರ್ಥಶಾಸ್ತ್ರದ ಜಗತ್ತಿನಲ್ಲಿ ಒಂದು ಕ್ರಾಂತಿಯಾಯಿತು, ಇದು ಇಡೀ ದೇಶಕ್ಕೆ ನಿರ್ದೇಶನ ಮತ್ತು ಆರ್ಥಿಕತೆಗೆ ಹೊಸ ಆಯಾಮವನ್ನು ನೀಡಿತು. ಜಿ ಎಸ್ ಟಿ ಯ ಪೂರ್ಣ ಹೆಸರು ಸರಕು ಮತ್ತು ಸೇವಾ ತೆರಿಗೆ. ಜಿ ಎಸ್ ಟಿ ಜಾರಿಗೆ ಬಂದಾಗ, ಪ್ರಧಾನಿ ನರೇಂದ್ರ ಮೋದಿ ಇದನ್ನು ಉತ್ತಮ ಮತ್ತು ಸರಳ ತೆರಿಗೆ ಎಂದು ಕರೆದರು. ಜಿ ಎಸ್ ಟಿ ಗೆ ಮೊದಲು, ದೇಶ ಮತ್ತು ರಾಜ್ಯಗಳಲ್ಲಿದ್ದ ತೆರಿಗೆ ವ್ಯವಸ್ಥೆಯಲ್ಲಿ, ಉದ್ಯಮಿಗಳು ಹಲವು ರೀತಿಯ ತೆರಿಗೆಗಳನ್ನು ಎದುರಿಸಬೇಕಾಗಿತ್ತು. ಆದರೆ ಈಗ ಇಡೀ ದೇಶದಲ್ಲಿ ಏಕರೂಪದ ತೆರಿಗೆ ವ್ಯವಸ್ಥೆಯು ಅನ್ವಯಿಸುತ್ತದೆ.







ಮೊಬೈಲ್ ಫೋನ್ ಗಳ ಪ್ರಮುಖ ಆಮದುದಾರನಾಗಿದ್ದ ಭಾರತ, ಈಗ ಜಾಗತಿಕ ಉತ್ಪಾದನಾ ಕೇಂದ್ರವಾಗಿದೆ. ಮೊಬೈಲ್ ಫೋನ್ ಗಳ ಉತ್ಪಾದನೆಯು 2014-15ರಲ್ಲಿದ್ದ ಸುಮಾರು 60 ಮಿಲಿಯನ್ ನಿಂದ 2023-2024ರಲ್ಲಿ ಸುಮಾರು 330 ಮಿಲಿಯನ್ ಗೆ 5 ಪಟ್ಟು ಹೆಚ್ಚಾಗಿದೆ.

**ಉತ್ಪಾದನಾ ವಲಯವು ಆರ್ಥಿಕತೆಯ ಬೆನ್ನೆಲುಬಾಯಿತು**

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ ವಲಯ, ಅಂದರೆ, ಎಂ ಎಸ್ ಎಂ ಇ, ಭಾರತೀಯ ಆರ್ಥಿಕತೆಯ ಬಲವಾದ ಬೆನ್ನೆಲುಬು ಎಂದು ಪರಿಗಣಿಸಲಾಗಿದೆ.

> **ಇಂದು, ದೇಶವು ರಾಷ್ಟ್ರೀಯ ಹಿತಾಸಕ್ತಿಗಾಗಿ ಅತಿದೊಡ್ಡ ಅಪಾಯವನ್ನು ತೆಗೆದುಕೊಳ್ಳಲು ಸಿದ್ಧವಾಗಿರುವ ಸರ್ಕಾರವನ್ನು ಹೊಂದಿದೆ. ಈ ಹಿಂದೆ ಸರ್ಕಾರದಲ್ಲಿದ್ದವರು ರಾಜಕೀಯ ಅಪಾಯಗಳನ್ನು ತೆಗೆದುಕೊಳ್ಳುವ ಧೈರ್ಯವನ್ನು ತೋರದ ಕಾರಣದಿಂದಾಗಿ ಜಿ ಎಸ್ ಟಿ ಹಲವು ವರ್ಷಗಳ ಕಾಲ ಸ್ಥಗಿತಗೊಂಡಿತ್ತು. ನಾವು ಜಿ ಎಸ್ ಟಿ ಯನ್ನು ಜಾರಿಗೆ ತಂದಿದ್ದಲ್ಲದೆ, ಇಂದು ದಾಖಲೆಯ ಜಿ ಎಸ್ ಟಿ ಸಂಗ್ರಹವನ್ನು ನೋಡುತ್ತಿದ್ದೇವೆ.**
>
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**

# ಆರ್ಥಿಕ ಸುಧಾರಣೆಗೆ ತೆಗೆದುಕೊಂಡ ಪ್ರಮುಖ ಕ್ರಮಗಳು (2014-2024)




## ಸುಧಾರಣೆಗಳಿಂದ ತುಂಬಿದ ಪ್ರಯಾಣ

- 2014 ರಿಂದ, ಸುಮಾರು 40 ಸಾವಿರ ಅನಗತ್ಯ ಅನುಸರಣೆಗಳನ್ನು ತೆಗೆದುಹಾಕಲಾಗಿದೆ.
- ವ್ಯವಹಾರಕ್ಕೆ ಅಡ್ಡಿಯಾಗಿದ್ದ ಸುಮಾರು 3,800 ಕಾನೂನುಗಳನ್ನು ರದ್ದುಗೊಳಿಸಲಾಗಿದೆ ಅಥವಾ ಸರಳೀಕರಿಸಲಾಗಿದೆ.
- ಕಂಪನಿಗಳ ತಿದ್ದುಪಡಿ ಕಾಯ್ದೆ, ದಿವಾಳಿತನ ಮತ್ತು ಋಣಭಾರ ಸಂಹಿತೆ, ಏಕಗವಾಕ್ಷಿ ಅನುಮತಿ, ಕಾರ್ಪೊರೇಟ್ ತೆರಿಗೆಯಲ್ಲಿ ಕಡಿತ ಮತ್ತು ಪಿ ಎಲ್ ಐ ಯೋಜನೆಯಂತಹ ಪ್ರಮುಖ ಸುಧಾರಣೆಗಳು ಮತ್ತು ಯೋಜನೆಗಳು ಭಾರತದಲ್ಲಿ ವ್ಯವಹಾರ ಮಾಡುವುದನ್ನು ಸುಲಭಗೊಳಿಸಿವೆ.



**ವಿದೇಶಿ ನೇರ ಹೂಡಿಕೆ ನೀತಿಗಳ ಉದಾರೀಕರಣವು ಉದ್ಯಮಗಳಲ್ಲಿ ಹೂಡಿಕೆಗೆ ಹೊಸ ಮಾರ್ಗಗಳನ್ನು ತೆರೆದಿದೆ.**

ಇದನ್ನು ಬಲಪಡಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಹಲವು ಪ್ರಮುಖ ಕ್ರಮಗಳನ್ನು ಕೈಗೊಂಡರು. ಕೋವಿಡ್ ಸಮಯದಲ್ಲಿ, ಸರ್ಕಾರದ ತುರ್ತು ಸಾಲ ಖಾತರಿ ಯೋಜನೆಯು ಒಂದು ಕೋಟಿಗೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಸಹಾಯ ಮಾಡಿತು ಮತ್ತು ಅವುಗಳನ್ನು ಶಾಶ್ವತವಾಗಿ ಮುಚ್ಚದಂತೆ ಉಳಿಸಿತು. ಇದರೊಂದಿಗೆ, ಎಂ ಎಸ್ ಎಂ ಇ ವ್ಯಾಖ್ಯಾನವನ್ನು ಸಹ ಮೊದಲ ಬಾರಿಗೆ ತಿದ್ದುಪಡಿ ಮಾಡಲಾಯಿತು. ಕಾರ್ಮಿಕ ಮತ್ತು ಪರಿಸರ ಕಾನೂನುಗಳಲ್ಲಿನ ಬದಲಾವಣೆಗಳಂತಹ ಸುಧಾರಣೆಗಳು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ವಲಯವು ತನ್ನ ಕಾರ್ಯಾಚರಣೆಗಳನ್ನು ವಿಸ್ತರಿಸಲು ಮತ್ತು ಅಭಿವೃದ್ಧಿಯತ್ತ ಸಾಗಲು ದಾರಿ ಮಾಡಿಕೊಟ್ಟಿವೆ.

2014ರ ನಂತರ ಕೇಂದ್ರ ಸರ್ಕಾರದ ನೀತಿಗಳ ಪರಿಣಾಮವಾಗಿ, ಉತ್ಪಾದನಾ ವಲಯವು ಭಾರತೀಯ ಆರ್ಥಿಕತೆಯ ಬೆನ್ನೆಲುಬಾಗಿ ಹೊರಹೊಮ್ಮಿದೆ. ಮೇಕ್ ಇನ್ ಇಂಡಿಯಾದಂತಹ ಅಭಿಯಾನಗಳ ಪರಿಣಾಮವೆಂದರೆ ಜವಳಿ, ಔಷಧಗಳು, ಆಟೋಮೊಬೈಲ್, ರಾಸಾಯನಿಕಗಳು, ಉಕ್ಕು ಮತ್ತು ಎಲೆಕ್ಟ್ರಾನಿಕ್ಸ್ ನಂತಹ ಪ್ರಮುಖ ಉದ್ಯಮಗಳ ಬಲದ ಮೇಲೆ, ಭಾರತವು ಈಗ ಕೃಷಿ ವಲಯದ ಜೊತೆಗೆ ಇತರ ಉತ್ಪನ್ನಗಳ ಪ್ರಮುಖ ರಫ್ತುದಾರನಾಗಿ ಹೊರಹೊಮ್ಮಿದೆ. ಕಳೆದ 5 ವರ್ಷಗಳ ಡೇಟಾವನ್ನು ನಾವು ನೋಡಿದರೆ, ಈ ವಲಯವು ಸುಮಾರು 12.5

## 'ಗ್ರೋಥೇಡ್'ಗಾಗಿ ಬಲವಾದ ಅಡಿಪಾಯ

- ಭಾರತೀಯ ಉದ್ಯಮವು 2024-25ರಲ್ಲಿ ಐಪಿಒಗಳ ಮೂಲಕ ಸಾರ್ವಕಾಲಿಕ ಗರಿಷ್ಠ ರೂ. 1,62,387 ಕೋಟಿಗಳನ್ನು ಸಂಗ್ರಹಿಸಿದೆ.
- 2020 ರಲ್ಲಿ 4.9 ಕೋಟಿ ಇದ್ದ ಚಿಲ್ಲರೆ ಹೂಡಿಕೆದಾರರ ಸಂಖ್ಯೆ ಡಿಸೆಂಬರ್ 2024 ರಲ್ಲಿ 13.2 ಕೋಟಿಗೆ ಏರಿದೆ. ಈ ತ್ವರಿತ ಬೆಳವಣಿಗೆಯು ಭಾರತದ ದೀರ್ಘಕಾಲೀನ ಆರ್ಥಿಕ ಸಾಮರ್ಥ್ಯದಲ್ಲಿನ ಬಲವಾದ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.

2014 ರಲ್ಲಿ 91,287 ಕಿ.ಮೀ. ಇದ್ದ ರಾಷ್ಟ್ರೀಯ ಹೆದ್ದಾರಿಯು 2025 ರ ಮಾರ್ಚ್ ವೇಳೆಗೆ 1,46,204 ಕಿ.ಮೀ.ಗೆ ಹೆಚ್ಚಾಗಿದೆ.



**160** ವಿಮಾನ ನಿಲ್ದಾಣಗಳು ದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 145 ವಿಮಾನ ನಿಲ್ದಾಣಗಳು, 2 ವಾಟರ್ ಏರೋಡ್ರೋಮ್ಸ್ ಮತ್ತು 13 ಹೆಲಿಪೋರ್ಟ್ ಗಳು ಸೇರಿವೆ.



- ಹೊಸ ಉತ್ಪಾದನಾ ಘಟಕಗಳಿಗೆ 2024 ರವರೆಗೆ ತೆರಿಗೆ ದರವನ್ನು ಶೇ.15 ರಲ್ಲಿ ಕಾಯ್ದುಕೊಳ್ಳುವುದು ಮತ್ತು ನವೋದ್ಯಮಗಳಿಗೆ ಒಂದು ವರ್ಷದವರೆಗೆ ತೆರಿಗೆ ಪ್ರೋತ್ಸಾಹಗಳಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ವಲಯಗಳಿಗೆ ಉತ್ತೇಜನ ದೊರೆತಿದ್ದು, ಉದ್ಯೋಗ ಸೃಷ್ಟಿಯಾಗಿದೆ.
- ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕುಗಳ (ಎಸ್ ಸಿ ಬಿ) ಒಟ್ಟು ಅನುತ್ಪಾದಕ ಆಸ್ತಿ (ಜಿ ಎನ್ ಪಿ ಎ) ಅನುಪಾತವು ಡಿಸೆಂಬರ್ 2024 ರಲ್ಲಿ 12 ವರ್ಷಗಳ ಕನಿಷ್ಠ ಮಟ್ಟವಾದ ಶೇ.2.6 ಕ್ಕೆ ಇಳಿದಿದೆ.

**ಶೇ.32** ಎಲೆಕ್ಟ್ರಾನಿಕ್ ಸರಕುಗಳ ರಫ್ತಿನಲ್ಲಿ ಏರಿಕೆಯಾಗಿದೆ, 2024-25ರಲ್ಲಿ $38 ಬಿಲಿಯನ್ ತಲುಪಿದೆ.

**$374.1** ಬಿಲಿಯನ್ ಡಾಲರ್ 2024-25ನೇ ಹಣಕಾಸು ವರ್ಷದಲ್ಲಿ ಭಾರತದ ಪೆಟ್ರೋಲಿಯಂಯೇತರ ರಫ್ತು ಆಗಿತ್ತು, ಇದು ಸಾರ್ವಕಾಲಿಕ ಗರಿಷ್ಠವಾಗಿದೆ.

## ಕಳೆದ ದಶಕದಲ್ಲಿ ಭಾರತದ ಒಟ್ಟು ರಫ್ತು ಸ್ಥಿರವಾಗಿ ಏರುತ್ತಿದೆ










**34** ಪಟ್ಟು ಕಳೆದ ದಶಕದಲ್ಲಿ ಹೆಚ್ಚಳವಾಗಿದೆ.

ಭಾರತದ ರಕ್ಷಣಾ ಉತ್ಪನ್ನಗಳನ್ನು ಈಗ ಸುಮಾರು 100 ದೇಶಗಳಿಗೆ ರಫ್ತು ಮಾಡಲಾಗುತ್ತಿದ್ದು, ಇದು ಕಾರ್ಯತಂತ್ರದ ರಕ್ಷಣಾ ಸಲಕರಣೆಗಳ ಜಾಗತಿಕ ಪೂರೈಕೆದಾರನಾಗಿ ಭಾರತದ ಬೆಳೆಯುತ್ತಿರುವ ಖ್ಯಾತಿಯನ್ನು ಪ್ರತಿಬಿಂಬಿಸುತ್ತದೆ.




ಭಾರತವು ಮೊಬೈಲ್ ಆಮದುದಾರ ದೇಶದಿಂದ ಜಾಗತಿಕ ಉತ್ಪಾದನಾ ಕೇಂದ್ರವಾಗಿ ಬದಲಾಗಿದೆ.




> **"ನಮ್ಮ ಜೀವನದಲ್ಲಿ ಸಾಧ್ಯವಾದಲ್ಲೆಲ್ಲಾ ದೇಶದಲ್ಲಿ ತಯಾರಾದ ಉತ್ಪನ್ನಗಳಿಗೆ ಆದ್ಯತೆ ನೀಡುತ್ತೇವೆ ಎಂದು ಪ್ರತಿಜ್ಞೆ ಮಾಡೋಣ. ಇದು ಕೇವಲ ಆರ್ಥಿಕ ಸ್ವಾವಲಂಬನೆಯ ವಿಷಯವಲ್ಲ, ರಾಷ್ಟ್ರ ನಿರ್ಮಾಣದಲ್ಲಿ ಭಾಗವಹಿಸುವಿಕೆಯ ಮನೋಭಾವವಾಗಿದೆ.**
>
> **- ನರೇಂದ್ರ ಮೋದಿ, ಪ್ರಧಾನಮಂತ್ರಿ**



# ಸುಲಭ ವ್ಯವಹಾರದಿಂದಾಗಿ ಎಫ್ ಡಿ ಐ ಆಕರ್ಷಣೆ ಹೆಚ್ಚಾಗಿದೆ

ಭಾರತದಲ್ಲಿ ಹೂಡಿಕೆಯನ್ನು ಹೆಚ್ಚಿಸಲು, 2014 ರ ನಂತರ, ಕೇಂದ್ರ ಸರ್ಕಾರವು ವಿದೇಶಿ ನೇರ ಹೂಡಿಕೆ (ಎಫ್ ಡಿ ಐ) ಯನ್ನು ಈ ಹಿಂದೆ ಅದರಿಂದ ದೂರವಿದ್ದರೂ ಅಪಾರ ಸಾಮರ್ಥ್ಯವನ್ನು ಹೊಂದಿದ್ದ ಹಲವು ವಲಯಗಳಲ್ಲಿ ಅನುಮತಿಸಿತು. ಮೇಕ್ ಇನ್ ಇಂಡಿಯಾ, ಮೇಕ್ ಫಾರ್ ದಿ ವರ್ಲ್ಡ್ ಅಭಿಯಾನದೊಂದಿಗೆ, ಹೆಚ್ಚಿನ ವಲಯಗಳಲ್ಲಿ ಎಫ್ ಡಿ ಐ ನಿಯಮಗಳನ್ನು ಶೇಕಡಾ 100 ರಷ್ಟು ಸಡಿಲಗೊಳಿಸಿದ್ದು ಭಾರತದ ಉತ್ಪಾದನಾ ವಲಯದಲ್ಲಿ ಆಮೂಲಾಗ್ರ ಬದಲಾವಣೆಯನ್ನು ತಂದಿತು.

### ಭಾರತದಲ್ಲಿ ಹೂಡಿಕೆ ಮಾಡುತ್ತಿರುವ ಮೂರು ಪ್ರಮುಖ ದೇಶಗಳು




- 112 ದೇಶಗಳು ಈಗ ಭಾರತದಲ್ಲಿ ಹೂಡಿಕೆ ಮಾಡುತ್ತಿವೆ, 2013-14 ರಲ್ಲಿ ಕೇವಲ 89 ದೇಶಗಳು ಈ ಪಟ್ಟಿಯಲ್ಲಿದ್ದವು.

### ಭಾರತದಲ್ಲಿ ಎಫ್ ಡಿ ಐ ಒಳಹರಿವು




- ಕಳೆದ 25 ವರ್ಷಗಳಲ್ಲಿ, 1072 ಶತಕೋಟಿ ಡಾಲರ್ ಮೌಲ್ಯದ ಎಫ್ ಡಿ ಐ ಭಾರತಕ್ಕೆ ಬಂದಿದೆ, ಅದರಲ್ಲಿ ಶೇ.70 ರಷ್ಟು ಕಳೆದ 11 ವರ್ಷಗಳಲ್ಲಿ ಬಂದಿದೆ.

### ಕಳೆದ 11 ವರ್ಷಗಳಲ್ಲಿ ವಿದೇಶಿ ನೇರ ಹೂಡಿಕೆ (ಎಫ್ ಡಿ ಐ) ಬೆಳವಣಿಗೆ




### ಭಾರತದ ವಿದೇಶಿ ವಿನಿಮಯ ಮೀಸಲು ಏರಿಕೆ




- ಭಾರತವು 691 ಬಿಲಿಯನ್ ಡಾಲರ್ ನೊಂದಿಗೆ, ವಿಶ್ವದ ನಾಲ್ಕನೇ ಅತಿದೊಡ್ಡ ವಿದೇಶಿ ವಿನಿಮಯ ಮೀಸಲು ಹೊಂದಿದೆ.

### 11 ವರ್ಷಗಳಲ್ಲಿ ವಿದೇಶಿ ವಿನಿಮಯ ಮೀಸಲು ದ್ವಿಗುಣಗೊಂಡಿದೆ.




- ಸೆಪ್ಟೆಂಬರ್ 2024ರ ಅಂತ್ಯದ ವೇಳೆಗೆ ಭಾರತೀಯ ರಿಸರ್ವ್ ಬ್ಯಾಂಕ್ 854.73 ಮೆಟ್ರಿಕ್ ಟನ್ ಚಿನ್ನವನ್ನು ಹೊಂದಿದ್ದು, ಅದರಲ್ಲಿ 510.46 ಮೆಟ್ರಿಕ್ ಟನ್ ದೇಶೀಯವಾಗಿಯೇ ಇದೆ.
- ಯುರೋಪಿಯನ್ ಮುಕ್ತ ವ್ಯಾಪಾರ ಸಂಘ (EFTA) ದೇಶಗಳು ಮುಂದಿನ 15 ವರ್ಷಗಳಲ್ಲಿ 100 ಬಿಲಿಯನ್ ಡಾಲರ್ ವಿದೇಶಿ ನೇರ ಹೂಡಿಕೆಗೆ ಬದ್ಧವಾಗಿವೆ. ಇದು 500 ಬಿಲಿಯನ್ ಡಾಲರ್ ಹೂಡಿಕೆಯಾಗಿ ಪರಿವರ್ತನೆಯಾಗುವ ನಿರೀಕ್ಷೆಯಿದೆ.

ಪ್ರತಿಶತದಷ್ಟು ದರದಲ್ಲಿ ಬೆಳೆದಿದೆ, ಇದು ವಿಶ್ವದಲ್ಲೇ ಅತ್ಯಧಿಕ ಬೆಳವಣಿಗೆ ದರವಾಗಿದೆ.

2025 ರಲ್ಲಿ, ಇದು ಸುಮಾರು 83 ಲಕ್ಷ ಕೋಟಿ ರೂಪಾಯಿಗಳ ಐತಿಹಾಸಿಕ ಮಟ್ಟವನ್ನು ತಲುಪಿತು. ಒಟ್ಟು ದೇಶೀಯ ಉತ್ಪನ್ನಕ್ಕೆ (ಜಿಡಿಪಿ) ಸುಮಾರು 17 ಪ್ರತಿಶತದಷ್ಟು ಕೊಡುಗೆ ನೀಡುವ ಈ ವಲಯವು ಉದ್ಯೋಗ ಸೃಷ್ಟಿಯಲ್ಲಿಯೂ ಸಹಕಾರಿಯಾಗಿದೆ.

ಉದ್ಯೋಗ ಸೃಷ್ಟಿಯ ಜೊತೆಗೆ, ಕೇಂದ್ರ ಸರ್ಕಾರವು ಹಿಂದೆ ನಿರ್ಲಕ್ಷಿಸಿದ್ದ ಉತ್ಪಾದನಾ ವಲಯಗಳ ಮೇಲೆ ಗಮನಹರಿಸಿತು. ಸೆಮಿಕಂಡಕ್ಟರ್ ಉತ್ಪಾದನೆಯು ಇದಕ್ಕೆ ಇತ್ತೀಚಿನ ಮತ್ತು ಸೂಕ್ತವಾದ ಉದಾಹರಣೆಯಾಗಿದೆ. ವಿಶ್ವದ ಪ್ರತಿಯೊಂದು ಎಲೆಕ್ಟ್ರಾನಿಕ್ ಉತ್ಪನ್ನಗಳಲ್ಲಿ ಬಳಸುವ ಸೆಮಿಕಂಡಕ್ಟರ್ ಚಿಪ್‌ಗಳಿಗೆ ಭಾರತ ಯಾವಾಗಲೂ ಆಮದಿನ ಮೇಲೆ ಅವಲಂಬಿತವಾಗಿದೆ. ಆದರೆ ಈಗ, ಮೊದಲ ಬಾರಿಗೆ ಸೆಮಿಕಂಡಕ್ಟರ್ ಮಿಷನ್ ಮೂಲಕ, ಕೇಂದ್ರ ಸರ್ಕಾರವು ಭಾರತದಲ್ಲಿಯೇ ಅದರ ಉತ್ಪಾದನೆಯ ಮೇಲೆ ಗಮನಹರಿಸಿದೆ. ಪ್ರಧಾನಿ ಮೋದಿಯವರ ಕ್ರಿಯಾಶೀಲ ನಾಯಕತ್ವದಲ್ಲಿ, ಭಾರತವು ಆದ್ಯತೆಯ ಹೂಡಿಕೆ ತಾಣವಾಗಿ ಹೊರಹೊಮ್ಮಿದೆ.

ಜಿ ಎಸ್ ಟಿ, ಐ ಬಿ ಸಿ, ಎಫ್ ಡಿ ಐ ಆಡಳಿತದಲ್ಲಿ ನಿರಂತರ ಸುಧಾರಣೆ, ವ್ಯವಹಾರದ ಸುಲಭತೆ, ಅನುಸರಣೆಯಲ್ಲಿ ಕಡಿತ ಮತ್ತು ಅನೇಕ ದೇಶಗಳೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಗಳಿಗೆ

### 11 ವರ್ಷಗಳಲ್ಲಿ 27 ಕೋಟಿ ಭಾರತೀಯರು ಕಡುಬಡತನದಿಂದ ಹೊರಬಂದಿದ್ದಾರೆ

ವಿಶ್ವಬ್ಯಾಂಕಿನ ಇತ್ತೀಚಿನ ವರದಿಯ ಪ್ರಕಾರ, ಭಾರತದಲ್ಲಿ 11 ವರ್ಷಗಳಲ್ಲಿ ಸುಮಾರು 27 ಕೋಟಿ ಜನರು ಕಡುಬಡತನದಿಂದ ಹೊರಬಂದಿದ್ದಾರೆ. ದತ್ತಾಂಶದ ಪ್ರಕಾರ, 2011-12ರಲ್ಲಿ ಶೇ.27.1 ರಷ್ಟಿದ್ದ ತೀವ್ರ ಬಡತನದ ಪ್ರಮಾಣವು 2022-23ರಲ್ಲಿ ಕೇವಲ ಶೇ.5.3 ಕ್ಕೆ ಇಳಿದಿದೆ. ಅದೇ ಅವಧಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿನ ಕಡುಬಡತನವು ಶೇ.18.4 ರಿಂದ ಶೇ.2.8 ಕ್ಕೆ ಇಳಿದಿದೆ, ನಗರ ಪ್ರದೇಶಗಳಲ್ಲಿನ ಕಡುಬಡತನವು ಶೇ.10.7 ರಿಂದ ಶೇ.1.1 ಕ್ಕೆ ಇಳಿದಿದೆ. ವರದಿಯ ಪ್ರಕಾರ, 2005-06ರಲ್ಲಿ ಶೇ.53.8 ರಷ್ಟಿದ್ದ ಬಹುಆಯಾಮದ ಬಡತನವು 2019-21ರಲ್ಲಿ ಶೇ.16.4 ಮತ್ತು 2022-23ರಲ್ಲಿ ಶೇ.15.5 ಕ್ಕೆ ಇಳಿದಿದೆ. ತೀವ್ರ ಬಡತನದಲ್ಲಿ ವಾಸಿಸುವವರ ಸಂಖ್ಯೆ 11 ವರ್ಷಗಳಲ್ಲಿ 34.44 ಕೋಟಿಗಳಿಂದ 7.52 ಕೋಟಿಗೆ ಇಳಿದಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಕೈಗೊಂಡ ಆರ್ಥಿಕ ನೀತಿ ಸುಧಾರಣೆಗಳು ಇದಕ್ಕೆ ಕಾರಣವಾಗಿವೆ.

### ಮೇ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ.2.82ರಷ್ಟು ಇಳಿಕೆ, ಇದು 6 ವರ್ಷಗಳಲ್ಲಿಯೇ ಕನಿಷ್ಠ ಮಟ್ಟ

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಹಣದುಬ್ಬರವು ಈ ವರ್ಷದ ಮೇ ತಿಂಗಳಲ್ಲಿ ಶೇ.2.82 ಕ್ಕೆ ಇಳಿದಿದೆ, ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೀರಾ ಕಡಿಮೆಯಾಗಿದೆ. ಅಂಕಿಅಂಶಗಳ ಸಚಿವಾಲಯದ ಪ್ರಕಾರ, ಈ ಚಿಲ್ಲರೆ ಹಣದುಬ್ಬರ ದರವು ಫೆಬ್ರವರಿ 2019 ರ ನಂತರದ ಅತ್ಯಂತ ಕಡಿಮೆಯಾಗಿದೆ. ಮೇ ತಿಂಗಳಲ್ಲಿ ಆಹಾರ ಹಣದುಬ್ಬರವು ಶೇ.0.99 ಕ್ಕೆ ಇಳಿದಿದೆ, ಇದು ಅಕ್ಟೋಬರ್ 2021 ರ ನಂತರದ ಅತ್ಯಂತ ಕಡಿಮೆ. ಆಹಾರ ಹಣದುಬ್ಬರವು ಇಳಿಕೆಯಾಗಿರುವ ಸತತ 7 ನೇ ತಿಂಗಳು ಇದಾಗಿದ್ದು, ಮುಖ್ಯವಾಗಿ ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಅಲ್ಲದೆ, ಇಂಧನ ಬೆಲೆಗಳಲ್ಲಿನ ಇಳಿಕೆ ಮತ್ತು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳಲ್ಲಿನ ಕುಸಿತದಿಂದಾಗಿ ಹಣದುಬ್ಬರ ಕಡಿಮೆಯಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ 2025-26 ರ ಹಣಕಾಸು ವರ್ಷದ ಹಣದುಬ್ಬರ ಮುನ್ಸೂಚನೆಯನ್ನು ಶೇ.3.7 ಕ್ಕೆ ಇಳಿಸಿದೆ, ಇದು ಮೊದಲು ಶೇ.4 ಆಗಿತ್ತು.

### ಪ್ರತಿಕೂಲ ಪರಿಸ್ಥಿತಿಯನ್ನು ಅವಕಾಶವನ್ನಾಗಿ ಪರಿವರ್ತಿಸುತ್ತಿರುವ ಆತ್ಮನಿರ್ಭರ ಭಾರತ

- ಸಾಂಕ್ರಾಮಿಕ ರೋಗದ ಆರಂಭದಿಂದಲೂ ಪ್ರಧಾನಿ ಮೋದಿಯವರ ಬಲವಾದ ಆರ್ಥಿಕ ನಿರ್ವಹಣೆಯು ಪ್ರತಿಕೂಲ ಪರಿಸ್ಥಿತಿಯನ್ನು ಅವಕಾಶವಾಗಿ ಪರಿವರ್ತಿಸಿತು. ಎಲ್ಲಾ ಆರ್ಥಿಕ ಸೂಚಕಗಳು - ಭಾರತದ ಆರ್ಥಿಕ ಪುನರುಜ್ಜೀವನದ ಕಡೆಗೆ ತೋರಿಸುತ್ತಿವೆ.
- ಎಂ ಎಸ್ ಎಂ ಇ ನಿಂದ ಎಂ ಎನ್ ಸಿ ವರೆಗಿನ ಎಲ್ಲಾ ಕಂಪನಿಗಳ ಉತ್ಪಾದನೆ - ವಿಸ್ತರಿಸುತ್ತಿದೆ. ಇದು - ಸೇವಾ ಮತ್ತು ರಫ್ತು ವಲಯಕ್ಕೆ ಐತಿಹಾಸಿಕ ಕೊಡುಗೆ ನೀಡಿದೆ.
- ಅನೇಕ ವಲಯಗಳಲ್ಲಿ ನೇಮಕಾತಿ ಅತ್ಯುನ್ನತ ಮಟ್ಟದಲ್ಲಿದೆ. ಇದು ಬೆಳವಣಿಗೆಯನ್ನು ಉದ್ಯೋಗಗಳಾಗಿ ಪರಿವರ್ತಿಸುತ್ತಿರುವುದನ್ನು ಖಚಿತಪಡಿಸಿದೆ.

### ಒಮ್ಮತ ಆಧಾರಿತ ಸುಧಾರಣೆಗಳು

- ಪ್ರಧಾನಿ ಮೋದಿ ಅವರು ಕಷ್ಟದ ಸಮಯದಲ್ಲಿ ಹಲವಾರು ರಚನಾತ್ಮಕ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ಒಮ್ಮತದ ಸುಧಾರಣೆಗಳ ಹೊಸ ಪ್ರವೃತ್ತಿಯನ್ನು ಪ್ರಾರಂಭಿಸಿದರು.
- ಸಹಕಾರಿ ಒಕ್ಕೂಟ ವ್ಯವಸ್ಥೆಯನ್ನು ಉತ್ತೇಜಿಸುವುದರೊಂದಿಗೆ, ಕೇಂದ್ರ ಸರ್ಕಾರವು ರಾಜ್ಯಗಳು ಸ್ವಯಂಪ್ರೇರಣೆಯಿಂದ ಸುಧಾರಣೆಗಳನ್ನು ಕೈಗೊಳ್ಳಲು ಪ್ರೋತ್ಸಾಹಿಸಿತು.
- ಸುಧಾರಣೆಗಳು ಎಲ್ಲಾ ಪಾಲುದಾರರ ಹಿತಾಸಕ್ತಿಗಳನ್ನು ರಕ್ಷಿಸಿದವು.

### ಉತ್ತಮ ಆರ್ಥಿಕತೆಯನ್ನು ನಿರ್ಮಿಸುವುದು

- ಸರಕು ಮತ್ತು ಸೇವಾ ತೆರಿಗೆ (ಜಿ ಎಸ್ ಟಿ) ಜಾರಿಗೆ ಬಂದ ನಂತರ ಔಪಚಾರಿಕೀಕರಣ ವಿಸ್ತರಿಸಿತು.
- ಬಾಕಿ ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡ ಕಠಿಣ ಕ್ರಮವು ಎನ್ ಪಿ ಎ ಮತ್ತು ಆರ್ಥಿಕ ಅಪರಾಧಗಳಲ್ಲಿ ತೀವ್ರ ಇಳಿಕೆಗೆ ಕಾರಣವಾಯಿತು.
- ಐಬಿಸಿ ಭಾರತೀಯ ಬ್ಯಾಂಕಿಂಗ್ ಮತ್ತು ಕಾರ್ಪೋರೇಟ್ ವಲಯಗಳನ್ನು ಕಠಿಣ ಸಮಯದಲ್ಲಿ ರಕ್ಷಿಸಿತು.
- ಭಾರತವು ವೇಗವಾಗಿ 'ಡಿಜಿಟಲ್ ಆರ್ಥಿಕತೆ'ಯಾಗಿ ರೂಪಾಂತರಗೊಳ್ಳುತ್ತಿದೆ.

ಸಹಿ ಹಾಕಿರುವುದರಿಂದ ವಿದೇಶಿ ನೇರ ಹೂಡಿಕೆಯಲ್ಲಿ ಸ್ಥಿರವಾದ ಹೆಚ್ಚಳ ಕಂಡುಬಂದಿದೆ.

ಸರ್ಕಾರದ ಈ ಪ್ರಯತ್ನಗಳು ಕಳೆದ 11 ವರ್ಷಗಳಲ್ಲಿ ಭಾರತೀಯ ಆರ್ಥಿಕತೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತಂದಿವೆ ಮತ್ತು ಸಮಾಜದ ಎಲ್ಲಾ ವರ್ಗಗಳ ಮೇಲೆ ಸಕಾರಾತ್ಮಕ ಪರಿಣಾಮ ಬೀರಿವೆ.

**ಎಂ ಎಎಸ್ ಎಂ ಇ ಗಳ ಮೇಲೆ ವಿಶೇಷ ಗಮನ**

ಭಾರತದ ಆರ್ಥಿಕತೆಗೆ ಗಣನೀಯವಾಗಿ ಕೊಡುಗೆ ನೀಡುವ ಎಂ ಎಸ್ ಎಂ ಇ ವಲಯಕ್ಕೆ ವಿಶೇಷ ಗಮನ ನೀಡಲಾಗಿದೆ. ಕೋವಿಡ್ ಅವಧಿಯಲ್ಲಿ, ಎಲ್ಲವೂ ಸ್ಥಗಿತಗೊಂಡಿದ್ದಾಗ, ಎಂ ಎಸ್ ಎಂ ಇ ವಲಯಕ್ಕೆ ತುರ್ತು ಸಾಲ ಖಾತರಿ ಯೋಜನೆಯಡಿಯಲ್ಲಿ ರಕ್ಷಣೆ ನೀಡಲಾಯಿತು. ಇದಲ್ಲದೆ, ಎಂ ಎಸ್ ಎಂ ಇ ಗಳಿಗೆ ಸಾಲ ನೀಡುವ ಮೂಲಕ, 2.39 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಎನ್ ಪಿ ಎ ಆಗದಂತೆ ಉಳಿಸಲಾಗಿದೆ. 1.13 ಕೋಟಿ ಎಂ ಎಸ್ ಎಂ ಇ ಗಳಿಗೆ ಸಹಾಯ ಮಾಡುವ ಮೂಲಕ 1.5 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಉಳಿಸಲಾಗಿದೆ ಮತ್ತು ಪ್ರತಿ ಕೆಲಸವು ನಾಲ್ಕು ಜನರ ಕುಟುಂಬಕ್ಕೆ ಪ್ರಯೋಜನವನ್ನು ನೀಡಿದರೆ, ಅದು 6 ಕೋಟಿ ಜನರಿಗೆ ನೆರವಾಯಿತು.

## ಡಿಜಿಟಲ್ ಪಾವತಿ ಕ್ರಾಂತಿ

ಜೇಬಿನಲ್ಲಿ ಪರ್ಸ್ ಇರಲಿ ಅಥವಾ ಇಲ್ಲದಿರಲಿ, ಏಕೀಕೃತ ಪಾವತಿ ಇಂಟರ್ಫೇಸ್ (ಯುಪಿಐ) ಮಾರಾಟಗಾರ ಮತ್ತು ಖರೀದಿದಾರ ಇಬ್ಬರಿಗೂ ದಾರಿಯನ್ನು ಸುಲಭಗೊಳಿಸಿರುವುದರಿಂದ ಜನರು ಈಗ ಮೊಬೈಲ್ ಅನ್ನು ಕೈಯಲ್ಲಿ ಹಿಡಿದುಕೊಂಡು ಮಾರುಕಟ್ಟೆಗೆ ಹೋಗುತ್ತಾರೆ. ಯುಪಿಐ ಮತ್ತು ರುಪೇ ಕಾರ್ಡ್ ಗಳ ಬಳಕೆ ಗಡಿಗಳಾಚೆಗೂ ವಿಸ್ತರಿಸುತ್ತಿದೆ. ಯುಪಿಐ ಪಾವತಿಗಳನ್ನು ಈಗ ಯುಎಇ, ಸಿಂಗಾಪುರ, ಭೂತಾನ್, ನೇಪಾಳ, ಶ್ರೀಲಂಕಾ, ಫ್ರಾನ್ಸ್ ಮತ್ತು ಮಾರಿಷಸ್ ನಲ್ಲಿ ಸಕ್ರಿಯಗೊಳಿಸಲಾಗಿದೆ.

**ಕಳೆದ 5 ವರ್ಷಗಳಲ್ಲಿ ಯುಪಿಐ ವಹಿವಾಟುಗಳು 10 ಪಟ್ಟು ಹೆಚ್ಚಾಗಿವೆ**







**ಜಾಗತಿಕ ನೈಜ-ಸಮಯದ ಡಿಜಿಟಲ್ ಪಾವತಿಗಳಲ್ಲಿ**

# ಶೇ.49 ರಷ್ಟನ್ನು

**ಭಾರತದಲ್ಲಿ ಮಾಡಲಾಗುತ್ತದೆ.**

(ಎಸಿಐ ವಿಶ್ವವ್ಯಾಪಿ ವರದಿ 2024)

## ಆತ್ಮನಿರ್ಭರ ಭಾರತ ಪ್ಯಾಕೇಜ್

ಕೋವಿಡ್-19 ರ ಸಮಯದಲ್ಲಿ, ಇಡೀ ಜಗತ್ತು ಸ್ತಬ್ಧಗೊಂಡಿದ್ದಾಗ, ಆತ್ಮನಿರ್ಭರ ಭಾರತ ಪ್ಯಾಕೇಜ್ ಮೂಲಕ, ಸರ್ಕಾರವು ಆರ್ಥಿಕತೆಯನ್ನು ಬೆಂಬಲಿಸಿದ್ದಲ್ಲದೆ, ಸಾಮಾನ್ಯ ಜನರನ್ನೂ ಮತ್ತು ಕೈಗಾರಿಕೆಗಳ ಬಗ್ಗೆಯೂ ಕಾಳಜಿ ವಹಿಸಿತು. ಜನವರಿ 2024 ರವರೆಗೆ ಆತ್ಮನಿರ್ಭರ ಭಾರತ್ ರೋಜ್ಗಾರ್ ಯೋಜನೆಯಡಿಯಲ್ಲಿ 60.49 ಲಕ್ಷ ಫಲಾನುಭವಿಗಳಿಗೆ ಪ್ರಯೋಜನಗಳನ್ನು ನೀಡಲಾಯಿತು. ಕೋವಿಡ್-19 ಸಾಂಕ್ರಾಮಿಕ ಸಮಯದಲ್ಲಿ ನಷ್ಟವಾದ ಉದ್ಯೋಗಗಳನ್ನು ಮರುಸ್ಥಾಪಿಸಲು ಹೊಸ ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಉದ್ಯೋಗದಾತರನ್ನು ಪ್ರೋತ್ಸಾಹಿಸಲು ಈ ಯೋಜನೆಯನ್ನು ಅಕ್ಟೋಬರ್ 2020 ರಲ್ಲಿ ಪ್ರಾರಂಭಿಸಲಾಯಿತು.

# 29.8

**ಲಕ್ಷ ಕೋಟಿ ರೂ.**

**ಆತ್ಮನಿರ್ಭರ ಭಾರತ ಪ್ಯಾಕೇಜ್ ಅನ್ನು ಭಾರತದ ಆರ್ಥಿಕತೆಯನ್ನು ಬಲಿಷ್ಠವಾಗಿಡಲು ಪ್ರಾರಂಭಿಸಲಾಯಿತು.**

### ಭಾರತದ ಆರ್ಥಿಕತೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವುದು

ಭಾರತವು 25 ವರ್ಷಕ್ಕಿಂತ ಕಡಿಮೆ ವಯಸ್ಸಿನ ಶೇ.50 ರಷ್ಟು ಜನಸಂಖ್ಯೆಯನ್ನು ಹೊಂದಿರುವ ದೇಶ. ಇದು ನಿರಂತರವಾಗಿ ಮುಂದುವರಿಯುತ್ತಿರುವ, ಯುವ ಉತ್ಸಾಹ ಮತ್ತು ಆಲೋಚನೆಗಳಿಂದ ತುಂಬಿರುವ ದೇಶ. ಆದರೆ, ದೇಶದ ಆರ್ಥಿಕತೆಯನ್ನು ಮುಂದಕ್ಕೆ ಕೊಂಡೊಯ್ಯಲು ಕೇಂದ್ರ ಸರ್ಕಾರದೊಂದಿಗೆ ಲಭ್ಯವಿರುವ ಸಂಪನ್ಮೂಲವಾದ ಸಾಮಾನ್ಯ ಬಜೆಟ್ ಕೇವಲ ಆದಾಯ ಮತ್ತು ವೆಚ್ಚದ ಚಟುವಟಿಕೆಗಳಿಗೆ ಸೀಮಿತವಾಗಿತ್ತು. ಆದರೆ, ಪ್ರಧಾನಿ ಮೋದಿ ಅವರು ಯುವಜನರು ಇದರಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿಕೊಳ್ಳಲು ಹೊಸ ಉತ್ಸಾಹವನ್ನು ತುಂಬಿದರು. ಇಡೀ ದೇಶವು ಅಭಿವೃದ್ಧಿಯಲ್ಲಿ ಭಾಗವಹಿಸಲು, ಮೊದಲ ಬಾರಿಗೆ, ಕೇಂದ್ರ ಸರ್ಕಾರವು 115 ಹಿಂದುಳಿದ ಜಿಲ್ಲೆಗಳನ್ನು ಮಹತ್ವಾಕಾಂಕ್ಷೆಯ ಜಿಲ್ಲೆಗಳಾಗಿ ಹೆಸರಿಸಿತು ಮತ್ತು ಈಗ ಆರ್ಥಿಕತೆಯ ಅಭಿವೃದ್ಧಿಯು ದೆಹಲಿ ಮತ್ತು ಮುಂಬೈನ ಅಗತ್ಯಗಳನ್ನು ಪೂರೈಸುವುದು ಮಾತ್ರವಲ್ಲ ಎಂದು ಹೇಳಿದೆ. ಬದಲಿಗೆ, ಕೊನೆಯ ಮೈಲಿಯವರೆಗೂ ಸೌಲಭ್ಯಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವ ಮೂಲಕ ಪ್ರತಿಯೊಬ್ಬರನ್ನು ಔಪಚಾರಿಕ ಆರ್ಥಿಕತೆಯಲ್ಲಿ ಪಾಲುದಾರರನ್ನಾಗಿ



## ಎಂ ಎಸ್ ಎಂ ಇ ಗಳನ್ನು ಬಲಪಡಿಸಲು ಉಪಕ್ರಮ

*ಭಾರತ ಸರ್ಕಾರವು ಮೇ 2020 ರಲ್ಲಿ ತುರ್ತು ಸಾಲ ಸೌಲಭ್ಯ ಖಾತರಿ ಯೋಜನೆಯನ್ನು ಪ್ರಾರಂಭಿಸಿತು. ಕೋವಿಡ್-19 ಸಾಂಕ್ರಾಮಿಕ ರೋಗದಿಂದ ಉಂಟಾದ ತೊಂದರೆಗಳಿಂದ ಚೇತರಿಸಿಕೊಳ್ಳಲು ಮತ್ತು ತಮ್ಮ ವ್ಯವಹಾರವನ್ನು ಪುನರಾರಂಭಿಸಲು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್ಎಂಇ) ಮತ್ತು ವ್ಯಾಪಾರ ಉದ್ಯಮಗಳಿಗೆ ಸಹಾಯ ಮಾಡುವ ಗುರಿಯನ್ನು ಇದು ಹೊಂದಿತ್ತು.*

- ಇಸಿಎಲ್‌ಜಿಎಸ್ ಅಡಿಯಲ್ಲಿ ಎಂಎಸ್‌ಎಂಇಗಳಿಗೆ 3.68 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚಿನ ಅನುಮೋದನೆ. 1.20 ಕೋಟಿಗೂ ಹೆಚ್ಚು ಸಾಲಗಾರರು ಇದರಿಂದ ಪ್ರಯೋಜನ ಪಡೆದರು.
- ಎಂಸಿಜಿಎಸ್-ಎಂಎಸ್‌ಎಂಇ ಅಡಿಯಲ್ಲಿ ಖಾತರಿ ವ್ಯಾಪ್ತಿ 100 ಕೋಟಿ ರೂ.ಗಳಿಗೆ ಏರಿಕೆಯಾಗಿದೆ. ಮ್ಯೂಚುಯಲ್ ಕ್ರೆಡಿಟ್ ಗ್ಯಾರಂಟಿ ಸ್ಕೀಮ್ ಎಂಎಸ್‌ಎಂಇಗಳಿಗೆ ಮಂಜೂರು ಮಾಡಲಾದ 100 ಕೋಟಿ ರೂ.ಗಳವರೆಗಿನ ಸಾಲ ಸೌಲಭ್ಯಗಳಿಗೆ ಶೇ.60 ಖಾತರಿಯನ್ನು ಪರಿಚಯಿಸಿದೆ.

## 12 ವರ್ಷಗಳ ಕನಿಷ್ಠ ಮಟ್ಟಕ್ಕೆ ಜಿ ಎನ್ ಪಿ ಎ

*2024-25ರಲ್ಲಿ ಭಾರತದ ಹಣಕಾಸು ಮತ್ತು ಹಣಕಾಸು ವಲಯಗಳು ಉತ್ತಮ ಪ್ರದರ್ಶನ ನೀಡಿವೆ. ಈ ಹಣಕಾಸು ವರ್ಷದಲ್ಲಿ ಬ್ಯಾಂಕ್ ಸಾಲವು ಸ್ಥಿರ ದರದಲ್ಲಿ ಬೆಳೆದಿದೆ. ಷೆಡ್ಯೂಲ್ಡ್ ಬ್ಯಾಂಕುಗಳ ಲಾಭದಾಯಕತೆಯಲ್ಲಿ ಸ್ಥಿರ ಸುಧಾರಣೆ ಕಂಡುಬಂದಿದೆ. ಒಟ್ಟು ಅನುತ್ಪಾದಕ ಆಸ್ತಿಗಳಲ್ಲಿನ (ಜಿಎನ್‌ಪಿಎ) ಕುಸಿತವು ಇದನ್ನು ಸೂಚಿಸುತ್ತದೆ.*

- ಡಿಸೆಂಬರ್ 2024 ರಲ್ಲಿ ಜಿಎನ್‌ಪಿಎ ಶೇ.2.6 ಕ್ಕೆ ಇಳಿದಿದೆ, ಇದು 12 ವರ್ಷಗಳಲ್ಲಿ ಅತ್ಯಂತ ಕಡಿಮೆ ಮಟ್ಟವಾಗಿದೆ. ಇದರಿಂದ ಬ್ಯಾಂಕಿಂಗ್ ವ್ಯವಸ್ಥೆ ಬಲಗೊಂಡಿತು.



## ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ ಯೋಜನೆ

*ಭಾರತ ಸರ್ಕಾರವು 2020ರಲ್ಲಿ ಪ್ರಾರಂಭಿಸಿದ ಉತ್ಪಾದನೆ ಸಂಬಂಧಿತ ಪ್ರೋತ್ಸಾಹಕ (ಪಿಎಲ್‌ಐ) ಯೋಜನೆಯು ದೇಶೀಯ ಉತ್ಪಾದನೆಯನ್ನು ಹೆಚ್ಚಿಸುವುದು, ಹೂಡಿಕೆಯನ್ನು ಆಕರ್ಷಿಸುವುದು, ಆಮದಿನ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು ಮತ್ತು ರಫ್ತುಗಳನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಒಂದು ಪರಿವರ್ತನಾ ಉಪಕ್ರಮವಾಗಿದೆ.*

- ಪಿಎಲ್‌ಐ ಯೋಜನೆಯು 1.61 ಲಕ್ಷ ಕೋಟಿ ರೂ. ಹೂಡಿಕೆ, 14 ಲಕ್ಷ ಕೋಟಿ ರೂ. ಉತ್ಪಾದನೆ, 5.31 ಲಕ್ಷ ಕೋಟಿ ರೂ. ರಫ್ತು ಮತ್ತು 11.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ.

(*ಏಪ್ರಿಲ್ 2020 ರಿಂದ)



ಮಾಡಬೇಕಾಗಿದೆ, ಏಕೆಂದರೆ ಮೂಲಭೂತವಾಗಿ, ಕೆಲಸ ಮಾಡುವ ವಯಸ್ಸಿನ ಗುಂಪಿನಲ್ಲಿ ಕೆಲಸ ಮಾಡುವ ಸಾಮರ್ಥ್ಯವಿರುವ ಜನರು ತಮ್ಮ ಆಯ್ಕೆಯಿಂದ ಬಡವರಾಗಿಲ್ಲ.

ಅವರು ಬಡವರಾಗಿದ್ದಾರೆ ಏಕೆಂದರೆ ಅವರಿಗೆ ಅನೇಕ ಸೌಲಭ್ಯಗಳು ಮತ್ತು ಅವಕಾಶಗಳು ಲಭ್ಯವಿಲ್ಲ. ಭಾರತದ ಯಾವುದೇ ಸ್ಥಳದಲ್ಲಿ ವಾಸಿಸುವ ನಾಗರಿಕರು, ಅವರು ಪುರುಷರಾಗಿರಲಿ ಅಥವಾ ಮಹಿಳೆಯರಾಗಿರಲಿ, ವೈಯಕ್ತಿಕ ಮತ್ತು ಸಾಮೂಹಿಕ ಸೌಲಭ್ಯಗಳ ಪ್ರಯೋಜನವನ್ನು ಪಡೆಯಬೇಕು. ಇದು ಜೀವನವನ್ನು ಸುಲಭಗೊಳಿಸುತ್ತದೆ. ಈ ದಿಕ್ಕಿನಲ್ಲಿ ಕೇಂದ್ರ ಸರ್ಕಾರ ಮಾಡಿದ ಕೆಲಸ, ಕೋವಿಡ್ ಅವಧಿಯ ಸಾಮಾನ್ಯ ಬಜೆಟ್ ಕೂಡ ಈ ದೀರ್ಘಕಾಲೀನ ಚಿಂತನೆಯನ್ನು ಆಧರಿಸಿದೆ.

ಖಂಡಿತವಾಗಿಯೂ ಭಾರತದ ಆರ್ಥಿಕತೆಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಮಾತ್ರವಲ್ಲದೆ ಸ್ಥಿರವಾಗಿರಲು ಪ್ರಾರಂಭಿಸಿದೆ. ದೇಶ ಮತ್ತು ಅದರ ಉನ್ನತ ನಾಯಕತ್ವವು ತ್ರೈಮಾಸಿಕದಿಂದ ತ್ರೈಮಾಸಿಕದ ಬದಲು ದೀರ್ಘಾವಧಿಯ ದೃಷ್ಟಿಕೋನದಿಂದ ಯೋಚಿಸುತ್ತಿರುವುದರಿಂದ, ವಿಶ್ವದ ಎಲ್ಲಾ ಸಂಸ್ಥೆಗಳ ಅಂದಾಜುಗಳಿಗಿಂತ ಭಾರತ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ದೂರದೃಷ್ಟಿಯೊಂದಿಗೆ, ಜೀವನ ಮತ್ತು ಆರ್ಥಿಕತೆಯನ್ನು ಸಮನ್ವಯಗೊಳಿಸುವ ಮೂಲಕ, ಭಾರತವು ವಿಕಸಿತ ಭಾರತ @2047 ಸಂಕಲ್ಪದೊಂದಿಗೆ ಅಮೃತ ಕಾಲದತ್ತ ಪಯಣಿಸಲು ಮುನ್ನಡೆಯುತ್ತಿದೆ. ●

# ಹೊಸ ಎತ್ತರಕ್ಕೆ ಏರಿದ ಜಮ್ಮು ಮತ್ತು ಕಾಶ್ಮೀರದ ಮೂಲಸೌಕರ್ಯ

*ಪ್ರಗತಿಗೆ ಹೊಸ ಮಾರ್ಗಗಳನ್ನು ತೆರೆಯುವುದರ ಜೊತೆಗೆ, ಮೂಲಸೌಕರ್ಯ ಅಭಿವೃದ್ಧಿಯು ಸಮುದಾಯದ ಆಕಾಂಕ್ಷೆಗಳನ್ನು ಸಂತೋಷ ಮತ್ತು ಭರವಸೆಯೊಂದಿಗೆ ಸಂಪರ್ಕಿಸುತ್ತದೆ. ವಿಶೇಷವಾಗಿ ಕಾಶ್ಮೀರದಂತಹ ಪ್ರದೇಶದಲ್ಲಿ, ಸವಾಲಿನ ಭೂಪ್ರದೇಶ ಮತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳ ಎದುರಿನಲ್ಲಿ ರೈಲು ಜಾಲವನ್ನು ನಿರ್ಮಿಸುವುದು ಸಮಸ್ಯೆಯಾಗಿತ್ತು. ಈಗ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನ ರೈಲು ಜಾಲವು ನನಸಾಗಿದೆ, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಪರಿಶ್ರಮಕ್ಕೆ ಧನ್ಯವಾದಗಳು. ದಶಕಗಳ ನಿರೀಕ್ಷೆಗೆ ಅಂತ್ಯ ಹಾಡಿರುವ ಪ್ರಧಾನಮಂತ್ರಿ ಮೋದಿ, ವಿಶ್ವದ ಅತಿ ಎತ್ತರದ ಚೆನಾಬ್ ರೈಲು ಸೇತುವೆಯಾದ ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕವನ್ನು ಮತ್ತು ಭಾರತದ ಮೂಲಸೌಕರ್ಯದ ಹೊಸ ಅದ್ಭುತವಾದ ಮೊದಲ ಕೇಬಲ್-ಸ್ಟೇ ಸೇತುವೆಯಾದ ಅಂಜಿ ಖಾಡ್ ಅನ್ನು ಉದ್ಘಾಟಿಸಿದರು....*



ಬಲವಾದ ಮತ್ತು ವಿಶ್ವ ದರ್ಜೆಯ ಮೂಲಸೌಕರ್ಯವು ಈಗ ನವ ಭಾರತದ ಅಸ್ಮಿತೆ ಮಾತ್ರವಲ್ಲ, ಅದರ ಶಕ್ತಿಯ ಘೋಷಣೆಯಾಗಿದೆ. ಜೂನ್ 6 ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 272 ಕಿ.ಮೀ ಉದ್ದದ ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆಯನ್ನು ರಾಷ್ಟ್ರಕ್ಕೆ ಸಮರ್ಪಿಸಿದಾಗ ಮತ್ತು ಚೆನಾಬ್ ರೈಲು ಸೇತುವೆ ಮತ್ತು ಅಂಜಿ ಖಾಡ್ ರೈಲು ಸೇತುವೆಯನ್ನು ಉದ್ಘಾಟಿಸುವ ಮೂಲಕ ಕಾಶ್ಮೀರದಿಂದ ಕನ್ಯಾಕುಮಾರಿವರೆಗೆ ರೈಲು ಜಾಲದ ದೇಶದ ಕನಸನ್ನು ಈಡೇರಿಸಿದಾಗ ಜಗತ್ತು ಭಾರತದ ಶಕ್ತಿಯ ಮತ್ತೊಂದು ಚಿತ್ರಣವನ್ನು ನೋಡಿತು. ಶ್ರೀ ಮಾತಾ ವೈಷ್ಣೋ ದೇವಿ ಕಾತ್ರಾದಿಂದ ಶ್ರೀನಗರಕ್ಕೆ ಹೋಗುವ ಎರಡು ವಂದೇ ಭಾರತ್ ರೈಲುಗಳಿಗೆ ಪ್ರಧಾನ ಮಂತ್ರಿ ಮೋದಿ ಹಸಿರು ನಿಶಾನೆ ತೋರಿದರು. ಇದರೊಂದಿಗೆ 1972 ರಲ್ಲಿ ಜಮ್ಮು ತಲುಪಿದ್ದ ರೈಲು ಅಂತಿಮವಾಗಿ ದೀರ್ಘ ಪ್ರಯಾಣದ ನಂತರ ನೇರವಾಗಿ ಶ್ರೀನಗರವನ್ನು ತಲುಪಿದೆ. ಕಾಶ್ಮೀರ ಕಣಿವೆಗೆ ಈ ರೈಲು ಯೋಜನೆಯ ಮಹತ್ವವು ಉದ್ಘಾಟನಾ ಕಾರ್ಯಕ್ರಮದಲ್ಲಿ ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರ ಭಾಷಣದಿಂದ ಸ್ಪಷ್ಟವಾಗಿದೆ, ಇದರಲ್ಲಿ ಅವರು 8 ನೇ ತರಗತಿಯಲ್ಲಿ ಓದುತ್ತಿದ್ದಾಗ ಈ ಯೋಜನೆಗೆ ಅಡಿಪಾಯ ಹಾಕಲಾಯಿತು ಎಂದು ಹೇಳಿದರು. ಜಮ್ಮು ಮತ್ತು ಕಾಶ್ಮೀರದ ಅನೇಕ ತಲೆಮಾರುಗಳು ಈ ರೈಲು ಸಂಪರ್ಕದ ಕನಸು ಕಾಣುತ್ತಾ ಕಳೆದುಹೋಗಿವೆ.

ಕಠಿಣ ಭೂಪ್ರದೇಶ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳು ಮತ್ತು ಪರ್ವತಗಳಿಂದ ಕುಸಿದು ಬೀಳುವ ಬಂಡೆಗಳಂತಹ ಸವಾಲುಗಳನ್ನು ಪ್ರಧಾನ ಮಂತ್ರಿ ಮೋದಿ ಒತ್ತಿ ಹೇಳಿದರು, ಇದು ಯೋಜನೆಯನ್ನು ಕಾರ್ಯಗತಗೊಳಿಸಲು ಎಂಜಿನಿಯರ್ ಗಳು ಮತ್ತು ಕಾರ್ಮಿಕರು ಹಾಗೂ ಸರ್ಕಾರಕ್ಕೆ ಅತ್ಯಂತ ಕಠಿಣ ಸವಾಲು ಒಡ್ಡಿತ್ತು. ಆದರೆ "ನಮ್ಮ ಸರ್ಕಾರವು ಸವಾಲಿಗೇ ಸವಾಲು ಹಾಕುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿತು" ಎಂದು ಚೆನಾಬ್ ಮತ್ತು ಅಂಜಿ ಖಾದ್ ಸೇತುವೆಯನ್ನು ಉದ್ಘಾಟಿಸುವಾಗ ಪ್ರಧಾನಮಂತ್ರಿ ಮೋದಿ ಹೇಳಿದರು. ಚೆನಾಬ್ ಮತ್ತು ಅಂಜಿ ಖಾಡ್ ಸೇತುವೆಯನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿ ಮೋದಿ, "ನಮ್ಮ ಸರ್ಕಾರವು



## ಚೆನಾಬ್ ಸೇತುವೆ...

### ಐಫೆಲ್ ಟವರ್‌ಗಿಂತ 35 ಮೀಟರ್ ಎತ್ತರ

**359** ಮೀಟರ್ ನಷ್ಟು ನದಿಯಿಂದ ಎತ್ತರದಲ್ಲಿರುವ ಚೆನಾಬ್ ರೈಲು ಸೇತುವೆ ವಿಶ್ವದ ಅತಿ ಎತ್ತರದ ರೈಲ್ವೆ ಕಮಾನು ಸೇತುವೆಯಾಗಿದೆ, ವಾಸ್ತುಶಿಲ್ಪದ ಅದ್ಭುತವಾಗಿದೆ.

**1,315** ಮೀಟರ್ ಉದ್ದದ ಉಕ್ಕಿನ ಕಮಾನು ಸೇತುವೆ ಐಫೆಲ್ ಟವರ್ ಗಿಂತ 35 ಮೀಟರ್ ಎತ್ತರವಾಗಿದೆ.

**260** ಕಿ.ಮೀ ಪ್ರತಿ ಗಂಟೆ ವೇಗದಲ್ಲಿ ಬೀಸುವ ಗಾಳಿಯನ್ನು ತಡೆದುಕೊಳ್ಳುವ ರೀತಿ ರಚಿಸಲಾಗಿದೆ.

**28,660** ಮೆಟ್ರಿಕ್ ಟನ್ ಉಕ್ಕನ್ನು ಸೇತುವೆ ನಿರ್ಮಾಣದಲ್ಲಿ ಬಳಸಲಾಗಿದೆ.

120 ವರ್ಷಗಳು ಈ ಸೇತುವೆಯ ಜೀವಿತಾವಧಿ.

ಇದು ಭೂಕಂಪ ಮತ್ತು ಗಾಳಿಯ ಯಾವುದೇ ಸ್ಥಿತಿಯನ್ನು ತಡೆದುಕೊಳ್ಳಲು ಸಿದ್ಧವಾಗಿದೆ.

**1,486 ಕೋಟಿ ರೂ.** ಇದರ ನಿರ್ಮಾಣ ವೆಚ್ಚವಾಗಿದೆ.

ಈ ಸೇತುವೆಯಿಂದ ವಂದೇ ಭಾರತ್ ಎಕ್ಸ್ ಪ್ರೆಸ್ ಹಾದುಹೋಗುವುದರೊಂದಿಗೆ, ಕಾತ್ರಾ ಮತ್ತು ಶ್ರೀನಗರ ನಡುವಿನ ಪ್ರಯಾಣದ ಸಮಯವು ಸುಮಾರು ಮೂರು ಗಂಟೆಗಳವರೆಗೆ ಕಡಿಮೆಯಾಗುತ್ತದೆ, ಇದು ಪ್ರಸ್ತುತ ಪ್ರಯಾಣದ ಸಮಯವನ್ನು ಎರಡರಿಂದ ಮೂರು ಗಂಟೆಗಳಷ್ಟು ತಗ್ಗಿಸುತ್ತದೆ.

## ಆಪರೇಷನ್ ಸಿಂಧೂರ

# ಸ್ವಾವಲಂಬಿ ಭಾರತದ ಶಕ್ತಿ

*ಆಪರೇಷನ್ ಸಿಂಧೂರ ಹೇಗೆ ಸ್ವಾವಲಂಬಿ ಭಾರತದ ಶಕ್ತಿಯನ್ನು ತೋರಿಸಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು. ಈ ಕಾರಣಕ್ಕಾಗಿಯೇ ಇಂದು ಜಗತ್ತು ಭಾರತದ ರಕ್ಷಣಾ ಪರಿಸರ ವ್ಯವಸ್ಥೆಯ ಬಗ್ಗೆ ಚರ್ಚಿಸುತ್ತಿದೆ. ಇದರ ಹಿಂದೆ ಒಂದೇ ಒಂದು ಕಾರಣವಿದೆ: 'ಮೇಕ್ ಇನ್ ಇಂಡಿಯಾ'ದಲ್ಲಿ ದೇಶದ ಸೇನೆಯ ನಂಬಿಕೆ.*

- ಸೇನೆ ಏನು ಮಾಡಿದೆಯೋ ಅದನ್ನು ಈಗ ಪ್ರತಿಯೊಬ್ಬ ಭಾರತೀಯನೂ ಪುನರಾವರ್ತಿಸಬೇಕಾಗಿದೆ. ಸರ್ಕಾರವು ಬಜೆಟ್ ನಲ್ಲಿ ಉತ್ಪಾದನೆ ಅಭಿಯಾನವನ್ನು ಘೋಷಿಸಿತು. ಈ ಅಭಿಯಾನದ ಅಡಿಯಲ್ಲಿ, ಉತ್ಪಾದನೆಗೆ ಹೊಸ ರೆಕ್ಕೆಯನ್ನು ನೀಡಲು ಸರ್ಕಾರ ಶ್ರಮಿಸುತ್ತಿದೆ.
- ಕಳೆದ 10 ವರ್ಷಗಳಲ್ಲಿ, ಭಾರತವು ಪ್ರಮುಖ ರಕ್ಷಣಾ ರಫ್ತುದಾರನಾಗಿ ಪರಿವರ್ತನೆಯಾಗಿದೆ. ಈಗ ವಿಶ್ವದ ಅಗ್ರ ರಕ್ಷಣಾ ರಫ್ತುದಾರರ ಪಟ್ಟಿಯಲ್ಲಿ ಭಾರತದ ಹೆಸರನ್ನು ಸೇರಿಸುವುದೇ ಗುರಿಯಾಗಿದೆ. ದೇಶವು ಈ ಗುರಿಯತ್ತ ತ್ವರಿತವಾಗಿ ಸಾಗಿದರೆ, ಭಾರತದಲ್ಲಿ ವೇಗವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ.
- ಗಡಿಯಲ್ಲಿ ವಾಸಿಸುವ ಜನರನ್ನು ದೇಶದ ಮುಂಚೂಣಿ ರಕ್ಷಕರು ಎಂದು ಕೇಂದ್ರ ಸರ್ಕಾರ ಪರಿಗಣಿಸುತ್ತದೆ. ಗಡಿ ಜಿಲ್ಲೆಗಳಲ್ಲಿ ಅಭಿವೃದ್ಧಿ ಮತ್ತು ಭದ್ರತೆಯನ್ನು ಬಲಪಡಿಸಲು ಕಳೆದ ದಶಕದಲ್ಲಿ ಅಭೂತಪೂರ್ವ ಪ್ರಯತ್ನಗಳನ್ನು ಮಾಡಲು ಇದು ಕಾರಣವಾಗಿದೆ.
- ಈ ಪ್ರದೇಶದಲ್ಲಿ ಸುಮಾರು 10,000 ಹೊಸ ಬಂಕರ್ ಗಳನ್ನು ನಿರ್ಮಿಸಲಾಗಿದೆ, ಇದು ಆಪರೇಷನ್ ಸಿಂಧೂರ ನಂತರ ಅಮೂಲ್ಯ ಜೀವಗಳನ್ನು ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.
- ಜಮ್ಮು ಮತ್ತು ಕಾಶ್ಮೀರ ವಿಭಾಗಕ್ಕೆ ಎರಡು ಹೊಸ ಗಡಿ ಬೆಟಾಲಿಯನ್ ಗಳು ಮತ್ತು ಎರಡು ಸಮರ್ಪಿತ ಮಹಿಳಾ ಬೆಟಾಲಿಯನ್ ಗಳನ್ನು ರಚಿಸುವ ಮೂಲಕ ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸಲಾಗಿದೆ.
- ಅಂತಾರಾಷ್ಟ್ರೀಯ ಗಡಿ ಪ್ರದೇಶ ಮತ್ತು ಸವಾಲಿನ ಭೂಪ್ರದೇಶಗಳ ಅಭಿವೃದ್ಧಿಗೆ ಶತಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಲಾಗುತ್ತಿದೆ. ರೋಮಾಂಚಕ ಗ್ರಾಮ ಕಾರ್ಯಕ್ರಮದಡಿ ಗಡಿ ಗ್ರಾಮಗಳಲ್ಲಿ ಅಭಿವೃದ್ಧಿ ಉಪಕ್ರಮಗಳನ್ನು ವೇಗಗೊಳಿಸಲಾಗಿದೆ.
- ಜಮ್ಮು ಮತ್ತು ಕಾಶ್ಮೀರದ 400 ಗ್ರಾಮಗಳು ಈ ಹಿಂದೆ ಪ್ರತಿಕೂಲ ಹವಾಮಾನದಿಂದಾಗಿ ಸಂಪರ್ಕದಿಂದ ವಂಚಿತವಾಗಿದ್ದವು. ಈಗ ಆ ಹಳ್ಳಿಗಳಿಗೆ 1,800 ಕಿ.ಮೀ ಹೊಸ ರಸ್ತೆಗಳನ್ನು ನಿರ್ಮಿಸಲಾಗಿದೆ. ಇದು ಜೀವನವನ್ನು ಸುಗಮಗೊಳಿಸಿದೆ.



**ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಮಾರ್ಗ ಯೋಜನೆ... ಇದು ಕೇವಲ ಹೆಸರಷ್ಟೇ ಅಲ್ಲ... ಇದು ಜಮ್ಮು ಮತ್ತು ಕಾಶ್ಮೀರದ ಹೊಸ ಶಕ್ತಿಯ ಗುರುತಿಸಲಾಗಿದೆ... ಇದು ಭಾರತದ ಹೊಸ ಶಕ್ತಿಯ ಘೋಷಣೆಯಾಗಿದೆ.**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

## ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕ ಯೋಜನೆ

ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕವು ಸ್ವತಂತ್ರ ಭಾರತದಲ್ಲಿ ಕೈಗೊಂಡ ಅತ್ಯಂತ ಮಹತ್ವಾಕಾಂಕ್ಷೆಯ ರೈಲು ಯೋಜನೆಗಳಲ್ಲಿ ಒಂದಾಗಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಹೊಸ ಗಾಥೆಯನ್ನು ಬರೆದಿರುವ ಈ ಯೋಜನೆಯು ಪ್ರಕೃತಿಯನ್ನು ಜಯಿಸುವ ಎಂಜಿನಿಯರಿಂಗ್ ಮತ್ತು ಮಾನವ ಸಂಕಲ್ಪಕ್ಕೆ ಸಾಕ್ಷಿಯಾಗಿದೆ, ಆದರೆ ಅದಕ್ಕಿಂತ ಹೆಚ್ಚಾಗಿ, ಇದು ರಾಜಕೀಯ ಇಚ್ಛಾಶಕ್ತಿಯ ಮಾತನಾಡುವ ಉದಾಹರಣೆಯಾಗಿದೆ. ಹಿಮಾಲಯದ ಒರಟಾದ ಬೆಟ್ಟಗಳಲ್ಲಿ 272 ಕಿ.ಮೀ ಉದ್ದದ ಈ ಯೋಜನೆಯನ್ನು 43,780 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದು 119 ಕಿ.ಮೀ ಉದ್ದದ 36 ಸುರಂಗಗಳು ಮತ್ತು ಕಣಿವೆಗಳು, ಶಿಖರಗಳು ಮತ್ತು ಪರ್ವತ ಮಾರ್ಗಗಳನ್ನು ಸಂಪರ್ಕಿಸುವ 943 ಸೇತುವೆಗಳನ್ನು ಒಳಗೊಂಡಿದೆ.





## ಅಂಜಿ ಖಾಡ್...

### ಭಾರತದ ಮೊದಲ ಉಕ್ಕಿನ ಹಗ್ಗದ ಸೇತುವೆ

ಜಮ್ಮು ನಗರದಿಂದ ಸುಮಾರು 80 ಕಿ.ಮೀ ದೂರದಲ್ಲಿರುವ ಹಿಮದಿಂದ ಆವೃತವಾದ ಶಿಖರಗಳ ನಡುವೆ ಈ ಸೇತುವೆಯನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಲಾಗಿದೆ. ನದಿಪಾತ್ರದಿಂದ ಈ ಸೇತುವೆಯ ಎತ್ತರ 331 ಮೀಟರ್. ಅಂಜಿ ಖಾಡ್ ನಲ್ಲಿರುವ ಮುಖ್ಯ ಸೇತುವೆ ಉಕ್ಕಿನ ಹಗ್ಗ ಆಧಾರಿತ ಸೇತುವೆಯಾಗಿದ್ದು, 473.25 ಮೀಟರ್ ಉದ್ದವಿದೆ, ಇದರ ಮುಖ್ಯ ಅಳತೆ 290 ಮೀಟರ್ ಆಗಿದೆ. ಈ ಸೇತುವೆಯು 96 ಹೈ-ಟೆನ್ಸೈಲ್ ಕೇಬಲ್ ಗಳಿಂದ ಬೆಂಬಲಿತವಾಗಿದೆ; ಈ ಕೇಬಲ್ ಗಳ ಒಟ್ಟು ಉದ್ದ 653 ಕಿಲೋಮೀಟರ್. ಗಂಟೆಗೆ 213 ಕಿಲೋಮೀಟರ್ ವೇಗದಲ್ಲಿ ಬೀಸುವ ಭಾರಿ ಗಾಳಿಯ ಬಿರುಗಾಳಿಗಳನ್ನು ತಡೆದುಕೊಳ್ಳುವಂತೆ ಈ ಸೇತುವೆಯನ್ನು ವಿನ್ಯಾಸಗೊಳಿಸಲಾಗಿದೆ. ಈ ಸೇತುವೆಯ ಡೆಕ್ ನಲ್ಲಿ 40 ಕೆಜಿ ಟಿ ಎನ್ ಟಿ (ಸ್ಫೋಟಕ) ಸ್ಫೋಟಗೊಂಡರೂ, ಸೇತುವೆಗೆ ಹಾನಿಯಾಗುವುದಿಲ್ಲ.

### ಜಮ್ಮು-ಶ್ರೀನಗರ ವಂದೇ ಭಾರತ್ ಎಕ್ಸ್‌ಪ್ರೆಸ್

ಉಧಂಪುರ-ಶ್ರೀನಗರ-ಬಾರಾಮುಲ್ಲಾ ರೈಲು ಸಂಪರ್ಕದ ಮೂಲಕ ಜಮ್ಮು ಮತ್ತು ಶ್ರೀನಗರ ನಡುವೆ ವಂದೇ ಭಾರತ್ ಎಕ್ಸ್ ಪ್ರೆಸ್ ಅನ್ನು ಪರಿಚಯಿಸಲಾಗಿದೆ. ಈ ರೀತಿಯ ಇತರ ರೈಲುಗಳಿಗಿಂತ ಭಿನ್ನವಾಗಿ, ಈ ರೈಲನ್ನು ಹಿಮಾಲಯದ ಮೂಳೆಯನ್ನೂ ನಡುಗಿಸುವ ಚಳಿಗಾಲಕ್ಕಾಗಿ ವಿನ್ಯಾಸಗೊಳಿಸಲಾಗಿದೆ. -20 ಡಿಗ್ರಿ ಸೆಲ್ಸಿಯಸ್ ತಾಪಮಾನದಲ್ಲಿಯೂ ಇದು ಸರಾಗವಾಗಿ ಚಲಿಸುತ್ತದೆ. ಬಿಸಿಯಾದ ವಿಂಡ್ ಶೀಲ್ಡ್, ಸುಧಾರಿತ ತಾಪನ ವ್ಯವಸ್ಥೆ ಮತ್ತು ಇನ್ಸುಲೇಟೆಡ್ ಶೌಚಾಲಯಗಳ ರೈಲು ವರ್ಷಪೂರ್ತಿ ಕಾರ್ಯನಿರ್ವಹಿಸುತ್ತದೆ ಮತ್ತು ಆರಾಮದಾಯಕವಾಗಿರುತ್ತದೆ ಎಂಬುದನ್ನು ಇದು ಖಚಿತಪಡಿಸುತ್ತದೆ. ಹಿಮ ಮತ್ತು ಮಂಜುಗಡ್ಡೆಯನ್ನು ತೆರವುಗೊಳಿಸಲು ಹಳಿಗಳ ಮುಂದೆ ಚಲಿಸುವ ಹಿಮ ತೆಗೆಯುವ ರೈಲು ಈ ಮಾರ್ಗಕ್ಕೆ ಸಹಾಯ ಮಾಡುತ್ತದೆ, ವರ್ಷಪೂರ್ತಿ ಸೇವೆಗಳನ್ನು ಖಚಿತಪಡಿಸುತ್ತದೆ. ಭೂಕಂಪನವನ್ನು ತಾಳಿಕೊಳ್ಳಲು ಭೂಕಂಪನ ಡ್ಯಾಂಪರ್ ಗಳನ್ನು ಸಹ ಸ್ಥಾಪಿಸಲಾಗಿದೆ.

ಸವಾಲನ್ನು ಎದುರಿಸುವ ಮಾರ್ಗವನ್ನು ಆರಿಸಿಕೊಂಡಿದೆ" ಎಂದು ಹೇಳಿದರು.

ಚೆನಾಬ್ ಮತ್ತು ಅಂಜಿ ಖಾಡ್ ಸೇತುವೆಗಳ ಮೇಲೆ ನಡೆಯುವಾಗ, ಭಾರತದ ಬಲವಾದ ಉದ್ದೇಶಗಳನ್ನು ಮತ್ತು ಎಂಜಿನಿಯರ್ ಗಳು ಮತ್ತು ಕಾರ್ಮಿಕರ ಕೌಶಲ್ಯ ಮತ್ತು ಧೈರ್ಯವನ್ನು ನಾನು ಅನುಭವಿಸಿದ್ದೇನೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ಚೆನಾಬ್ ಸೇತುವೆ ವಿಶ್ವದ ಅತಿ ಎತ್ತರದ ರೈಲ್ವೆ ಕಮಾನು ಸೇತುವೆಯಾಗಿದೆ. ಐಫೆಲ್ ಟವರ್ ನೋಡಲು ಜನರು ಫ್ರಾನ್ಸ್ ನ ಪ್ಯಾರಿಸ್ ಗೆ ಹೋಗುತ್ತಾರೆ, ಆದರೆ ಈ ಸೇತುವೆ ಐಫೆಲ್ ಟವರ್ ಗಿಂತ 35 ಮೀಟರ್ ಎತ್ತರವಾಗಿದೆ. ಈಗ ಜನರು ಚೆನಾಬ್ ಸೇತುವೆಯ ಮೂಲಕ ಕಾಶ್ಮೀರವನ್ನು ನೋಡಲು ಹೋಗುವುದು ಮಾತ್ರವಲ್ಲ, ಈ ಸೇತುವೆಯು ಆಕರ್ಷಕ ಪ್ರವಾಸಿ ತಾಣವಾಗಲಿದೆ. ಎಲ್ಲರೂ ಸೆಲ್ಫಿ ಪಾಯಿಂಟ್ ಗೆ ಹೋಗಿ ಸೆಲ್ಫಿ ತೆಗೆದುಕೊಳ್ಳುತ್ತಾರೆ. ಅಂಜಿ ಸೇತುವೆ ಕೂಡ ಎಂಜಿನಿಯರಿಂಗ್ ಗೆ ಉತ್ತಮ ಉದಾಹರಣೆಯಾಗಿದೆ. ಈ ಎರಡು ಸೇತುವೆಗಳು ಕೇವಲ ಇಟ್ಟಿಗೆ, ಸಿಮೆಂಟ್, ಉಕ್ಕು ಮತ್ತು ಕಬ್ಬಿಣದ ರಚನೆಗಳಲ್ಲ; ಅವು ಪಿರ್ ಪಂಜಾಲ್ ನ ಪ್ರವೇಶಿಸಲಾಗದ ಬೆಟ್ಟಗಳ ಮೇಲೆ ನಿಂತಿರುವ ಭಾರತದ ಶಕ್ತಿಯ ಜೀವಂತ ಸಂಕೇತವಾಗಿದೆ. ವಿಕಸಿತ ಭಾರತದ ಕನಸು ದೊಡ್ಡದಿದ್ದಷ್ಟೂ ನಮ್ಮ ಧೈರ್ಯ ಮತ್ತು ಸಾಮರ್ಥ್ಯ ಹೆಚ್ಚಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ ಎಂದರು. ●

# ಕೌಶಲ್ಯಾಭಿವೃದ್ಧಿ... ಭವಿಷ್ಯದ ಮಾರ್ಗಸೂಚಿ



*ಶೇ.75ಕ್ಕಿಂತ ಹೆಚ್ಚಿನ ದುಡಿಯುವ ಜನಸಂಖ್ಯೆ ಹೊಂದಿರುವ ಭಾರತವು, ವಿಶ್ವದಲ್ಲೇ ಅತಿ ಹೆಚ್ಚಿನ ಯುವ ಸಮುದಾಯ ಹೊಂದಿರುವ ದೇಶವಾಗಿದೆ. ಭವಿಷ್ಯದ ಕೈಗಾರಿಕಾ ಮತ್ತು ಸೇವಾ ಅಗತ್ಯಗಳಿಗೆ ಅನುಗುಣವಾಗಿ ಯುವ ಪೀಳಿಗೆಯನ್ನು ಸಜ್ಜುಗೊಳಿಸಲು, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2015 ಜುಲೈನಲ್ಲಿ ಕೌಶಲ್ಯ ಭಾರತ ಯೋಜನೆ ಪ್ರಾರಂಭಿಸಿದರು. 10 ವರ್ಷಗಳನ್ನು ಪೂರೈಸುತ್ತಿರುವ ಈ ಯೋಜನೆಯ ಕಾರ್ಯಾಚರಣೆ ಮೂಲಕ, ಇಲ್ಲಿಯವರೆಗೆ 1.63 ಕೋಟಿ ಯುವಕರಿಗೆ ತರಬೇತಿ ನೀಡಲಾಗಿದೆ. ಆದರೆ ಭಾರತ ಕೌಶಲ್ಯ ವರದಿ 2023ರ ಪ್ರಕಾರ, ದೇಶದಲ್ಲಿ ಉದ್ಯೋಗದಲ್ಲಿರುವ ತರಬೇತಿ ಪಡೆದ ವಿದ್ಯಾರ್ಥಿಗಳ ಶೇಕಡಾವಾರು ಪ್ರಮಾಣವು 2014ರಲ್ಲಿ ಇದ್ದ ಶೇಕಡ 33.9ರಿಂದ 2024ರಲ್ಲಿ ಶೇಕಡ 51.3ಕ್ಕೆ ಏರಿಕೆ ಕಂಡಿದೆ...*

ಕಳೆದ 11 ವರ್ಷಗಳಲ್ಲಿ, ಭಾರತವು ಭವಿಷ್ಯದ ಅಗತ್ಯಗಳಿಗೆ ತಕ್ಕಂತೆ ಕೌಶಲ್ಯ ಮತ್ತು ಕಲಿಕೆಯ ಸನ್ನಿವೇಶವನ್ನು ಮರುವ್ಯಾಖ್ಯಾನಿಸಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 2014 ನವೆಂಬರ್ ನಲ್ಲಿ ಇದಕ್ಕಾಗಿಯೇ ಪ್ರತ್ಯೇಕವಾದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ಸ್ಥಾಪಿಸಿದರು. ಇದರ ನಂತರ, ಕೌಶಲ್ಯ ಭಾರತ್ ಮಿಷನ್ ಅನ್ನು 2015 ಜುಲೈ 15ರಂದು ಪ್ರಾರಂಭಿಸಲಾಯಿತು. ಕಳೆದ ದಶಕದಲ್ಲಿ, ಕೌಶಲ್ಯ-ಸಂಬಂಧಿತ ಕಾರ್ಯಕ್ರಮಗಳ ವ್ಯಾಪಕ ಜಾಲವು ಕೋಟ್ಯಂತರ ನಿರ್ಗತಿಕ ಯುವಕರನ್ನು ಕೌಶಲ್ಯದಿಂದ ಸಜ್ಜುಗೊಳಿಸಿದೆ. ಕೌಶಲ್ಯ ಭಾರತ ಮಿಷನ್ ಭಾರತದ ಯುವಕರನ್ನು ಉದ್ಯಮದ ಅಗತ್ಯಗಳಿಗೆ ಅನುಗುಣವಾಗಿ ಕೌಶಲ್ಯಗಳಿಂದ ಸಜ್ಜುಗೊಳಿಸುವ

> **ಕೌಶಲ್ಯ, ಸಾಮರ್ಥ್ಯಗಳು ಅಂದರೆ ಕೇವಲ ಜೇಬಿಗೆ ಹಣ ತುಂಬುವುದಲ್ಲ, ಬದಲಾಗಿ ಅದು ಜೀವನದಲ್ಲಿ ಹೊಸ ಶಕ್ತಿ, ಆತ್ಮವಿಶ್ವಾಸ ನೀಡುತ್ತದೆ. ನಾನು ಜಗತ್ತಿನ ಎಲ್ಲಿಗೆ ಹೋದರೂ, ನನಗೆ ಈ ಶಕ್ತಿ ಇದೆ, ನಾನು ನನ್ನ ಹೊಟ್ಟೆ ತುಂಬಿಸಿಕೊಳ್ಳುತ್ತೇನೆ. ನಾನು ಎಂದಿಗೂ ಭಿಕ್ಷೆ ಬೇಡುವುದಿಲ್ಲ ಎಂಬ ವಿಶ್ವಾಸವನ್ನು ಅವರು ಹೊಂದುತ್ತಾರೆ.**
>
> **- ನರೇಂದ್ರ ಮೋದಿ,**
> **ಪ್ರಧಾನ ಮಂತ್ರಿ**



## ಕಾರ್ಯ(ನೌಕರ)ಪಡೆ ಭವಿಷ್ಯಕ್ಕೆ ಸಿದ್ಧವಾಗುತ್ತಿದೆ

**6.42+** ಕೋಟಿ ಜನರು ಕಳೆದ ದಶಕದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ತರಬೇತಿ ಪಡೆದಿದ್ದಾರೆ.

### ಕೌಶಲ್ಯ ಅಭಿವೃದ್ಧಿ ಯೋಜನೆಯಡಿ ತರಬೇತಿ

| | |
|---|---|
| ಪಿಎಂಕೆವಿವೈ 1.0 (2015-16) | 19.86 ಲಕ್ಷ |
| ಪಿಎಂಕೆವಿವೈ 2.0 (2016-20) | 1.10 ಕೋಟಿ |
| ಪಿಎಂಕೆವಿವೈ 3.0 (2020-21) | 7.37 ಲಕ್ಷ |
| ಪಿಎಂಕೆವಿವೈ 4.0 (2022-26) | 26.01 ಲಕ್ಷ (2025 ಏಪ್ರಿಲ್ 18ರ ವರೆಗೆ) |

- 2016ರಿಂದ ನೇರ ಸ್ಟೈಫಂಡ್ ಪಾವತಿಯೊಂದಿಗೆ 40 ಲಕ್ಷ ಪ್ರಶಿಕ್ಷಣಾರ್ಥಿಗಳನ್ನು ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್ ಉತ್ತೇಜನಾ ಯೋಜನೆಯಲ್ಲಿ ಇರಿಸಲಾಗಿದೆ, ಇದರಲ್ಲಿ ಮಹಿಳೆಯರ ಭಾಗವಹಿಸುವಿಕೆ 21%ಗಿಂತ ಹೆಚ್ಚು ತಲುಪಿದೆ.
- 2018 ಮತ್ತು 2024ರ ನಡುವೆ ದೇಶಾದ್ಯಂತ 80 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಕುಶಲಕರ್ಮಿ ತರಬೇತಿ ಯೋಜನೆಯಡಿ ತರಬೇತಿ ಪಡೆದಿದ್ದಾರೆ. ಈಗ ದೇಶಾದ್ಯಂತ 14,615 ಐಟಿಐಗಳಿವೆ. 2014ರ ವರೆಗೆ ಅವುಗಳ ಸಂಖ್ಯೆ ಕೇವಲ 9,977 ಇತ್ತು.

2018 ಮತ್ತು 2024 ಡಿಸೆಂಬರ್ ನಡುವೆ **30** ಲಕ್ಷಕ್ಕೂ ಹೆಚ್ಚಿನ ತರಬೇತಿ ಅಗತ್ಯವುಳ್ಳ ಜನರಿಗೆ ಜನ ಶಿಕ್ಷಣ ಸಂಸ್ಥಾನಗಳಲ್ಲಿ ತರಬೇತಿ ನೀಡಲಾಗಿದೆ. ಇವರಲ್ಲಿ ಶೇಕಡ 82ರಷ್ಟು ಮಹಿಳಾ ಫಲಾನುಭವಿಗಳಾಗಿದ್ದಾರೆ.

- 2022-23 ಮತ್ತು 2023-24ರ ನಡುವೆ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ(ಎಟಿಎಂಎ)ಯಲ್ಲಿ 76.72 ಲಕ್ಷ ರೈತರಿಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ಜೇನುಸಾಕಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ತರಬೇತಿ ನೀಡಲಾಗಿದೆ.

ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ **6.14** ಲಕ್ಷ ಯುವಕರಿಗೆ ತರಬೇತಿ ನೀಡಲಾಗಿದೆ.



### ಭಾರತವು ಕೃತಕ ಬುದ್ಧಿಮತ್ತೆ ತ್ರಂತ್ರಜ್ಞಾನದ ಕೌಶಲ್ಯ ರಾಜಧಾನಿಯಾಗುತ್ತಿದೆ

ಅತ್ಯಂತ ವಿಶ್ವಾಸಾರ್ಹ ಶ್ರೇಯಾಂಕಗಳ ಪ್ರಕಾರ ಕೃತಕ ಬುದ್ಧಿಮತ್ತೆ(ಎಐ) ಕೌಶಲ್ಯಗಳು, ಎಐ ಸಾಮರ್ಥ್ಯಗಳು ಮತ್ತು ಎಐ ಬಳಸುವ ನೀತಿಗಳನ್ನು ಹೊಂದಿರುವ ಅಗ್ರ ದೇಶಗಳಲ್ಲಿ ಭಾರತವು ಒಂದಾಗಿದೆ. ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ 42 ಸೂಚಕಗಳ ಆಧಾರದ ಮೇಲೆ, ಜಾಗತಿಕ ಮತ್ತು ರಾಷ್ಟ್ರೀಯ ಎಐ ಜೀವಂತ ಶ್ರೇಯಾಂಕಗಳಲ್ಲಿ ಅಮೆರಿಕ, ಚೀನಾ ಮತ್ತು ಯುಕೆ ಜತೆಗೆ ಭಾರತವು ಅಗ್ರ 4 ದೇಶಗಳಲ್ಲಿ ಸ್ಥಾನ ಪಡೆದಿದೆ. ಎಲ್ಲಾ ಯೋಜನೆಗಳಲ್ಲಿ 24 ಪ್ರತಿಶತದಷ್ಟು ಜಾಗತಿಕ ಪಾಲು ಹೊಂದಿರುವ ಗಿಟ್‌ಹಬ್(GitHub) ಭಾರತವನ್ನು ಅಗ್ರಸ್ಥಾನದಲ್ಲಿ ಇರಿಸಿದೆ. ಭಾರತವು 2024 ಮಾರ್ಚ್ 7ರಂದು ಎಐ ಮಿಷನ್ ಅನ್ನು ಅನುಮೋದಿಸಿದೆ, ಇದು ದೇಶದ ಅಭಿವೃದ್ಧಿ ಗುರಿಗಳೊಂದಿಗೆ ಅದನ್ನು ಜೋಡಿಸುವಾಗ ಬಲವಾದ ಮತ್ತು ಅಂತರ್ಗತ ಎಐ ಪರಿಸರ ವ್ಯವಸ್ಥೆಯನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ.

**17.44** ಲಕ್ಷ ನಿರ್ಗತಿಕರಿಗೆ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಗಳಲ್ಲಿ ತರಬೇತಿ ನೀಡಲಾಗಿದೆ.

ಕೌಶಲ್ ಭಾರತ್ ಮಿಷನ್ ಅಡಿ ಕೃತಕ ಬುದ್ಧಿಮತ್ತೆ, ರೊಬೊಟಿಕ್ಸ್ ಮತ್ತು ದತ್ತಾಂಶ(ಡೇಟಾ)ದಂತಹ ಮುಂದುವರಿದ ಕ್ಷೇತ್ರಗಳಲ್ಲಿ 4 ಲಕ್ಷಕ್ಕೂ ಹೆಚ್ಚು ಯುವಕರಿಗೆ ತರಬೇತಿ ನೀಡಲಾಗಿದೆ.

**1,000 ಕ್ಕೂ ಹೆಚ್ಚು** ಶಿಕ್ಷಣ ಸಂಸ್ಥೆಗಳನ್ನು ಕೌಶಲ್ ಭಾರತ್ ಕೇಂದ್ರಗಳಾಗಿ ಸಂಪರ್ಕಿಸಲಾಗಿದೆ.

ಮೂಲಕ ಭವಿಷ್ಯಕ್ಕಾಗಿ ಸಿದ್ಧಪಡಿಸುವ ಗುರಿ ಹೊಂದಿದೆ.

ಈ ಮಿಷನ್ ಅಡಿ, ಭಾರತ ಸರ್ಕಾರವು ದೇಶಾದ್ಯಂತ ಕೌಶಲ್ಯ ವಿಕಾಸ ಕೇಂದ್ರಗಳು ಮತ್ತು ಸಂಸ್ಥೆಗಳ ಜಾಲದ ಮೂಲಕ ಕೌಶಲ್ಯ, ಮರುಕೌಶಲ್ಯ ಮತ್ತು ಉನ್ನತ ಕೌಶಲ್ಯ ತರಬೇತಿ ನೀಡುತ್ತದೆ. ಈ ಮಿಷನ್ ಅಡಿ, ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ(ಪಿಎಂಕೆವಿವೈ), ಜನ ಶಿಕ್ಷಣ ಸಂಸ್ಥಾನ, ರಾಷ್ಟ್ರೀಯ ಶಿಷ್ಯವೃತ್ತಿ ಉತ್ತೇಜನ ಯೋಜನೆ ಮತ್ತು ಕುಶಲಕರ್ಮಿ ತರಬೇತಿ ಯೋಜನೆಯಡಿ ಯುವಕರನ್ನು ಕೌಶಲ್ಯಯುತರನ್ನಾಗಿ ಮಾಡುವ ಕೆಲಸ ಮಾಡಲಾಗುತ್ತಿದೆ.

ಇದರೊಂದಿಗೆ ಗ್ರಾಮೀಣ ಮಟ್ಟದಲ್ಲಿ, ಕೃಷಿ ಅಭಿವೃದ್ಧಿ ಸಚಿವಾಲಯವು ದೀನದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಮತ್ತು ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಗಳ ಜತೆಗೆ ಯುವಕರನ್ನು ಕೌಶಲ್ಯದಿಂದ ಸಜ್ಜುಗೊಳಿಸುತ್ತಿದೆ. ಕಳೆದ ದಶಕದಲ್ಲಿ ವಿವಿಧ ಕೌಶಲ್ಯ ಅಭಿವೃದ್ಧಿ ಉಪಕ್ರಮಗಳ ಮೂಲಕ, ದೇಶದಲ್ಲಿ 6 ಕೋಟಿಗೂ ಹೆಚ್ಚು ಯುವಕರು ಮತ್ತು ಅಗತ್ಯವಿರುವ ಜನರಿಗೆ ಭವಿಷ್ಯಸ್ನೇಹಿ ಕೌಶಲ್ಯಗಳನ್ನು ನೀಡಲಾಗಿದೆ.

2015ರಲ್ಲಿ ಆರಂಭವಾದ ಪಿಎಂಕೆವಿವೈ ಯೋಜನೆಯು

# ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ- ಪಿಎಂಕೆವಿವೈ 4.0

ಪಿಎಂಕೆವಿವೈ 4.0 ಯೋಜನೆಯು ರಾಷ್ಟ್ರೀಯ ಕೌಶಲ್ಯ ಅರ್ಹತಾ ಮಾರ್ಗಸೂಚಿಯ ಪ್ರಕಾರ ಕೌಶಲ್ಯಾಭಿವೃದ್ಧಿ ತರಬೇತಿ ಒದಗಿಸುತ್ತದೆ, ಇದರಲ್ಲಿ ವಿಶೇಷ ಯೋಜನೆಗಳು ಮತ್ತು 15-59 ವರ್ಷ ವಯಸ್ಸಿನ ಫಲಾನುಭವಿಗಳಿಗೆ ಪೂರ್ವ ಕಲಿಕೆಯನ್ನು ಗುರುತಿಸುವ ಮೂಲಕ ಮರುಕೌಶಲ್ಯ ಮತ್ತು ಕೌಶಲ್ಯ ಉನ್ನತೀಕರಣ ಸೇರಿವೆ. ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಉದ್ಯಮ-ಆಧಾರಿತವಾಗಿಸಲು, ಅಲ್ಪಾವಧಿಯ ಕೌಶಲ್ಯ ಕಾರ್ಯಕ್ರಮಗಳಲ್ಲಿ ಕೆಲಸದ ತರಬೇತಿಯ ಏಕೀಕರಣ ಸೇರಿದಂತೆ ರಾಷ್ಟ್ರೀಯ ಆದ್ಯತೆಗಳೊಂದಿಗೆ ಜೋಡಿಸುವ ಮೂಲಕ ಅದನ್ನು ಹೆಚ್ಚು ಪ್ರವೇಶಿಸುವಂತೆ ಗಮನಾರ್ಹ ಬದಲಾವಣೆಗಳನ್ನು ಮಾಡಲಾಗಿದೆ. ಇದು ತರಬೇತಿದಾರರು ನೈಜ-ಪ್ರಪಂಚ ಮತ್ತು ಉದ್ಯಮ ಅನುಭವ ಪಡೆಯುವುದನ್ನು ಖಚಿತಪಡಿಸುತ್ತದೆ. ಉದ್ಯಮ ಮತ್ತು ಹೊಸ-ಯುಗದ ತಂತ್ರಜ್ಞಾನದ ಉದಯೋನ್ಮುಖ ಬೇಡಿಕೆಗಳಿಗೆ ಅನುಗುಣವಾಗಿ ಎಐ, 5ಜಿ ತಂತ್ರಜ್ಞಾನ, ಸೈಬರ್ ಭದ್ರತೆ, ಹಸಿರು ಹೈಡ್ರೋಜನ್ ಮತ್ತು ಡ್ರೋನ್ ತಂತ್ರಜ್ಞಾನದ ಕುರಿತು 400ಕ್ಕೂ ಹೆಚ್ಚು ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.



ವಿಶ್ವ ಆರ್ಥಿಕ ವೇದಿಕೆಯ ವರದಿ ಹೇಳಿದಂತೆ, ಮುಂದಿನ 25 ವರ್ಷಗಳಲ್ಲಿ

**100**

ಕೋಟಿ ಜನರು ಜಾಗತಿಕ ಕಾರ್ಯ(ನೌಕರ)ಪಡೆಗೆ ಸೇರಲಿದ್ದಾರೆ, ಅದರಲ್ಲಿ ಪ್ರತಿ ನಾಲ್ಕರಲ್ಲಿ ಮೂರನೇ ವ್ಯಕ್ತಿ ಭಾರತೀಯನಾಗಿರುತ್ತಾನೆ. ಮುಂಬರುವ ವರ್ಷಗಳಲ್ಲಿ ಭಾರತವು ಜಾಗತಿಕ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಡಾಲರ್ ಆರ್ಥಿಕತೆಗೆ ಗಣನೀಯ ಕೊಡುಗೆ ನೀಡುತ್ತದೆ ಎಂದು ವರದಿ ಖಚಿತಪಡಿಸಿದೆ.

### ಜಾಗತಿಕ ಕೌಶಲ್ಯ ಸ್ಪರ್ಧೆಯಲ್ಲಿ ಭಾರತದ ಬೆಳೆಯುತ್ತಿರುವ ವಿಶ್ವಾಸಾರ್ಹತೆ

| ವರ್ಷ | ಕೌಶಲ್ಯ | ಶ್ರೇಣಿ |
|---|---|---|
| 2013 | 22 | 33 |
| 2019 | 43 | 13 |
| 2022 | 50 | 11 |





## ಈ ಉಪಕ್ರಮಗಳು ಕೌಶಲ್ಯಾಭಿವೃದ್ಧಿಯನ್ನು ಬಲಪಡಿಸುತ್ತವೆ

1. **10 ದೇಶಗಳೊಂದಿಗೆ ಒಪ್ಪಂದ:** ಭಾರತ ಸರ್ಕಾರವು ಬ್ರಿಟನ್, ಫ್ರಾನ್ಸ್, ಜರ್ಮನಿ, ಇಸ್ರೇಲ್, ತೈವಾನ್, ಆಸ್ಟ್ರಿಯಾ, ಮಾರಿಷಸ್, ಆಸ್ಟ್ರೇಲಿಯಾ, ಪೋರ್ಚುಗಲ್ ಮತ್ತು ಫಿನ್‌ಲ್ಯಾಂಡ್‌ಗಳೊಂದಿಗೆ ವಲಸೆ ಮತ್ತು ಚಲನಶೀಲತೆ ಒಪ್ಪಂದಗಳಿಗೆ ಸಹಿ ಹಾಕಿದೆ. ಈ ದೇಶಗಳ ಬೇಡಿಕೆಯೊಂದಿಗೆ ಕೌಶಲ್ಯಗಳನ್ನು ಜೋಡಿಸುವ ಗುರಿಯೊಂದಿಗೆ ಈ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ.

2. **30 ಸ್ಕಿಲ್ ಇಂಡಿಯಾ ಅಂತಾರಾಷ್ಟ್ರೀಯ ಕೇಂದ್ರಗಳು:** ವಿದೇಶಗಳಲ್ಲಿ ಕೌಶಲ್ಯಪೂರ್ಣ ಕಾರ್ಮಿಕರ ಬೇಡಿಕೆಯನ್ನು ಪೂರೈಸಲು ಕೇಂದ್ರ ಸರ್ಕಾರವು 30 ಸ್ಕಿಲ್ ಇಂಡಿಯಾ ಅಂತಾರಾಷ್ಟ್ರೀಯ ಕೇಂದ್ರಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ. ವಾರಾಣಸಿ ಮತ್ತು ಭುವನೇಶ್ವರದಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಮೊದಲ ಹಂತದಲ್ಲಿ 10 ಕೇಂದ್ರಗಳನ್ನು ಸ್ಥಾಪಿಸಲಾಗುವುದು.

3. **ಸ್ಕಿಲ್ ಇಂಡಿಯಾ ಡಿಜಿಟಲ್ ಹಬ್:** ಬಿಗ್ ಡೇಟಾ, ಮೆಷಿನ್ ಲರ್ನಿಂಗ್ ಮತ್ತು ಅನಾಲಿಟಿಕ್ಸ್ ಸೇರಿದಂತೆ ಬಹು ತಂತ್ರಜ್ಞಾನ ಅಂಶಗಳ ಕುರಿತು ಭವಿಷ್ಯದ ಕೋರ್ಸ್‌ಗಳನ್ನು ನೀಡುವ ಮೂಲಕ ಭಾರತೀಯ ಕಾರ್ಯಪಡೆಯನ್ನು ಉದ್ಯಮ 4.0 ಗಾಗಿ ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ, ಇದನ್ನು ಅದರ ಡಿಜಿಟಲ್ ಕಲಿಕಾ ಪಾಲುದಾರರು ನೀಡುತ್ತಾರೆ.

4. **ಇಂಡಸ್ಟ್ರಿ 4.0 ಕೋರ್ಸ್‌ಗಳು:** ಪೈಥಾನ್ ವಿತ್ ಅಡ್ವಾನ್ಸ್ಡ್ ಎಐ, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಫೌಂಡೇಶನ್, ಜನರೇಟಿವ್ ಎಐ, ಬಿಲ್ಡ್ ಕ್ಲಾಸಿಕಲ್ ಮೆಷಿನ್ ಲರ್ನಿಂಗ್ ಮಾಡೆಲ್ಸ್ ವಿತ್ ಸೂಪರ್‌ವೈಸ್ಡ್ ಲರ್ನಿಂಗ್, ಡೇಟಾ ಅನಾಲಿಟಿಕ್ಸ್ ಎಸೆನ್ಷಿಯಲ್ಸ್, ಅನಾಲಿಟಿಕ್ಸ್ ಡೇಟಾ ಇನ್ ರಿಲೇಷನಲ್ ಡೇಟಾ ವೇರ್‌ಹೌಸ್, ಸೈಬರ್ ಸೆಕ್ಯುರಿಟಿ ಎಸೆನ್ಷಿಯಲ್ಸ್, ಇಂಟ್ರಡಕ್ಷನ್ ಟು ಡೇಟಾ ಸೈನ್ಸ್, ಕಿಸಾನ್ ಡ್ರೋನ್ ಆಪರೇಟರ್, ಇವಿ ಸರ್ವಿಸ್ ಟೆಕ್ನಿಷಿಯನ್, ಬಯೋ-ವೇಸ್ಟ್ ಮ್ಯಾನೇಜ್‌ಮೆಂಟ್ ಸೇರಿದಂತೆ ಇತರ ಪ್ರಮಾಣೀಕರಣ ಕೋರ್ಸ್‌ಗಳನ್ನು ಈ ವೇದಿಕೆಯಲ್ಲಿ ನೀಡಲಾಗುತ್ತಿದೆ.

5. **5 ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಗಳು:** ಯುವಕರನ್ನು ಕೌಶಲ್ಯದಿಂದ ಸಜ್ಜುಗೊಳಿಸಲು 2025-26ರ ಬಜೆಟ್‌ನಲ್ಲಿ 5 ರಾಷ್ಟ್ರೀಯ ಶ್ರೇಷ್ಠತಾ ಕೇಂದ್ರಗಳನ್ನು ಘೋಷಿಸಲಾಗಿದೆ.

ಭಾರತದಲ್ಲಿ ಅಲ್ಪಾವಧಿಯ ಕೌಶಲ್ಯ ತರಬೇತಿಯ ಬೆನ್ನೆಲುಬಾಗಿದೆ. ಇದರ ಮೂಲಕ 2025 ಏಪ್ರಿಲ್ 18ರ ವರೆಗೆ ಉತ್ಪಾದನೆ(ತಯಾರಿಕೆ), ಆರೋಗ್ಯ ರಕ್ಷಣೆ, ಐಟಿ ಮತ್ತು ನಿರ್ಮಾಣದಂತಹ ಕ್ಷೇತ್ರಗಳಲ್ಲಿ ಪ್ರಮಾಣೀಕೃತ ತರಬೇತಿಯ ಮೂಲಕ 1.63 ಕೋಟಿಗೂ ಹೆಚ್ಚು ಯುವಕರು ಪ್ರಾಯೋಗಿಕ ಕೌಶಲ್ಯಗಳನ್ನು ಹೊಂದಿದ್ದಾರೆ. ಈ ಯೋಜನೆಯಲ್ಲಿ ಎಲ್ಲರ ಒಳಗೊಳ್ಳುವಿಕೆಗೆ ಒತ್ತು ನೀಡಲಾಗಿದೆ, ಇದರಿಂದಾಗಿ ಮಹಿಳೆಯರು ಮತ್ತು ನಿರ್ಲಕ್ಷಿತ(ಅಂಚಿನಲ್ಲಿರುವ) ಸಮುದಾಯಗಳ ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಬಹುದು. ಕಾಲಾನಂತರದಲ್ಲಿ, ಕೃತಕಬುದ್ಧಿಮತ್ತೆ ಮತ್ತು ಮೆಕಾಟ್ರಾನಿಕ್ಸ್‌ನಂತಹ ಭವಿಷ್ಯದ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದ ತರಬೇತಿಯನ್ನು ಸಹ ಈ ಕಾರ್ಯಕ್ರಮಕ್ಕೆ ಸೇರಿಸಲಾಗಿದೆ.

# 2 ರೈಲ್ವೇ ಯೋಜನೆಗಳಿಗೆ ಅನುಮೋದನೆ
# ಸಂಪರ್ಕ ಹೆಚ್ಚಿಸಿ ಅಂತರ ಕಡಿಮೆ ಮಾಡುತ್ತದೆ

*ಕೇಂದ್ರ ಸರ್ಕಾರವು ಮೂಲಸೌಕರ್ಯ ಅಭಿವೃದ್ಧಿಗೆ ಸಂಪೂರ್ಣ ಬದ್ಧವಾಗಿದೆ. ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಜೂನ್ 11ರಂದು ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು ಜಾರ್ಖಂಡ್, ಕರ್ನಾಟಕ ಮತ್ತು ಆಂಧ್ರ ಪ್ರದೇಶದ 7 ಜಿಲ್ಲೆಗಳಿಗೆ ನೇರವಾಗಿ ಪ್ರಯೋಜನ ನೀಡುವ 2 ಮಲ್ಟಿಟ್ರ್ಯಾಕ್ ಯೋಜನೆಗಳಿಗೆ ಅನುಮೋದನೆ ನೀಡಿತು. ಅವುಗಳ ಒಟ್ಟು ವೆಚ್ಚ 6,405 ಕೋಟಿ ರೂ. ಆಗಿದೆ. ಈ ಯೋಜನೆಗಳು ಈ ರಾಜ್ಯಗಳ ಅಭಿವೃದ್ಧಿ ಪ್ರಯಾಣವನ್ನು ವೇಗಗೊಳಿಸುತ್ತವೆ. ಅವು ವ್ಯವಹಾರಗಳು ಮತ್ತು ವ್ಯಕ್ತಿಗಳ ಸಮೃದ್ಧಿಯನ್ನು ವೇಗಗೊಳಿಸುತ್ತವೆ, ಇಂಗಾಲದ ಹೊರಸೂಸುವಿಕೆ ಕಡಿಮೆ ಮಾಡುತ್ತವೆ ಮತ್ತು ಸಾಕಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತವೆ....*

**ನಿರ್ಧಾರ: ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಕೊಡೆರ್ಮಾ-ಬರ್ಕಕಾನಾ ಮಲ್ಟಿಟ್ರ್ಯಾಕಿಂಗ್ ಯೋಜನೆಗೆ ಅನುಮೋದನೆ ನೀಡಿದೆ. ಇದು 3,063 ಕೋಟಿ ರೂ. ವೆಚ್ಚದ 133 ಕಿ.ಮೀ. ಉದ್ದದ ಯೋಜನೆಯಾಗಿದೆ.**

**ಪರಿಣಾಮ:** ಯೋಜನಾ ವಿಭಾಗವು ಜಾರ್ಖಂಡ್‌ನ ಪ್ರಮುಖ ಕಲ್ಲಿದ್ದಲು ಉತ್ಪಾದಿಸುವ ಪ್ರದೇಶದ ಮೂಲಕ ಹಾದುಹೋಗುತ್ತದೆ. ಹೆಚ್ಚುವರಿಯಾಗಿ, ಇದು ಪಾಟ್ನಾ ಮತ್ತು ರಾಂಚಿ ನಡುವಿನ ಅತ್ಯಂತ ಕಡಿಮೆ ಮತ್ತು ಅತ್ಯಂತ ಪರಿಣಾಮಕಾರಿ ರೈಲು ಸಂಪರ್ಕವಾಗಿದೆ. ಇದು ಜಾರ್ಖಂಡ್‌ನ ಕೊಡೆರ್ಮಾ, ಛತ್ರ, ಹಜಾರಿಬಾಗ್ ಮತ್ತು ರಾಮಗಢವನ್ನು ಸಂಪರ್ಕಿಸುತ್ತದೆ. ಈ ಯೋಜನೆಯು 938 ಹಳ್ಳಿಗಳಿಗೆ ಮತ್ತು 15 ಲಕ್ಷ ಜನಸಂಖ್ಯೆಗೆ ಉತ್ತಮ ಸಂಚಾರ ಸಂಪರ್ಕ ಒದಗಿಸುತ್ತದೆ. ಈ ಯೋಜನೆಯು 17 ಪ್ರಮುಖ ಸೇತುವೆಗಳು, 180 ಸಣ್ಣ ಸೇತುವೆಗಳು, 42 ಆರ್‌ಒಬಿಗಳು ಮತ್ತು 13 ಆರ್‌ಯುಬಿಗಳನ್ನು ಒಳಗೊಂಡಿದೆ. ಇದು ಮಾತ್ರವಲ್ಲದೆ, ಇದು 30.4 ದಶಲಕ್ಷ ಟನ್ ಹೆಚ್ಚುವರಿ ಸರಕು ಸಾಗಣೆಗೆ ಅನುಕೂಲ ಮಾಡಿಕೊಡುತ್ತದೆ. ಇದು ವಾರ್ಷಿಕವಾಗಿ 163 ಕೋಟಿ ಕೆಜಿ ಇಂಗಾಲ ಹೊರಸೂಸುವಿಕೆಯನ್ನು ಕಡಿಮೆ ಮಾಡುತ್ತದೆ, ಇದು 7 ಕೋಟಿ ಮರಗಳನ್ನು ನೆಡುವುದಕ್ಕೆ ಸಮಾನವಾಗಿದೆ. ಇದು 32 ಕೋಟಿ ಲೀಟರ್ ಡೀಸೆಲ್ ಅನ್ನು ಸಹ ಉಳಿಸುತ್ತದೆ.

**ನಿರ್ಧಾರ: ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿಯು ಬಳ್ಳಾರಿ-ಚಿಕ್ಕಜಾಜೂರು ಜೋಡಿ ಮಾರ್ಗಕ್ಕೆ ಅನುಮೋದನೆ ನೀಡಿದೆ. ಈ ಮಾರ್ಗವು 185 ಕಿಲೋಮೀಟರ್ ಉದ್ದವಿದ್ದು, 3,342 ಕೋಟಿ ರೂ. ವೆಚ್ಚವಾಗಲಿದೆ.**

**ಪರಿಣಾಮ:** ಈ ಯೋಜನೆಯು ಕರ್ನಾಟಕದ ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳು ಮತ್ತು ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಮೂಲಕ ಹಾದುಹೋಗುತ್ತದೆ. ಇದು ಮಂಗಳೂರು ಬಂದರನ್ನು ಸಿಕಂದರಾಬಾದ್‌ಗೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದೆ. ಈ ಯೋಜನೆಯು 19 ನಿಲ್ದಾಣಗಳು, 29 ಪ್ರಮುಖ ಸೇತುವೆಗಳು, 230 ಸಣ್ಣ ಸೇತುವೆಗಳು, 21 ಆರ್‌ಒಬಿಗಳು ಮತ್ತು 85 ಆರ್‌ಯುಬಿಗಳನ್ನು ಒಳಗೊಂಡಿದೆ. ಈ ಬಹುಮಾರ್ಗ(ಮಲ್ಟಿಟ್ರ್ಯಾಕಿಂಗ್) ಯೋಜನೆಯು ಕಬ್ಬಿಣದ ಅದಿರು, ಕೋಕಿಂಗ್ ಕಲ್ಲಿದ್ದಲು, ಸಿದ್ಧಪಡಿಸಿದ ಉಕ್ಕು, ರಸಗೊಬ್ಬರಗಳು, ಆಹಾರ ಧಾನ್ಯಗಳು, ಪೆಟ್ರೋಲಿಯಂ ಉತ್ಪನ್ನಗಳು ಇತ್ಯಾದಿಗಳ ಸಾಗಣೆಗೆ ಅನುಕೂಲವಾಗಲಿದೆ. ಇದರ ಹೊರತಾಗಿ, 470 ಹಳ್ಳಿಗಳು ಮತ್ತು ಸುಮಾರು 13 ಲಕ್ಷ ಜನರಿಗೆ ಉತ್ತಮ ಸಂಪರ್ಕ ಒದಗಿಸುತ್ತದೆ. ಈ ಯೋಜನೆಯು 18.9 ದಶಲಕ್ಷ ಟನ್ ಹೆಚ್ಚುವರಿ ಸರಕು ಸಾಗಣೆಗೆ ಅನುಕೂಲವಾಗಲಿದೆ, ವರ್ಷಕ್ಕೆ 101 ಕೋಟಿ ಕೆಜಿ ಇಂಗಾಲ ಹೊರಸೂಸುವಿಕೆ ಕಡಿಮೆ ಮಾಡುತ್ತದೆ, ಇದು 4 ಕೋಟಿ ಮರಗಳನ್ನು ನೆಡುವುದಕ್ಕೆ ಸಮನಾಗಿದೆ. ಈ ಯೋಜನೆಯು 20 ಕೋಟಿ ಲೀಟರ್ ಡೀಸೆಲ್ ಅನ್ನು ಸಹ ಉಳಿಸುತ್ತದೆ.



**2 ಪ್ರಮುಖ ರೈಲ್ವೇ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ವಿವಿಧ ರಾಜ್ಯಗಳನ್ನು ಸಂಪರ್ಕಿಸುವ ಈ ಯೋಜನೆಗಳು ಸಂಪರ್ಕ, ವಾಣಿಜ್ಯವನ್ನು ಸುಧಾರಿಸುತ್ತದೆ ಮತ್ತು ಸುಸ್ಥಿರತೆಯನ್ನು ಉತ್ತೇಜಿಸುತ್ತದೆ.**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**



# ...ಆದ್ದರಿಂದ ಜಗತ್ತು ಎದ್ದು ನಿಲ್ಲುತ್ತದೆ

# ವಿಪತ್ತುಗಳ ವಿರುದ್ಧ ಒಗ್ಗಟ್ಟಾಗಿದೆ

*ಪ್ರಕೃತಿ ವಿಕೋಪದ ಪರಿಣಾಮವಾಗಿ ಪ್ರತಿ ವರ್ಷ, ಲಕ್ಷಾಂತರ ಜನರು ನಿರಾಶ್ರಿತರಾಗುತ್ತಿದ್ದಾರೆ. ಈ ಭಯಾನಕ ವಿಪತ್ತು ಅಂಕಿಅಂಶಗಳನ್ನು ಕಡಿಮೆ ಮಾಡಲು ಬಲವಾದ ವಿಪತ್ತು-ಪ್ರತಿಬಂಧಕ ಮೂಲಸೌಕರ್ಯ ಮತ್ತು ಮುಂಗಡ ಸಿದ್ಧತೆ ಮಾತ್ರ ಸೂಕ್ತ ಮಾರ್ಗವಾಗಿದೆ. 2019ರ ಹವಾಮಾನ ಬದಲಾವಣೆ ಶೃಂಗಸಭೆಯಲ್ಲಿ, ಭಾರತವು ವಿಶ್ವಕ್ಕಾಗಿ ವಿಪತ್ತು ನಿರ್ವಹಣೆಯ ಮೂಲಸೌಕರ್ಯ ಮೈತ್ರಿಕೂಟ(ಸಿ ಡಿ ಆರ್ ಐ) ಆರಂಭಿಸುವ ಮೂಲಕ ಈ ದಿಕ್ಕಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿತು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಯುರೋಪ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಮೊದಲ ಬಾರಿಗೆ ಜಾಗತಿಕ ಸಹಕಾರ, ಸುಸ್ಥಿರ ಅಭಿವೃದ್ಧಿ ಮತ್ತು ಸದೃಢವಾದ ವಿಪತ್ತು ನಿರ್ವಹಣಾ ಮೂಲಸೌಕರ್ಯ ಹೊಂದುವ ಅಗತ್ಯವನ್ನು ಒತ್ತಿ ಹೇಳಿದರು.*

ಒಂದು ವರದಿಯ ಪ್ರಕಾರ, ಕಳೆದ 10 ವರ್ಷಗಳಲ್ಲಿ, ನೈಸರ್ಗಿಕ ವಿಕೋಪಗಳಿಂದಾಗಿ 26 ಕೋಟಿಗೂ ಹೆಚ್ಚು ಜನರು ತಮ್ಮ ಮನೆಗಳನ್ನು ತೊರೆಯಬೇಕಾಯಿತು. ಪ್ರವಾಹ, ಭೂಕಂಪಗಳು ಮತ್ತು ಬಿರುಗಾಳಿಗಳು 2023ರ ಒಂದೇ ವರ್ಷದಲ್ಲಿ ವಿಶ್ವಾದ್ಯಂತ 170 ಶತಕೋಟಿ ಡಾಲರ್ ಗಿಂತ ಹೆಚ್ಚಿನ ನಷ್ಟ ಉಂಟುಮಾಡಿವೆ. ಈ ನಷ್ಟಗಳನ್ನು ಕಡಿಮೆ ಮಾಡಲು, ಜೂನ್ 7ರಂದು ಫ್ರಾನ್ಸ್‌ನಲ್ಲಿ 'ಕರಾವಳಿ ಪ್ರದೇಶಗಳಿಗೆ ಚೇತರಿಕೆಯ ಭವಿಷ್ಯ ರೂಪಿಸುವುದು' ವಿಷಯದ ಮೇಲೆ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ, ಭಾರತ ಮತ್ತು ಬಾಂಗ್ಲಾದೇಶದಲ್ಲಿ ಚಂಡಮಾರುತ(ಸೈಕ್ಲೋನ್) ರೆಮಲ್, ಕೆರಿಬಿಯನ್‌ನಲ್ಲಿ ಚಂಡಮಾರುತ ಬೆರಿಲ್, ಆಗ್ನೇಯ ಏಷ್ಯಾದಲ್ಲಿ ಟೈಫೂನ್ ಯಾಗಿ, ಅಮೆರಿಕದಲ್ಲಿ ಹೆಲೀನ್ ಚಂಡಮಾರುತ, ಫಿಲಿಫೀನ್ಸ್‌ನಲ್ಲಿ ಟೈಫೂನ್ ಉಸಾಗಿ ಮತ್ತು ಆಫ್ರಿಕಾದ ಕೆಲವು ಭಾಗಗಳಲ್ಲಿ ಚಿಡೋ ಚಂಡಮಾರುತ ಸೇರಿದಂತೆ ಇತ್ತೀಚಿನ ಪ್ರಕೃತಿ ವಿಪತ್ತುಗಳನ್ನು ಉಲ್ಲೇಖಿಸಿದರು. ಈ ವಿಕೋಪಗಳು ಜೀವಗಳು ಮತ್ತು ಆಸ್ತಿಗೆ ಗಮನಾರ್ಹ ಹಾನಿ ಉಂಟುಮಾಡಿವೆ, ಇದು ಚೇತರಿಕೆಯ ಮೂಲಸೌಕರ್ಯ ಮತ್ತು ಪೂರ್ವಭಾವಿ ವಿಪತ್ತು ನಿರ್ವಹಣೆಯ ಅಗತ್ಯವನ್ನು ಬಲಪಡಿಸುತ್ತದೆ ಎಂದು ಅವರು ಒತ್ತಿ ಹೇಳಿದರು. 1999ರ ಸೂಪರ್ ಸೈಕ್ಲೋನ್ ಮತ್ತು 2004ರ ಸುನಾಮಿ ಸೇರಿದಂತೆ ವಿನಾಶಕಾರಿ ಪ್ರಕೃತಿ ವಿಪತ್ತುಗಳೊಂದಿಗೆ ಭಾರತದ ಹಿಂದಿನ ಅನುಭವಗಳನ್ನು ನೆನಪಿಸಿಕೊಂಡ ಪ್ರಧಾನ ಮಂತ್ರಿ, ಭಾರತವು ಚೇತರಿಕೆ ಅಥವಾ ಸುಸ್ಥಿರತೆಯೊಂದಿಗೆ ಹೇಗೆ ಹೊಂದಿಕೊಂಡಿತು ಮತ್ತು ಪುನರ್ ನಿರ್ಮಿಸಿತು, ದುರ್ಬಲ ಪ್ರದೇಶಗಳಲ್ಲಿ ಚಂಡಮಾರುತ ಆಶ್ರಯ(ಶಿಬಿರ)ಗಳನ್ನು ನಿರ್ಮಿಸಿತು, 29 ದೇಶಗಳಿಗೆ ಪ್ರಯೋಜನ ನೀಡುವ ಸುನಾಮಿ ಎಚ್ಚರಿಕೆವ್ಯವಸ್ಥೆಯನ್ನುಸ್ಥಾಪಿಸಲು ಕೊಡುಗೆನೀಡಿತು ಎಂಬುದನ್ನು ಅವರು ಒತ್ತಿ ಹೇಳಿದರು. ಚೇತರಿಕೆ ಅಥವಾ ಸುಸ್ಥಿರತೆಯ ಮನೆಗಳು, ಆಸ್ಪತ್ರೆಗಳು, ಶಾಲೆಗಳು, ಇಂಧನ ವ್ಯವಸ್ಥೆಗಳು, ನೀರಿನ ಭದ್ರತಾ ಕ್ರಮಗಳು ಮತ್ತು ಮುಂಚಿನ ಎಚ್ಚರಿಕೆ ವ್ಯವಸ್ಥೆಗಳನ್ನು ನಿರ್ಮಿಸಲು 25 ಸಣ್ಣ ದ್ವೀಪ ಅಭಿವೃದ್ಧಿಶೀಲ ದೇಶಗಳೊಂದಿಗೆ ವಿಪತ್ತು ಚೇತರಿಕೆಯ ಮೂಲಸೌಕರ್ಯ ಮೈತ್ರಿಕೂಟ(ಸಿಡಿಆರ್ ಐ) ನಡೆಸುತ್ತಿರುವ ಕೆಲಸವನ್ನು ಒತ್ತಿ ಹೇಳಿದ ಪ್ರಧಾನ ಮಂತ್ರಿ






## ಪ್ರಕೃತಿ ವಿಕೋಪಗಳ ಅಪಾಯ ಕಡಿತಕ್ಕೆ ಭಾರತದ ಹಲವು ಉಪಕ್ರಮಗಳು

- ಶಾಂಘೈ ಸಹಕಾರ ಸಂಸ್ಥೆ(ಎಸ್‌ಸಿಒ), ಬಹು-ವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರಕ್ಕಾಗಿ ಬಂಗಾಳ ಕೊಲ್ಲಿ ಉಪಕ್ರಮ(ಬಿಮ್‌ಸ್ಟೆಕ್) ಮತ್ತು ಹಿಂದೂ ಮಹಾಸಾಗರ ರಿಮ್ ಸಂಘ(ಐಒಆರ್ ಎ)ದಂತಹ ಹಲವಾರು ಪ್ರಾದೇಶಿಕ ಸಂಸ್ಥೆಗಳ ಅಡಿ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಸರ್ಕಾರವು ಪ್ರಕೃತಿ ವಿಪತ್ತುಗಳ ಅಪಾಯ ನಿರ್ವಹಣೆಯಲ್ಲಿ ಪ್ರಾದೇಶಿಕ ಸಹಕಾರವನ್ನು ಉತ್ತೇಜಿಸಿದೆ.
- ಭಾರತವು ಈ ಮೇಲಿನ ಸಂಸ್ಥೆಗಳೊಂದಿಗೆ ಜಂಟಿ ಅಭ್ಯಾಸಗಳನ್ನು ನಡೆಸಿದೆ ಮತ್ತು ಪ್ರಕೃತಿ ವಿಕೋಪಗಳ ನಿರ್ವಹಣೆಯಲ್ಲಿ ಉತ್ತಮ ಅಭ್ಯಾಸಗಳ ಹಂಚಿಕೆಯನ್ನು ಸುಗಮಗೊಳಿಸಿದೆ.
- ಭಾರತೀಯ ಸುನಾಮಿ ಮುಂಚಿನ ಎಚ್ಚರಿಕೆ ಕೇಂದ್ರ(ಐಟಿಇಡಬ್ಲ್ಯುಸಿ)ವು ಇಡೀ ಹಿಂದೂ ಮಹಾಸಾಗರ ಪ್ರದೇಶದಲ್ಲಿ 'ನೈಜ ಸಮಯದಲ್ಲಿ' ಕರಾವಳಿ ಪ್ರದೇಶಗಳಿಗೆ ಬೆದರಿಕೆ, ಒಳಬರುವ ಅಲೆಗಳ ಎತ್ತರವನ್ನು ಮುನ್ಸೂಚಿಸುವ ಮತ್ತು ದುರ್ಬಲ ಕಟ್ಟಡಗಳನ್ನು ಗುರುತಿಸುವ ಶಕ್ತಿ ಹೊಂದಿದೆ. ಹಾಗಾಗಿ, ವಿಶ್ವದ 5 ದೇಶಗಳಲ್ಲಿ ಭಾರತವು ಒಂದಾಗಿದೆ ಎಂದು ಪ್ರಕೃತಿ ವಿಕೋಪಗಳ ಅಪಾಯ ಕಡಿತದ ವಿಶ್ವಸಂಸ್ಥೆ ಕಚೇರಿ(ಯುಎನ್‌ಡಿಆರ್‌ಆರ್) ಗುರುತಿಸಿದೆ.
- 'ವಸುಧೈವ ಕುಟುಂಬಕಂ'ನ ಉತ್ಸಾಹದಲ್ಲಿ ಸರ್ಕಾರವು, ಪ್ರಕೃತಿ ವಿಕೋಪ ಪೀಡಿತ ದೇಶಗಳಿಗೆ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ ಸಹಾಯವನ್ನು ಒದಗಿಸುತ್ತಿದೆ. 2023 ಫೆಬ್ರವರಿಯಲ್ಲಿ ಸಂಭವಿಸಿದ ವಿನಾಶಕಾರಿ ಭೂಕಂಪದಿಂದ ಹಾನಿಗೊಳಗಾದ ಟರ್ಕಿ ಮತ್ತು ಸಿರಿಯಾಕ್ಕೆ ಭಾರತವು ಎನ್‌ಡಿಆರ್‌ಎಫ್ ಮತ್ತು ವೈದ್ಯಕೀಯ ತಂಡಗಳನ್ನು ಪರಿಹಾರ ಸಾಮಗ್ರಿಗಳೊಂದಿಗೆ ಕಳುಹಿಸುವ ಮೂಲಕ ತಕ್ಷಣದ ಸಹಾಯ ನೀಡಿದೆ.



ಭಾರತವು ಜಿ-20 ಅಧ್ಯಕ್ಷತೆ ವಹಿಸಿದ್ದಾಗ, ಪ್ರಕೃತಿ ವಿಕೋಪಗಳ ಅಪಾಯ ಕಡಿತದ ಕುರಿತು ಕಾರ್ಯನಿರತ ಗುಂಪು ಸ್ಥಾಪಿಸಿತು, ಇದು ವಿಪತ್ತು ಅಪಾಯ ಕಡಿತದ 5 ಆದ್ಯತೆಯ ಕ್ಷೇತ್ರಗಳನ್ನು ಗುರುತಿಸಿತು.

## ಜಗತ್ತಿಗೆ ಬಲವಾದ ಮತ್ತು ಚೇತರಿಕೆಯ ಭವಿಷ್ಯದ ಆದ್ಯತೆಗಳು

- ಜಾಗತಿಕ ಆದ್ಯತೆಗಳ ಕುರಿತು ಮಾತನಾಡಿದ ಪ್ರಧಾನ ಮಂತ್ರಿ ಮೋದಿ, ವಿಪತ್ತುಗಳನ್ನು ಎದುರಿಸಲು ಕೋರ್ಸ್‌ಗಳು, ಮಾಡ್ಯೂಲ್‌ಗಳು ಮತ್ತು ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಉನ್ನತ ಶಿಕ್ಷಣದ ಭಾಗವಾಗಿ ಮಾಡಬೇಕು ಎಂದು ಹೇಳಿದರು.
- ಅನೇಕ ದೇಶಗಳು ವಿಪತ್ತುಗಳನ್ನು ಎದುರಿಸುತ್ತವೆ ಮತ್ತು ಬಲವಾಗಿ ಪುನರ್ ನಿರ್ಮಿಸುತ್ತವೆ. ಅವರ ಕಲಿಕೆ ಮತ್ತು ಉತ್ತಮ ಅಭ್ಯಾಸಗಳ ಜಾಗತಿಕ ಡಿಜಿಟಲ್ ಭಂಡಾರವನ್ನು ರೂಪಿಸುವುದು ಪ್ರಯೋಜನಕಾರಿಯಾಗಿದೆ.
- ವಿಪತ್ತುಗಳನ್ನು ಎದುರಿಸಲು ನವೀನ ಹಣಕಾಸಿನ ಅಗತ್ಯವಿದೆ. ನಾವು ಕಾರ್ಯಸಾಧು ಕಾರ್ಯಕ್ರಮಗಳನ್ನು ಸಿದ್ಧಪಡಿಸಬೇಕು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹಣಕಾಸಿನ ಪ್ರವೇಶವನ್ನು ಖಚಿತಪಡಿಸಿಕೊಳ್ಳಬೇಕು.
- ನಾವು ಅಭಿವೃದ್ಧಿಶೀಲ ಸಣ್ಣ ದ್ವೀಪ ರಾಷ್ಟ್ರಗಳನ್ನು ದೊಡ್ಡ ಸಾಗರ ದೇಶಗಳಾಗಿ ನೋಡುತ್ತೇವೆ. ಅವುಗಳ ದುರ್ಬಲತೆಯಿಂದಾಗಿ ಅವರಿಗೆ ವಿಶೇಷ ಗಮನ ಬೇಕು.
- ಮುಂಚಿನ ಎಚ್ಚರಿಕೆ ವ್ಯವಸ್ಥೆಗಳ ಬಲಪಡಿಸುವಿಕೆ ಮತ್ತು ಸಮನ್ವಯ ಸಾಧಿಸುವುದು ಬಹಳ ಮುಖ್ಯ. ಇದು ಸಕಾಲಿಕ ನಿರ್ಧಾರ ತೆಗೆದುಕೊಳ್ಳಲು ಮತ್ತು ಪರಿಣಾಮಕಾರಿ ಅನತಿ ದೂರದ ಸಂವಹನಕ್ಕೆ ಸಹಾಯ ಮಾಡುತ್ತದೆ.

ಮೋದಿ, ಪೆಸಿಫಿಕ್ ಹಿಂದೂ ಮಹಾಸಾಗರ ಮತ್ತು ಕೆರಿಬಿಯನ್ ಪ್ರದೇಶಗಳ ಪ್ರತಿನಿಧಿಗಳ ಉಪಸ್ಥಿತಿಗೆ ಮೆಚ್ಚುಗೆ ವ್ಯಕ್ತಪಡಿಸಿದರು, ಒಕ್ಕೂಟದಲ್ಲಿ ಆಫ್ರಿಕನ್ ಒಕ್ಕೂಟದ ಭಾಗವಹಿಸುವಿಕೆಯನ್ನು ಅವರು ಸ್ವಾಗತಿಸಿದರು. ಬಲವಾದ ಮತ್ತು ಚೇತರಿಕೆಯ ಭವಿಷ್ಯ ನಿರ್ಮಿಸುವಂತೆ ಅವರು ಜಗತ್ತಿಗೆ ಕರೆ ನೀಡಿದರು. "ಪ್ರತಿಯೊಂದು ಸವಾಲಿನ ವಿರುದ್ಧವೂ ಬಲವಾಗಿ ನಿಲ್ಲುವ ಅಂತಹ ಮೂಲಸೌಕರ್ಯವನ್ನು ನಾವು ನಿರ್ಮಿಸೋಣ. ಜಗತ್ತಿಗೆ ಬಲವಾದ ಮತ್ತು ಚೇತರಿಕೆಯ ಭವಿಷ್ಯವನ್ನು ನಿರ್ಮಿಸೋಣ" ಎಂದು ಕರೆ ನೀಡಿದರು.

# ಪ್ರಾದೇಶಿಕ ಸಂಪರ್ಕದಿಂದ ಜಾಗತಿಕ ವಿಸ್ತರಣೆಯವರೆಗೆ

## ವಾಯುಯಾನ ನಕ್ಷೆಯಲ್ಲಿ ಭಾರತದ ದೈತ್ಯ ಜಿಗಿತ

*ಭಾರತದ ವೈಮಾನಿಕ ಯಾನ ವಲಯವು ಈಗ ಅತ್ಯಂತ ವೇಗದ ಬೆಳವಣಿಗೆಯ ದರ ಕಾಣುತ್ತಿದೆ. ಭಾರತವು ವಿಶ್ವದ 3ನೇ ಅತಿದೊಡ್ಡ ದೇಶೀಯ ವಾಯುಯಾನ ಮಾರುಕಟ್ಟೆಯಾಗಿ ಹೊರಹೊಮ್ಮುತ್ತಿದೆ. ಐತಿಹಾಸಿಕ ಪ್ರಯಾಣಿಕರ ಬೆಳವಣಿಗೆಯ ವಿಷಯದಲ್ಲಿ ಮಾತ್ರವಲ್ಲದೆ, ವಿಮಾನ ನಿಲ್ದಾಣ ಮೂಲಸೌಕರ್ಯ, ಪ್ರಾದೇಶಿಕ ಸಂಪರ್ಕ ಮತ್ತು ಖಾಸಗಿ ವಲಯದ ಹೂಡಿಕೆಯಲ್ಲೂ ಹೊಸ ಅಧ್ಯಾಯ ಬರೆಯುತ್ತಿದೆ. ಮುಂಬರುವ ವರ್ಷಗಳಲ್ಲಿ ಭಾರತದ ನಾಗರಿಕ ವಿಮಾನಯಾನ ವ್ಯವಹಾರದಲ್ಲಿ ಹಲವಾರು ಅವಕಾಶಗಳಿವೆ. ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಘಟನೆಯ ಸಮಾವೇಶ ಮತ್ತು ವಿಶ್ವ ವಾಯು ಸಾರಿಗೆ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಭಾರತದಲ್ಲಿ ಇರುವ ಆಕರ್ಷಕ ವ್ಯವಹಾರ ಅವಕಾಶಗಳನ್ನು ಪ್ರಸ್ತಾಪಿಸಿದರು.*

ಜೂನ್ 2ರಂದು ದೆಹಲಿಯ ಭಾರತ್ ಮಂಟಪದಲ್ಲಿ ನಡೆದ ಅಂತಾರಾಷ್ಟ್ರೀಯ ವಾಯು ಸಾರಿಗೆ ಸಂಘಟನೆ(ಐಎಟಿಎ) ಮತ್ತು ವಿಶ್ವ ವಾಯು ಸಾರಿಗೆ ಶೃಂಗಸಭೆ(ವ್ಯಾಟ್ಸ್)ಯ 81ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾರತವು ವಿಶ್ವದ 3ನೇ ಅತಿದೊಡ್ಡ ದೇಶೀಯ ವಾಯುಯಾನ ಮಾರುಕಟ್ಟೆಯಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿದರು. ಸರ್ಕಾರಿ ಅಧಿಕಾರಿಗಳು ಸೇರಿದಂತೆ ಜಾಗತಿಕ ವಾಯುಯಾನ ಉದ್ಯಮದ ಉನ್ನತ ತಜ್ಞರು ಮತ್ತು ಈ ವಲಯದ ಇತರೆ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಭಾರತದಲ್ಲಿ ಕೊನೆಯ ವಾರ್ಷಿಕ ಸಾಮಾನ್ಯ ಸಭೆ 42 ವರ್ಷಗಳ ಹಿಂದೆ 1983ರಲ್ಲಿ ನಡೆದಿತ್ತು. ಉಡಾನ್ ಯೋಜನೆಯಡಿ 1.5 ಕೋಟಿಗೂ ಹೆಚ್ಚು ಪ್ರಯಾಣಿಕರು ಅಗ್ಗದ ದರದ ವಿಮಾನ ಪ್ರಯಾಣದ ಲಾಭ ಪಡೆದುಕೊಂಡಿದ್ದಾರೆ. ಭಾರತದ ವಿಮಾನಯಾನ ಉದ್ಯಮವು ನಿರಂತರವಾಗಿ ಎರಡಂಕಿಗಳಲ್ಲಿ ಬೆಳೆಯುತ್ತಿರುವುದಕ್ಕೆ ಇದೇ ಕಾರಣ ಎಂದರು.

ಕೇಂದ್ರ ಸರ್ಕಾರದ 'ಉಡಾನ್' ಯೋಜನೆಯು ಸಣ್ಣ ನಗರಗಳನ್ನು ವಾಯುಯಾನ ನಕ್ಷೆಯಲ್ಲಿ ತರುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಕಳೆದ ದಶಕದಲ್ಲಿ ಭಾರತದಲ್ಲಿ ವಿಮಾನ ನಿಲ್ದಾಣಗಳು ಮತ್ತು ವಿಮಾನ ಪ್ರಯಾಣಿಕರ ಸಂಖ್ಯೆ ವೇಗವಾಗಿ ಬೆಳೆದಿದ್ದು, ಮುಂಬರುವ 5 ವರ್ಷಗಳಲ್ಲಿ ಈ ಬೆಳವಣಿಗೆ ಇನ್ನೂ ವೇಗವಾಗುವ ನಿರೀಕ್ಷೆಯಿದೆ. ಮುಂದಿನ 5 ವರ್ಷಗಳಲ್ಲಿ








ಭಾರತದಲ್ಲಿ ವಿಮಾನ ಪ್ರಯಾಣಿಕರ ಸಂಖ್ಯೆ 25 ಕೋಟಿಗಿಂತ ಹೆಚ್ಚಾಗುವ ಅಂದಾಜಿದೆ. ಒಂದು ಅಂದಾಜಿನ ಪ್ರಕಾರ 2030ರ ವೇಳೆಗೆ, ದೇಶದಲ್ಲಿ ಪ್ರತಿ ವರ್ಷ 50 ಕೋಟಿ ಜನರು ವಿಮಾನದಲ್ಲಿ ಪ್ರಯಾಣಿಸುತ್ತಾರೆ, ಈ ಸಂಖ್ಯೆ ಅನೇಕ ದೇಶಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚಾಗಿದೆ. ವಿಮಾನ ಪ್ರಯಾಣಿಕರು ಮಾತ್ರವಲ್ಲದೆ, ಹೆಚ್ಚಿನ ಪ್ರಮಾಣದ ಸರಕುಗಳನ್ನು ಸಹ ವಿಮಾನದ ಮೂಲಕ ಸಾಗಿಸಲಾಗುತ್ತಿದೆ. ಪ್ರಸ್ತುತ, ಪ್ರತಿ ವರ್ಷ 35 ಲಕ್ಷ ಮೆಟ್ರಿಕ್ ಟನ್ ಸರಕುಗಳನ್ನು ವಾಯಿನೆಲೆಯಲ್ಲಿ ಸಾಗಿಸಲಾಗುತ್ತದೆ. ಈ ದಶಕದ ಅಂತ್ಯದ ವೇಳೆಗೆ, ಈ ಪ್ರಮಾಣವು 1 ಕೋಟಿ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಾಗುವ ನಿರೀಕ್ಷೆಯಿದೆ. ಇದು ಕೇವಲ ಒಂದು ಅಂಕಿಅಂಶವಲ್ಲ, ಬದಲಾಗಿ ಭಾರತ ಮತ್ತು ಭಾರತದಲ್ಲಿನ ಅಪಾರ ಸಾಧ್ಯತೆಗಳ ಪ್ರತಿಬಿಂಬ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ನಂಬಿದ್ದಾರೆ.

ವಾಯುಯಾನ ಸುರಕ್ಷತೆಯು ಯಾವಾಗಲೂ ಭಾರತದ ಪ್ರಮುಖ ಆದ್ಯತೆಯಾಗಿದೆ ಎಂದು ಪ್ರಧಾನ ಮಂತ್ರಿ ಮೋದಿ ಹೇಳಿದರು. ಭಾರತವು ತನ್ನ ನಿಯಮಗಳನ್ನು ಐಸಿಎಒನ ಜಾಗತಿಕ ಮಾನದಂಡಗಳೊಂದಿಗೆ ಜೋಡಿಸಿದೆ. ಐಸಿಎಒನ ಇತ್ತೀಚಿನ ಸುರಕ್ಷತಾ ಲೆಕ್ಕಪರಿಶೋಧನೆಯು ವಾಯುಯಾನ ಭದ್ರತೆಯನ್ನು ಬಲಪಡಿಸುವಲ್ಲಿ ಭಾರತದ ಪ್ರಯತ್ನಗಳನ್ನು ಗುರುತಿಸಿದೆ. ಏಷ್ಯಾ-ಪೆಸಿಫಿಕ್ ಸಚಿವರ ಸಮ್ಮೇಳನದಲ್ಲಿ ದೆಹಲಿ ಘೋಷಣೆ ಅಂಗೀಕರಿಸುವುದು ಜಾಗತಿಕ ವಾಯುಯಾನ ಶ್ರೇಷ್ಠತೆಗೆ ಭಾರತ ಹೊಂದಿರುವ ಬದ್ಧತೆಗೆ ಮತ್ತಷ್ಟು ಪುರಾವೆಯಾಗಿದೆ ಎಂದು ಅವರು ಎತ್ತಿ ತೋರಿಸಿದರು. ವಿಮಾನ ಪ್ರಯಾಣವು ಎಲ್ಲರಿಗೂ ಪ್ರವೇಶಿಸಬಹುದಾದ, ಕೈಗೆಟುಕುವ ದರಕ್ಕೆ ಲಭ್ಯವಾಗುವ ಮತ್ತು ಸುರಕ್ಷಿತವಾಗಿರುವ ಭವಿಷ್ಯ ನಿರ್ಮಿಸಲು ಪಾಲುದಾರರು ಒಟ್ಟಾಗಿ ಕೆಲಸ ಮಾಡಬೇಕೆಂದು ಪ್ರಧಾನ ಮಂತ್ರಿ ಮೋದಿ ಒತ್ತಾಯಿಸಿದರು.

### ಭಾರತವು ವಿಮಾನ ನಿರ್ವಹಣೆಯ ಜಾಗತಿಕ ಕೇಂದ್ರವಾಗುತ್ತಿದೆ

ನಿರ್ವಹಣೆ, ದುರಸ್ತಿ ಮತ್ತು ಕೂಲಂಕಷ ಪರೀಕ್ಷೆ(ಎಂ.ಆರ್.ಒ.) ವಲಯವು ಭಾರತದಲ್ಲಿ ಉದಯಿಸುತ್ತಿದೆ ಎಂದು ಪ್ರಧಾನ ಮಂತ್ರಿ ಗಮನ ಸೆಳೆದರು. ವಿಮಾನ ನಿರ್ವಹಣೆಯ ಜಾಗತಿಕ ಕೇಂದ್ರವಾಗಲು ಭಾರತವು ಪ್ರಯತ್ನಗಳನ್ನು ವೇಗಗೊಳಿಸುತ್ತಿದೆ. 2014ರಲ್ಲಿ ಭಾರತದಲ್ಲಿ 96 ಎಂ.ಆರ್.ಒ. ಸೌಲಭ್ಯಗಳಿದ್ದವು, ಅವುಗಳೀಗ 154ಕ್ಕೆ ಏರಿಕೆ ಕಂಡಿವೆ. ಆದರೆ ಸ್ವಯಂಚಾಲಿತ ಮಾರ್ಗದ ಅಡಿ 100% ವಿದೇಶಿ ನೇರ ಹೂಡಿಕೆ, ಜಿ ಎಸ್ ಟಿ ಕಡಿತ ಮತ್ತು ತೆರಿಗೆ ತರ್ಕಬದ್ಧಗೊಳಿಸುವ ಕ್ರಮಗಳು ಭಾರತದ ಎಂ.ಆರ್.ಒ. ವಲಯಕ್ಕೆ ಹೊಸ ಆವೇಗ ನೀಡಿವೆ ಎಂದು ಅವರು ಗಮನಿಸಿದರು. 2030ರ ವೇಳೆಗೆ 4 ಶತಕೋಟಿ ಡಾಲರ್ ಮೊತ್ತದ ಎಂ.ಆರ್.ಒ. ಹಬ್ ಸ್ಥಾಪಿಸಲು ಭಾರತ ಹೊಂದಿರುವ ಗುರಿಯನ್ನು ಶ್ರೀ ಮೋದಿ ವಿವರಿಸಿ, ಇದು ದೇಶದ ವಾಯುಯಾನ ಬೆಳವಣಿಗೆಯ ಕಾರ್ಯತಂತ್ರವನ್ನು ಬಲಪಡಿಸುತ್ತದೆ ಎಂದರು.

### 2,000ಕ್ಕೂ ಹೆಚ್ಚು ಹೊಸ ವಿಮಾನಗಳು ಶೀಘ್ರವೇ ಆಕಾಶದಲ್ಲಿ ಹಾರಲಿವೆ

ಅಭಿವೃದ್ಧಿ ಹೊಂದಿದ ಭಾರತದ ಗುರಿ ಮತ್ತು ಭಾರತದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು, ಕೇಂದ್ರ ಸರ್ಕಾರವು ವಿಶ್ವ ದರ್ಜೆಯ ವಿಮಾನ ನಿಲ್ದಾಣ ಮೂಲಸೌಕರ್ಯದಲ್ಲಿ ಹೂಡಿಕೆ ಮಾಡಲು ಒತ್ತು ನೀಡುತ್ತಿದೆ. ಇದರ ಪರಿಣಾಮವಾಗಿ, 2014ರಲ್ಲಿ ದೇಶದಲ್ಲಿ 74 ವಿಮಾನ ನಿಲ್ದಾಣಗಳಿದ್ದವು, ಅವುಗಳ ಸಂಖ್ಯೆ ಇದೀಗ 162ಕ್ಕೆ ಏರಿಕೆ ಕಂಡಿದೆ. ಭಾರತದ ವಿಮಾನಯಾನ ಉದ್ಯಮವು ಬೆಳೆಯುತ್ತಿರುವ ವೇಗವನ್ನು ಇತ್ತೀಚಿನ ದಿನಗಳಲ್ಲಿ, ಭಾರತೀಯ ವಿಮಾನಯಾನ ಕಂಪನಿಗಳು 2,000ಕ್ಕೂ ಹೆಚ್ಚು ಹೊಸ ವಿಮಾನಗಳ ಖರೀದಿಗೆ ಆದೇಶಗಳನ್ನು ನೀಡಿವೆ ಎಂಬ ಅಂಶದಿಂದಲೂ ಅಳೆಯಬಹುದು. ವಿಮಾನಯಾನ ಉದ್ಯಮದಲ್ಲಿನ ಈ ಬದಲಾವಣೆಯು ಭೌಗೋಳಿಕ ಗಡಿಗಳನ್ನು ದಾಟುವುದಲ್ಲದೆ ಸುಸ್ಥಿರತೆ, ಹಸಿರು ಚಲನಶೀಲತೆ ಮತ್ತು ಜಾಗತಿಕ ಮಟ್ಟದಲ್ಲಿ ಸಮಾನ ಪ್ರವೇಶವನ್ನು ಉತ್ತೇಜಿಸುತ್ತದೆ. ಭಾರತದ ವಿಮಾನ ನಿಲ್ದಾಣಗಳ ಪ್ರಸ್ತುತ ವಾರ್ಷಿಕ ನಿರ್ವಹಣಾ ಸಾಮರ್ಥ್ಯ 50 ಕೋಟಿ ಪ್ರಯಾಣಿಕರಾಗಿದ್ದಾರೆ.

**“ಇಂದು ಭಾರತವು ವಿಶ್ವದ 3ನೇ ಅತಿದೊಡ್ಡ ದೇಶೀಯ ವಿಮಾನಯಾನ ಮಾರುಕಟ್ಟೆಯಾಗಿದೆ. ನಮ್ಮ ಉಡಾನ್ ಯೋಜನೆಯ ಯಶಸ್ಸು ಭಾರತೀಯ ನಾಗರಿಕ ವಿಮಾನಯಾನ ಇತಿಹಾಸದ ಸುವರ್ಣ ಅಧ್ಯಾಯವಾಗಿದೆ.**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿ**

### 15%ಗಿಂತ ಹೆಚ್ಚಿನ ಮಹಿಳಾ ಪೈಲಟ್‌ಗಳು

ಭಾರತದ ವಾಯುಯಾನ ವಲಯವು ಎಲ್ಲರನ್ನೂ ಒಳಗೊಂಡ ಅಭಿವೃದ್ಧಿ ಮಾದರಿಯಿಂದ ಬಲಗೊಂಡಿದೆ. ಭಾರತದಲ್ಲಿ 15%ಗಿಂತ ಹೆಚ್ಚಿನ ಪೈಲಟ್‌ಗಳು ಮಹಿಳೆಯರಾಗಿದ್ದಾರೆ. ಇದು ಜಾಗತಿಕ ಸರಾಸರಿಗಿಂತ 3 ಪಟ್ಟು ಹೆಚ್ಚಾಗಿದೆ. ಕ್ಯಾಬಿನ್ ಸಿಬ್ಬಂದಿಯಲ್ಲಿ ಮಹಿಳೆಯರ ಜಾಗತಿಕ ಸರಾಸರಿ ಸುಮಾರು 70% ಆಗಿದ್ದರೆ, ಭಾರತದ ಅಂಕಿಅಂಶ 86%ರಷ್ಟಿದೆ. ಭಾರತದ ಎಂ ಆರ್ ಒ ವಲಯದಲ್ಲಿ ಮಹಿಳಾ ಎಂಜಿನಿಯರ್‌ಗಳು ಜಾಗತಿಕ ಸರಾಸರಿಗಿಂತ ಹೆಚ್ಚಿನವರಾಗಿದ್ದು, ಉದ್ಯಮದಲ್ಲಿ ಹೆಚ್ಚುತ್ತಿರುವ ಮಹಿಳಾ ಭಾಗವಹಿಸುವಿಕೆಯನ್ನು ಇದು ಪ್ರದರ್ಶಿಸುತ್ತದೆ. ●

# ಮಧುಬನಿ ಕಲಾವಿದರ ಗುಂಪಿನಿಂದ ಚಿತ್ರಕಲೆ





*ಮಧುಬನಿ ಕಲೆಯು ರಾಸ್, ಕೊಹ್ಬರ್ ಮತ್ತು ಅಷ್ಟದಳಗಳ ಸಾಂಪ್ರದಾಯಿಕ ಕಲಾ ಪ್ರಕಾರಗಳಿಂದ ಹೊರಹೊಮ್ಮುತ್ತಿದೆ, ಈಗಲೂ ಅದು ಸಮಕಾಲೀನ ಪ್ರಮುಖ ಘಟನೆಗಳನ್ನು ಚಿತ್ರಕಲೆಯ ಮೂಲಕ ದೇಶ ಮತ್ತು ಜಗತ್ತಿನಾದ್ಯಂತ ತನ್ನ ವಿಶಿಷ್ಟ ಗುರುತು ಮೂಡಿಸುತ್ತಿದೆ. ಬಿಹಾರದ ಮಧುಬನಿ ಕಲಾ ಸಾಧಕರು ಮತ್ತು ಮಧ್ಯಪ್ರದೇಶದ ಗೊಂಡ ಕಲಾ ಸಾಧಕರು ರಾಷ್ಟ್ರಪತಿ ಭವನದಲ್ಲಿ 1 ವಾರದ 'ಕಲಾವಿದರ ಸ್ಥಾನಿಕ ಕಾರ್ಯಕ್ರಮ - ಕಲಾ ಉತ್ಸವ'ದಲ್ಲಿ ತಮ್ಮ ಅದ್ಭುತ ಕಲೆಯನ್ನು ಪ್ರದರ್ಶಿಸಿದರು. ಮೇ 26ರಂದು ರಾಷ್ಟ್ರಪತಿ ಭವನದಲ್ಲಿ ನಡೆದ ಕಲಾ ಉತ್ಸವದಲ್ಲಿ ರೂಪಿಸಿದ ವರ್ಣಚಿತ್ರಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ವೀಕ್ಷಿಸಿದರು, ಕಲಾವಿದರನ್ನು ಭೇಟಿಯಾಗಿ, ಭಾರತದ ಪ್ರಮುಖ ಸಾಂಪ್ರದಾಯಿಕ ಕಲಾ ಪ್ರಕಾರಗಳ ಸೃಜನಶೀಲ ಚಿತ್ರಕಲೆಯನ್ನು ಅವರು ಶ್ಲಾಘಿಸಿದರು...*

ಈ ಕಲಾ ಉತ್ಸವದಲ್ಲಿ ಮಧುಬನಿ ಮತ್ತು ಗೊಂಡ ಚಿತ್ರಕಲೆ ಕಲಾವಿದರ ಗುಂಪು ಭಾರತದ ಸಾಂಪ್ರದಾಯಿಕ ಕಲಾ ಪ್ರಕಾರಗಳನ್ನು ಅವುಗಳ ಮೂಲ ರೂಪದಲ್ಲಿ ಪ್ರದರ್ಶಿಸಿತು. ರಾಷ್ಟ್ರಪತಿ ಭವನದಲ್ಲಿ ನಡೆದ ಈ ಕಲಾ ಉತ್ಸವವು ತಲೆಮಾರುಗಳ ವಿವಿಧ ಪ್ರಕಾರದ ಕಲೆಗಳನ್ನು ಸಂರಕ್ಷಿಸಿರುವ ಭಾರತದ ಜಾನಪದ, ಬುಡಕಟ್ಟು ಮತ್ತು ಸಾಂಪ್ರದಾಯಿಕ ಕಲಾವಿದರಿಗೆ ವೇದಿಕೆ ಒದಗಿಸಿತು. 'ಕಲಾವಿದರ ಸ್ಥಾನಿಕ ಕಾರ್ಯಕ್ರಮ - ಕಲಾ ಉತ್ಸವ'ದಲ್ಲಿ, ಮಧ್ಯಪ್ರದೇಶದ ಗೊಂಡ್ ಚಿತ್ರಕಲೆ ಮತ್ತು ಬಿಹಾರದ ಮಧುಬನಿ ಚಿತ್ರಕಲೆಯ ಕಲಾವಿದರು 2025 ಮೇ 20ರಿಂದ 27ರ ವರೆಗೆ ರಾಷ್ಟ್ರಪತಿ ಭವನದಲ್ಲಿ ತಂಗಿದ್ದರು.

**ಗೊಂಡ ಕಲಾವಿದರ ತಂಡದಲ್ಲಿ ದುರ್ಗಾಬಾಯಿ ವ್ಯಾಮ್ ಮತ್ತು ಸುಭಾಷ್ ವ್ಯಾಮ್ ಇದ್ದರು.**
ಗೊಂಡ ಕಲಾವಿದರ ತಂಡದಲ್ಲಿ ದುರ್ಗಾಬಾಯಿ ವ್ಯಾಮ್, ಸುಭಾಷ್ ವ್ಯಾಮ್, ನಂಕುಸಿಯಾ ಶ್ಯಾಮ್, ರಾಮ್ ಸಿಂಗ್ ಉರ್ವೇತಿ, ದಿಲೀಪ್ ಶ್ಯಾಮ್, ಚಂಪಕಾಲಿ, ಹೀರಾಮನ್ ಉರ್ವೆಟಿ ಮತ್ತು ಜಪಾನಿ ಶ್ಯಾಮ್ ಧುರ್ವೆ ಇದ್ದರು. ●



**ರಾಷ್ಟ್ರಪತಿ ಅವರು ಮಧುಬನಿ ಚಿತ್ರಕಲೆಯ ಅನೇಕ ಕಲಾವಿದರನ್ನು ಭೇಟಿ ಮಾಡಿದರು**
ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಧುಬನಿ ಚಿತ್ರಕಲಾ ಕಲಾವಿದರಾದ ಶಾಂತಿ ದೇವಿ, ಅಂಬಿಕಾ ದೇವಿ, ಮನಿಶಾ ಝಾ, ಪ್ರೀತಿ ಕರ್ಣ, ರಂಜನ್ ಪಾಸ್ವಾನ್, ಶಾಂತಿ ದೇವಿ, ಊರ್ಮಿಳಾ ದೇವಿ, ಶ್ರವಣ್ ಪಾಸ್ವಾನ್, ಕುಮಾರಿ ನಳಿನಿ ಶಾ ಮತ್ತು ಮೋತಿ ಕರ್ಣ ಅವರನ್ನು ಭೇಟಿಯಾದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಲಾವಿದರ ಭವಿಷ್ಯದ ಕಲಾ ಪ್ರಯತ್ನಗಳಿಗೆ ಯಶಸ್ಸು ಸಿಗಲಿ ಎಂದು ಶುಭ ಹಾರೈಸಿದರು.

X



PMO India
@PMOIndia

The Chenab and Anji Bridges will serve as gateways to prosperity for Jammu and Kashmir.






Rajnath Singh
@rajnathsingh

भारत आज सिर्फ़ सीमाओं की रक्षा नहीं कर रहा, बल्कि एक ऐसी व्यवस्था खड़ी कर रहा है, जो हमें सामरिक, आर्थिक और तकनीकी दृष्टि से मजबूत बना रही है।

पहले हम रक्षा उपकरणों के लिए पूरी तरह से विदेशों पर निर्भर थे, लेकिन आज भारत डिफेंस के मामले में बड़ी तेज़ी से 'आत्मनिर्भर' बन रहा है।



Amit Shah
@AmitShah

#11YearsOfSeva राष्ट्रीय सुरक्षा की दिशा में भी मील का पत्थर सिद्ध हुए हैं। नक्सलवाद अपनी अंतिम साँसे गिन रहा है, जम्मू-कश्मीर और पूर्वोत्तर में शांति की स्थापना हुई है, भारत अब आतंकवादी हमलों का जवाब आतंकियों के घर में घुस कर देता है। यह मोदी सरकार में भारत की बदलती तस्वीर को दर्शाता है।

मोदी 3.0 में नया भारत रिफॉर्म, परफॉर्म और ट्रांसफॉर्म की शक्ति से विकसित और आत्मनिर्भरता की ओर तेजी से आगे बढ़ रहा है। देशवासियों के जीवन में सकारात्मक परिवर्तन लाकर हर क्षेत्र में नंबर 1 भारत बनाने की यह यात्रा ऐसे ही जारी रहेगी।



Nitin Gadkari
@nitin_gadkari

Under the visionary leadership of PM Shri @narendramodi Ji, India has witnessed a historic transformation in infrastructure. In just 11 years, 18,926 km of roads were built under Bharatmala, and National Highway 🛣️ length rose by 60%—from 91,287 km in 2014 to 1,46,204 km in 2024. With ₹46,000 Cr invested in 35 multimodal logistics parks 🏬, logistics is being revolutionized.

#11YearsOfInfraRevolution



Piyush Goyal
@PiyushGoyal

भारत की Digital क्रांति!

2014 से पहले जहां भारत के विकास को रोकने की मंशा रखने वाले कुछ लोग इस बात का मजाक उड़ाते थे वहीं प्रधानमंत्री @NarendraModi जी की दृढ़ इच्छाशक्ति एवं पुरजोर प्रयासों से यह आज दुनिया के समक्ष सर्वोत्तम उदाहरण प्रस्तुत कर रहा है।

इन 11 वर्षों ने यह सिद्ध कर दिखाया कि भारत अब किसी के रोके, रुकने वाला नहीं है।

#11YearsOfDigitalIndia



Dharmendra Pradhan
@dpradhanbjp

पिछले 11 वर्षों में भारत में एक ऐतिहासिक डिजिटल क्रांति ने आकार लिया है। प्रधानमंत्री श्री @narendramodi जी की दूरदर्शी सोच ने तकनीक को सिर्फ एक सुविधा नहीं, बल्कि करोड़ों देशवासियों के जीवन में उम्मीद और अवसर के रूप में स्थापित किया है।

DBT, UPI, BharatNet, UMANG, DigiLocker, AI for India— ये केवल उपक्रम नहीं, बल्कि उस सशक्त राष्ट्र की गाथा है, जो तकनीक को जनसेवा और जनसशक्तिकरण का सबसे बड़ा माध्यम बना चुका है।

#11YearsOfDigitalIndia

# NDA govt has delivered significant changes in 11 yrs, will do more: PM

TIMES NEWS NETWORK



"Guided by the principle of 'Sabka Saath, Sabka Vikas, Sabka Vishwas, Sabka Prayas', NDA govt has delivered pathbreaking changes with speed, scale and sensitivity.
—PM Modi on X

**New Delhi:** Prime Minister Narendra Modi Monday marked the milestone of him completing 11 years in office, saying the NDA govt, in its three terms, had delivered significant changes, and promising to do more in the rest of his current tenure.

"We are proud of our collective success but at the same time, we look ahead with hope, confidence and a renewed resolve to build a Viksit Bharat," he posted on X.

Modi shared a series of hashtags and social media links, which — while focusing on his govt's initiatives — also represented a pitch for OBCs, tribals, Dalits and women.

A link shared by him noted that 60% of Union ministers were from the SC, ST and OBC categories, a message aimed at burnishing the social justice credentials of his govt amid attempts by opposition parties to paint it as working against their interests. This is the highest representation of these groups in the Union Council of Ministers, it added.

He also said that the NDA govt had redefined the concept of "women-led development".

▸Related report, P 22

# Proud of outreach on terror: PM after meeting MP delegations

7 teams, comprising MPs from across political spectrum, sent to 33 countries starting May 21







PM Narendra Modi interacts with members of the delegations who travelled to more than 30 countries to expose Pakistan's support to cross-border terrorism | EXPRESS

RAJESH KUMAR THAKUR @ New Delhi

PM Narendra Modi on Tuesday met members of the seven multi-party delegations that travelled to over 30 countries in an outreach programme to highlight India's strong stance against terrorism following Operation Sindoor.

The meetings took place at the Prime Minister's residence a day after the NDA government completed 11 consecutive years in power at the Centre. Modi received feedback on the delegations' visits, aimed at exposing Pakistan-sponsored terrorism following the April 22 Pahalgam massacre.

"Met members of the various delegations who represented India in different countries and elaborated on India's commitment to peace and the need to eradicate the menace of terrorism. We are all proud of the manner in which they put forward India's voice," Modi said on X.

The seven multi-party delegations, comprising MPs from across the political spectrum, former ministers, and diplomats, were dispatched to 33 countries starting May 21.

BJP's Ravi Shankar Prasad and Baijyant 'Jay' Panda, Congress' Shashi Tharoor, JD(U)'s Sanjay Jha, Shiv Sena's Shrikant Shinde, DMK's Kanimozhi, and NCP (SP)'s Supriya Sule led the seven delegations to convey India's policy on zero tolerance for terrorism.

Modi was briefed by them about their engagements abroad. The discussions also featured light-hearted moments, particularly during his interactions with Ghulam Nabi Azad and Tharoor.

During their visits, the delegations reaffirmed the nation's commitment to global peace. "The Modi government dispatched these multi-party delegations as a show of national unity in the fight against terrorism," an official said. Leaders such as Tharoor and Asaduddin Owaisi of AIMIM stood out with their powerful speeches condemning terrorism.

Almost all members of the delegations, while visiting the capitals of their assigned countries, forcefully criticised Pakistan and highlighted its role in fostering terrorism against India and other nations. They also informed the international community about Pakistan's link to the Pahalgam terror attack, and the subsequent Operation Sindoor carried out by Indian armed forces.

**Light-hearted moments during Modi briefing**

PM Modi was briefed by the MPs about their engagements abroad, with the discussions being featured light-hearted moments, particularly during his interactions with Ghulam Nabi Azad and Shashi Tharoor. Of the seven multi-party delegations, four were led by MPs from the ruling NDA alliance, including representatives from the JD(U) and the Shiv Sena (Shinde), while the remaining three were headed by opposition MPs.

# Infra revolution boosting 'ease of living', says PM

ARCHIS MOHAN
New Delhi, 11 June



Push for next-gen infrastructure is powered by sustainability and long-term vision, said PM Narendra Modi

The Union government and Bharatiya Janata Party (BJP)-ruled state governments on Wednesday continued to highlight the achievements of the 11 years of the Narendra Modi-led National Democratic Alliance (NDA) dispensation, with the Prime Minister posting on social media details of the "infrastructure revolution" during this period.

"It's been 11 years of infrastructure revolution with outstanding infrastructure being added that has enhanced India's growth trajectory," Modi said on X.

From railways to highways, ports to airports, India's rapidly expanding infrastructure network is boosting "Ease of Living" and enhancing prosperity, he said.

In another post, Modi said: "India's push for next-gen infrastructure is powered by sustainability and long-term vision." It is laying the foundations of a self-reliant India, he said.

In a document prepared by the newly launched Press Information Bureau (PIB) Research, the government also pointed to the efficacy of the Pragati (pro-active governance and timely implementation) platform, which was put in place 10 years ago, in fast-tracking of infrastructure projects.

...ity, such as the threat of Naxalism. In Raipur, Chhattisgarh Chief Minister Vishnu Deo Sai said the PM's target of uprooting Naxalism by March next year is being fulfilled.

In Chhattisgarh, 425 Maoists have been neutralised, 1,443 arrested, 1,388 others have surrendered in the last one-and-a-half years, Sai said. "Our security forces

# PM HIGHLIGHTS TRANSFORMATIVE PROGRESS IN DEFENCE SECTOR

**HT Correspondent**
letters@hindustantimes.com

**NEW DELHI:** Prime Minister Narendra Modi said on Tuesday that the defence sector has undergone significant changes during the 11 years of the National Democratic Alliance (NDA) government, with a clear focus on modernisation and becoming self reliant when it comes to defence production.

"The last 11 years have marked significant changes in our defence sector, with a clear focus on both modernisation and becoming self reliant when it comes to defence production. It is gladdening to see how the people of India have come together with the resolve of making India stronger! #11YearsOfRakshaShakti," Modi said in a post on X.

Modi's remarks comes close on the heels of India's military strikes in Pakistan and Pakistan-occupied Kashmir (PoK) on May 7 under Operation Sindoor — the country's direct response over the April 22 Pahalgam terror attack that claimed 26 lives.

According to MyGovIndia's X post that Modi responded to, India's defence exports soared from ₹1,940 crore in 2014-15 to ₹23,622 in 2024-25. It also said that India unveiled its first indigenous aircraft carrier during the Bharatiya Janata Party (BJP)-led NDA government at the Centre.

"In just 11 years under PM @narendramodi's visionary leadership, India has revolutionized its defence capabili-

# CCEA clears railway projects of ₹6,405 crore in three States

**POSITIVE IMPACT.** They will enhance links for 1,400 villages in Jharkhand, Karnataka, AP

**Our Bureau**
New Delhi



**BETTER CONNECTIVITY.** The projects include Koderma-Barkakana Doubling (133 km), a section of which passes through the coal producing areas of Jharkhand IMRAN NISSAR

The Cabinet Committee on Economic Affairs (CCEA), chaired by Prime Minister Narendra Modi, on Wednesday, approved two Railway projects worth over ₹6,400 crore. The projects include Koderma–Barkakana Doubling (133 km), a section of which passes through the coal producing areas of Jharkhand. Further, it serves

Broadcasting, the increased line capacity will signific-

Andhra Pradesh, will increase the existing network

"The capacity augmentation works will result in addi-

# PM has put country on path of long-term growth, says Vaishnaw

JATIN ANAND
NEW DELHI, JUNE 11

THE BJP on Wednesday highlighted the "transformation in the lives of an average Indian citizen" as well as the strides in both the country's economy and its standing in the global order in the last 11 years of the Narendra Modi-led NDA government at the Centre.

Union Minister Ashwani Vaishnaw gave a presentation on the 11 years of "*seva* (service)", "*sushashan* (good governance)" and "*gareeb kalyan* (welfare of the poor)" under PM Modi's leadership. He said "humongous tasks" had been fulfilled under the Prime Minister's leadership to put the country on the path of "long-term growth".

Union Home Minister Amit Shah, Defence Minister Rajnath Singh, BJP national president Jagat Prakash Nadda, Finance Minister Nirmala Sitharaman, Road Transport and Highways Minister Nitin Gadkari besides national spokespersons and senior party leaders attended the event organised at Bharat Mandapam in the presence of senior editors and journalists from the print media.

The presentation focussed on statistics related to 12 "big picture" achievements in each sector ranging from the welfare of the poor and the marginalised to the welfare of farmers and women's empowerment, ease of living for the middle class, infrastructure development, affordable healthcare and enhancement of India's per capita income from a little over ₹86,000 to ₹2 lakh, among others.

In addition to this, the Union Minister also sought to underscore the changes in the very "vision" of governance undertaken by PM Modi since taking over in 2014 with the welfare of both the nation and its citizens at their core.

"Earlier, there was competition among districts when it came to being declared 'backward', but PM Modi's vision is different; these became not backward but aspirational districts... Under his government, the economy of the very country which enslaved us for 150 years has been surpassed... 'Defence agents', once common in Delhi's corridors, are now a thing of the past," Vaishnaw said.

"Instead of breaking the back of Naxalism, earlier governments used to only acknowledge its presence across what was called the 'Red Corridor'... Article 370 was treated as a given, something that nothing could be done about, but not any more... No other Prime Minister before him made an announcement as crucial to the welfare of our girl children as the provision of sanitary pads at ₹1, (a promise) made from the Red Fort," he said.

Vaishnaw also underlined India's stature as a global leader when it came to the indigenous Unified Payments Interface (UPI), through which digital transactions of an estimated ₹214 lakh crore had been done till January during the 2024-25.

**BJP LISTS WORK OF LAST 11 YEARS**

**INFRASTRUCTURE**
**86** new airports built, 88 destinations connected under UDAN scheme
■ Metro network expanded from 248 km (2014) to 1,013 km (2025)

**WOMEN'S EMPOWERMENT**
**10** crore women mobilised in over 90 lakh SHGs
■ Over 10.33 crore smoke-free kitchens under Ujjwala Yojana

**EASE OF LIVING**
■ Reduction in interest rates and credit-linked subsidy scheme under PM Awas Yojana



Union Minister Ashwini Vaishnaw during a cabinet briefing in New Delhi on Wednesday. Arif Sharma

**HEALTHCARE**
**23** AIIMS, 2,045 medical colleges opened; 780 allopathy, 323 dental and 942 AYUSH institutions
■ Over 1.76 lakh Ayushman Arogya Mandirs saw over 377 crore visits

**INCLUSIVE GROWTH**
■ PM Garib Kalyan Anna Yojana extended, 5 kg of free foodgrains provided per person per month to over 81 crore beneficiaries
■ Har Ghar Jal Yojana: Tap water connections in over 15 crore households
■ Over 10.33 crore LPG connections under Ujjwala Yojana
■ 12 crore toilets under Swachh Bharat Mission

**FARMERS WELFARE**
■ Over 1.8 lakh Kisan Samriddhi Kendras
■ PM-Kisan provides ₹6,000 every year as direct income support to farmers



**ರಾಷ್ಟ್ರೀಯ ವೈದ್ಯರ ದಿನ - ಜುಲೈ 1**

# ಸಮರ್ಪಣೆ, ಕೌಶಲ್ಯ ಮತ್ತು ಅಚಲ ಬದ್ಧತೆಯನ್ನು ಗೌರವಿಸುವುದು

*ವೈದ್ಯರನ್ನು ದೇವರ 2ನೇ ರೂಪ ಎಂದು ಕರೆಯಲಾಗುತ್ತದೆ, ಏಕೆಂದರೆ ಯಾರೊಬ್ಬರ ಜೀವ ಅಪಾಯದಲ್ಲಿದ್ದಾಗ, ಅನಾರೋಗ್ಯ ಅಥವಾ ಅಪಘಾತದಿಂದ ಬಳಲುತ್ತಿರುವಾಗ ಅಥವಾ ಪ್ರೀತಿಪಾತ್ರರನ್ನು ಕಳೆದುಕೊಳ್ಳುವ ಭಯದಲ್ಲಿದ್ದಾಗ ವೈದ್ಯರು ದೇವರಾಗಿ, ಜೀವನದ ಹಾದಿಯನ್ನು ಬದಲಾಯಿಸುತ್ತಾರೆ. ಅವರ ಸಮರ್ಪಣೆ ಯಾವಾಗಲೂ ರೋಗಿಯನ್ನು ಮೊದಲು ಇಡುತ್ತದೆ. ರಾಷ್ಟ್ರೀಯ ವೈದ್ಯರ ದಿನದಂದು, ನಮ್ಮ ವೈದ್ಯರು ನಮಗಾಗಿ ಮತ್ತು ನಮ್ಮ ಪ್ರೀತಿಪಾತ್ರರಿಗಾಗಿ ಮಾಡುವ ಎಲ್ಲದಕ್ಕೂ ನಾವು ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ಈ ದಿನವು ಸ್ವತಂತ್ರ ಭಾರತದಲ್ಲಿ ವೈದ್ಯಕೀಯ ವೃತ್ತಿಯ ಪ್ರವರ್ತಕರಲ್ಲಿ ಒಬ್ಬರಾದ ಮತ್ತು ಶ್ರೇಷ್ಠ ವೈದ್ಯರಾಗಿದ್ದ ಮಹಾನ್ ಡಾ. ಬಿಧಾನ್ ಚಂದ್ರ ರಾಯ್ ಅವರ ಜನ್ಮ ವಾರ್ಷಿಕೋತ್ಸವ ಮತ್ತು ಮರಣ ವಾರ್ಷಿಕೋತ್ಸವವನ್ನು ಸೂಚಿಸುತ್ತದೆ...*



**"ವೈದ್ಯರ ದಿನದ ಶುಭಾಶಯಗಳು. ಇದು ನಮ್ಮ ಆರೋಗ್ಯ ರಕ್ಷಣಾ ಪಡೆಗಳ ಅದ್ಭುತ ಸಮರ್ಪಣೆ ಮತ್ತು ಸಹಾನುಭೂತಿಯನ್ನು ಗೌರವಿಸುವ ದಿನ. ಅವರು ಗಮನಾರ್ಹ ಕೌಶಲ್ಯದಿಂದ ಅತ್ಯಂತ ಸವಾಲಿನ ಸಂಕೀರ್ಣತೆಗಳನ್ನು ನಿಭಾಯಿಸಬಲ್ಲರು. ಭಾರತದಲ್ಲಿ ಆರೋಗ್ಯ ಮೂಲಸೌಕರ್ಯ ಸುಧಾರಿಸಲು ಮತ್ತು ವೈದ್ಯರಿಗೆ ಅರ್ಹವಾದ ವ್ಯಾಪಕ ಗೌರವ ಸಿಗುವಂತೆ ನೋಡಿಕೊಳ್ಳಲು ನಮ್ಮ ಸರ್ಕಾರ ಸಂಪೂರ್ಣ ಬದ್ಧವಾಗಿದೆ."**

***- ನರೇಂದ್ರ ಮೋದಿ, ಪ್ರಧಾನ ಮಂತ್ರಿ***


**NEW INDIA SAMACHAR**
**FORTNIGHTLY**

**RNI No. : DELKAN/2020/78828** **July 1-15, 2025**

RNI Registered No DELKAN/2020/78828, Delhi Postal License No DL(S)-1/3543/2023-25,
WPP NO U(S)-91/2023-25, posting at BPC, Market Road, New Delhi-110001
on 26-30 advance Fortnightly (Publishing Date: June 18, 2025, Pages -44)

**Editor in Chief**
**Dhirendra Ojha**
Principal Director General,
Press Information Bureau, New Delhi

**Published & Printed by:**
**Kanchan Prasad**
Director General, on behalf of
Central Bureau Of Communication

**Published from:**
Room No–278, Central Bureau Of
Communication, 2nd Floor, Soochna Bhawan,
New Delhi -110003

**Printed at**
**Kaveri Print Process Pvt. Ltd.**
**A-104 Sector-65,**
**Noida-201301 U.P.**

Kannada
Vol.6 Issue-1